ಮಂಗನೂರಿನ ಬುದ್ಧಿವಂತರು
ಮತ್ತು
ಇತರ ಕತೆಗಳು

ಪ್ರೊ। ಎಸ್. ಕೆ. ರಾಮಚಂದ್ರ ರಾವ್

ಮಂಗನೂರಿನ ಬುದ್ಧಿವಂತರು

ಮತ್ತು

ಇತರ ಕತೆಗಳು

(ಕೆಲವು ಜಾನಪದ ಕತೆಗಳು)

ವಿದ್ಯಾಲಂಕಾರ
ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

© 1980 ಐಬಿಎಚ್ ಪ್ರಕಾಶನ ಬೆಂಗಳೂರು 560 009

*

ಬೆಲೆ ರೂ. 2-00

*

ಚಿತ್ರಗಳು : ಮನೋಹರ್

*

ಮೊದಲ ಮುದ್ರಣ : 1980 ಪ್ರಕಾಶಕರು: ಪಿ. ಎನ್. ಕಾಮತ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054

Paper used for printing this book was made available by the Government of India at concessional rate

ಮಂಗನೂರಿನ ಬುದ್ಧಿವಂತರು

ತಿಳಿಗೇಡಿಗಳಿಗೆ ತೌರೂರೆಂದು ಮಂಗನೂರಿನ ಪ್ರಸಿದ್ಧಿ. ಅಲ್ಲಿನ ಸಾಮಾನ್ಯಜನ ಹೇಗೋ ತಿಳಿಯದು; ಅರಸರು, ಅಧಿಕಾರಿಗಳು, ಶ್ರೀಮಂತರಂತೂ ಶತಮೂರ್ಖರು. ಹಿಂದೆ ಅಲ್ಲಿ ನಿರ್ಬುದ್ಧಿಯೆಂಬ ಒಬ್ಬ ದೊರೆ ಇದ್ದ; ಅದು ಅವನಿಗೆ ಒಪ್ಪುವ ಹೆಸರು. ಹೊಟ್ಟೆ ಬಿರಿಯುವಷ್ಟು ತಿನ್ನುವುದು, ಗೆದ್ದಲು ಹಿಡಿಯುವವರೆಗೆ ಮಲಗುವುದು, ಎಚ್ಚರವಾಗಿದ್ದ ಸ್ವಲ್ಪ ಹೊತ್ತು ಹರಟೆ ಹೊಡೆಯುವುದು, ಇಷ್ಟು ಅವನ ದಿನಚರಿ.

ಅವನ ಬುದ್ಧಿಶಕ್ತಿಯೋ, ಪರಮೇಶ್ವರನಿಗೇ ಪ್ರೀತಿ! ಸರಸ್ವತಿಯನ್ನು ಸ್ವಪ್ನದಲ್ಲೂ ಮೆಚ್ಚಿಕೊಂಡವನಲ್ಲ. ವಿದ್ಯೆಗೂ ಅವನಿಗೂ ಸಾವಿರ ಯೋಜನ ಅಂತರ. ಅವನ ಅಧಿಕಾರಿಗಳು ಅವನಿಗೆ ಅನುರೂಪರಾದವರು; ಅರಸು ಹೇಳಿದ್ದಕ್ಕೆಲ್ಲ ಹೌದೆಂದು, ಹೂಂ ಎಂದು, ತಲೆದೂಗುವ ಗೊಂಬೆಗಳು. ತಲೆಯ ಪ್ರಯೋಜನ ಹಿಂದಿನ ಎಂಟು ಜನ್ಮದಲ್ಲೂ ಅರಿಯರು. ಮಡೆಯರಲ್ಲೂ ಆರಿಸಿ ಬಂದವರು ಅವರು.

ಅರಮನೆಯಲ್ಲಿ ಒಂದು ಸಂಪ್ರದಾಯ—ದಿನಾ ಬೆಳಗಾಗುತ್ತಲೇ ಶಾಸ್ತ್ರಿಗಳೊಬ್ಬರು ಬಂದು ಪಂಚಾಂಗವನ್ನು ಓದಿ ಹೋಗುವುದು. ಒಂದು ದಿನ ಹೀಗೆ ಪಂಚಾಂಗ ಶ್ರವಣ ಆಗುತ್ತಿದ್ದಾಗ ದೊರೆ ನಿರ್ಬುದ್ಧಿಯ ಲಕ್ಷ್ಯ ಆ ಕಡೆ ಹೋಯಿತು. ಶಾಸ್ತ್ರಿಗಳು ಅರ್ಥ ಬಿಡಿಸುತ್ತ "ಇವತ್ತು ಖರ

ಸಂವತ್ಸರದ ಮಾಘಮಾಸದಲ್ಲಿ ಏಕಾದಶಿ ತಿಥಿ. ಇಂದು ಹನ್ನೊಂದು ಗಳಿಗೆಗೆ ಏಕಾದಶಿ ಹೋಗಿ ದ್ವಾದಶಿ ಬರುತ್ತದೆ. ಇಪ್ಪತ್ತಾರೂಕಾಲು ಗಳಿಗೆಗೆ ರಾಹುಕಾಲ" – ಎಂದು ಹೇಳುತ್ತಿದ್ದರು. ದೊರೆ ಇದ್ದಕ್ಕಿದ್ದಂತೆ "ಎಲಾ ಶಾಸ್ತ್ರಿಗಳೇ! ನಿಲ್ಲಿಸಿ! ಏನದು ಏಕಾದಶಿ ಹೋಗುವುದು, ದ್ವಾದಶಿ ಬರುವುದು? ಎಲ್ಲಿಗೆ ಹೋಗುವುದು? ಎಲ್ಲಿಂದ ಬರುವುದು? ನನಗೆ ತಿಳಿಯದಂತೆ ನನ್ನ ರಾಜ್ಯದಲ್ಲಿ ಏನೇನೋ ಆಗುತ್ತಿದೆ! ಅಯ್ಯಾ ಮಂತ್ರಿ, ಈ ಏಕಾದಶಿ ಹೋಗಲೂಕೂಡದು, ದ್ವಾದಶಿ ಬರಲೂಕೂಡದು. ಇವತ್ತು ಅಪ್ಪಣೆ ಮಾಡಿದ್ದೇನೆ. ನೋಡಿಕೋ!" ಎಂದು ಗುಡುಗಿದ. ಮಂತ್ರಿ ನಡುಗುತ್ತ ಎದ್ದು "ಅಪ್ಪಣೆ, ಮಹಾಸ್ವಾಮಿ! ಅದನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ಟೊಂಕ ಬಗ್ಗಿಸಿ ಕೈಮುಗಿದು ಹೇಳಿದ. ಉಳಿದ ಅಧಿಕಾರಿಗಳೂ ತಮಗೆ ಸಾಧ್ಯವಾದಷ್ಟು ಬಗ್ಗಿ ತಲೆದೂಗಿದರು.

ಶಾಸ್ತ್ರಿಗಳು ಮಾತ್ರ—"ಇಲ್ಲ ಪ್ರಭೂ, ಏಕಾದಶಿ, ದ್ವಾದಶಿ ಎರಡೂ ತಿಥಿಗಳು. ಅವು ಹೋಗಿ ಬರುವುದು ನಮ್ಮ ಕಣ್ಣಿಗೆ ಕಾಣುವುದಿಲ್ಲ, ಅದನ್ನು ತಪ್ಪಿಸುವುದೂ ಆಗದು" ಎಂದು ವಿನಯದಿಂದ ನಿವೇದಿಸಿಕೊಂಡರು. ದೊರೆ ಇನ್ನೂ ಸಿಟ್ಟಿಗೆದ್ದು "ಅಯ್ಯಾ ಹಾರವ! ಬಾಯಿ ಮುಚ್ಚು! ಅಧಿಕ ಪ್ರಸಂಗಿತನ ಮಾಡಬೇಡ! ಒಂದು ವರ್ತಮಾನ ಕೊಟ್ಟಿದ್ದೀಯೆ. ಅಷ್ಟು ಸಾಕು, ಹೊರಡು. ಕಣ್ಣಿಗೆ ಕಾಣಿಸುವ, ತಪ್ಪಿಸುವ ವಿಚಾರಕ್ಕೂ ನಿನಗೂ ಸಂಬಂಧವಿಲ್ಲ!" ಎನ್ನಲು ಕೆಲವು ಅಧಿಕಾರಿಗಳು ಬಂದು ಶಾಸ್ತ್ರಿಗಳನ್ನು ದರದರನೆ ಎಳೆದು ಹೊರಗೊಯ್ದು "ಏನಯ್ಯಾ ಶಾಸ್ತ್ರಿ, ಶುದ್ಧ ಮಂಕನಂತೆ ಮಾತನಾಡುತ್ತೀಯಲ್ಲ! ನಮ್ಮ ರಾಜ

ರಿಗೆ ಏಕಾದಶಿ, ದ್ವಾದಶಿಗಳನ್ನು ಹೋಗಿ ಬರದಂತೆ ತಡೆಯು ವುದು ಅಸಾಧ್ಯವೇ? ಈ ರಾಜ್ಯದಲ್ಲಿ ಅವರು ಸರ್ವಸ್ವತಂತ್ರರು. ಯಾರನ್ನು ಏನು ಬೇಕಾದರೂ ಮಾಡಿಯಾರು!" ಎಂದು ಬುದ್ಧಿ ಹೇಳಿದರು.

ದೊರೆ—"ಅಯ್ಯಾ ಮಂತ್ರಿ, ಆ ಬ್ರಾಹ್ಮಣ ಹೇಳಿದು ದನ್ನು ಕೇಳಿದೆಯಾ? ಏಕಾದಶಿ, ದ್ವಾದಶಿಗಳು ಕಣ್ಣಿಗೆ ಕಾಣವುದಿಲ್ಲವಂತೆ; ಅಂದರೆ ಮಾಯಾವಿಗಳು ಎಂದರ್ಥ. ಬಗೆಬಗೆಯ ರೂಪ ಧರಿಸಿ ಕಣ್ಣು ಮರೆಸಿ ಓಡಾಡುವ ಜನ. ಬಹಳ ಜಾಗರೂಕತೆಯಿಂದ ಅವರನ್ನು ಹಿಡಿಯಬೇಕು. ನಗರದ ಎಲ್ಲ ಕಡೆಯೂ ಸರ್ಪಕಾವಲು ಇರಿಸಿ, ಹನ್ನೊಂದು ಗಳಿಗೆಯವರೆಗೆ ಒಂದು ಪ್ರಾಣಿಯೂ ಹೊರಹೋಗದಂತೆ ನೋಡಿಕೋ! ನನಗೆ ತಿಳಿಯದಂತೆ ಹೋಗುವ ಆ ಏಕಾದಶಿಗೆ ತಕ್ಕ ಶಿಕ್ಷೆ ಮಾಡೋಣ!" ಎಂದು ಹೇಳಿದ. ಮಂತ್ರಿ ದೇಶಾ ವರದ ನಗೆ ನಕ್ಕು ಆಗಲೆಂದು ತಲೆದೂಗಿ "ಹನ್ನೊಂದು ಗಳಿಗೆಯವರೆಗೆ ಗಾಳಿಯೂ ಹೊರಗೆ ಹೋಗದಂತೆ ಭದ್ರ ಪಡಿಸುತ್ತೇನೆ" ಎಂದು ಆಶ್ವಾಸನೆ ಕೊಟ್ಟ. ದೊರೆಯ ಚಾತುರ್ಯಕ್ಕೆ, ಮಂತ್ರಿಯ ಧೈರ್ಯಕ್ಕೆ ಉಳಿದವರೆಲ್ಲ ತಲೆ ದೂಗಿದನಂತರ ಅಂದಿನ ಸಭೆ ಮುಗಿಯಿತು.

*

ಇಷ್ಟು ಬುದ್ಧಿವಂತನಾದ ದೊರೆಯ ಬಳಿ ಸೇವೆ ಮಾಡು ವುದು ತನ್ನ ಪೂರ್ವಸುಕೃತವೆಂದು ಸಂತೋಷಪಟ್ಟ ಮಂತ್ರಿ ಅಂದು ತನ್ನ ಪಾಲಿಗೆ ಬಂದ ಮಹತ್ಕಾರ್ಯದ ವಿವರಗಳನ್ನು ಮನಸ್ಸಿನಲ್ಲೇ ಮಥನ ಮಾಡುತ್ತಾ ಮನೆಗೆ ಬಂದ. ಬಂದ ವನೇ ಅಧಿಕಾರಿಗಳನ್ನೆಲ್ಲ ಕರೆಸಿ ಒಬ್ಬೊಬ್ಬರಿಗೆ ಒಂದೊಂದು

ಕೆಲಸದ ಭಾಗವನ್ನು ಹಂಚಿಕೊಟ್ಟು ಏಕಾದಶಿ ಬಂಧನಕ್ಕೆ ಅಣಿಮಾಡಿದ. ಊರಿನಲ್ಲೆಲ್ಲ ಕೋಲಾಹಲ ; ಅಧಿಕಾರಿಗಳಿಗೆಲ್ಲ ಸಂಭ್ರಮ ; ಮಂತ್ರಿಯ ಉತ್ಸಾಹ ; ದೊರೆಯ ಆಸಕ್ತಿ–ಕೇಳುವುದೇನು ? ಎಲ್ಲರೂ ಎಲ್ಲ ಕೆಲಸವನ್ನೂ ಬಿಟ್ಟು ಏಕಾದಶಿಯನ್ನು ಪತ್ತೆಹಚ್ಚಿ ಹಿಡಿಯಲು ಸಿದ್ಧರಾದರು. ಊರಿನ ಸುತ್ತ ಕಾವಲನ್ನು ಇಟ್ಟರು. ಇದ್ದ ಸಂದಿ–ಗೊಂದಿಗಳನ್ನೆಲ್ಲ ಶೋಧಿಸಿದರು, ಮನೆಯ ಹಿತ್ತಲು ಬಾಗಿಲುಗಳನ್ನೆಲ್ಲ ಮುಚ್ಚಿ ಚಾವಣಿಯ ಸೂರುಗಳನ್ನೆಲ್ಲ ಭದ್ರಮಾಡಿದರು ; ಚರಂಡಿಯ ಬಾಗಿಲಿಗೆ ಕಲ್ಲು ಇಟ್ಟರು. ಮಾಯಾವಿಯಾದ ಏಕಾದಶಿ ಎಲ್ಲಿಂದ, ಯಾವ ರೂಪದಲ್ಲಿ ಹೊರಗೆ ಹಾರುವನೋ ನೋಡಿಯೇ ಬಿಡೋಣವೆಂದು ನಿರ್ಧರಿಸಿದರು.

ಒಂಬತ್ತು ಗಳಿಗೆಯಾಯಿತು, ಹತ್ತು ಗಳಿಗೆಯಾಯಿತು. ಶಾಸ್ತ್ರಿಗಳು ಹೇಳಿದ ಗಳಿಗೆ ಇನ್ನೇನು ಬರುವುದರಲ್ಲಿದೆ. ಎಲ್ಲರೂ ಎಲ್ಲ ಕಡೆಯೂ ಕಣ್ಣು ಮಿಟುಕಿಸದೆ, ಗಟ್ಟಿಯಾಗಿ ಉಸಿರಾಡದೆ ತವಕದಿಂದ ನೋಡುತ್ತ ನಿಂತಿದ್ದಾರೆ. ಮಂತ್ರಿ – "ಹುಷಾರು ! ಜೋಕೆ ! ಏಕಾದಶಿ ಎಲ್ಲಾದರೂ ಹೋಗಿಬಿಟ್ಟಾನು !" ಎಂದು ಕೂಗಿದ. ಸುಮ್ಮನಿದ್ದ ಜನ ಇನ್ನೂ ಸ್ತಬ್ಧರಾದರು. ಅಷ್ಟರಲ್ಲಿ ಒಂದು ಇಲಿಮರಿ ಎಲ್ಲಿಂದಲೋ ಬಂದು ಮಂತ್ರಿಯ ಪಕ್ಕದಲ್ಲಿ ಪುಣಕ್ಕೆಂದು ಹಾರಿತು. ಮಂತ್ರಿ ಉದ್ವೇಗದಿಂದ "ಓ ! ಏಕಾದಶಿ ಇಲಿಯ ರೂಪದಲ್ಲಿ ಹೋಗುತ್ತಿದ್ದಾನೆ ! ಹಿಡಿಯಿರಿ ! ಹಿಡಿಯಿರಿ ! ಬಿಡಬೇಡಿ !" ಎಂದು ಕೂಗಿಕೊಂಡ. "ಹಿಡಿಯಿರಿ ಹಿಡಿಯಿರಿ" ಎಂದು ಜನರು ಕೂಗಿದರು. ಕೂಗಿದವರು ಹಾರಿದರು, ಹಾರಿದವರು ಕುಣಿದಾಡಿದರು. ಆ ಗದ್ದಲ ಗಲಾಟೆಗಳ ನಡುವೆ ಇಲಿಮರಿ

ರಸ್ತೆಯ ಅಂಚಿನಲ್ಲಿದ್ದ ಸಂದಿಯ ಒಳಗೆ ಓಡಿ ಮಾಯ ವಾಯಿತು.

"ಶುದ್ಧ ಮುಟ್ಠಾಳರು! ಕಣ್ಣಿಗೆ ಕಂಡ ಏಕಾದಶಿಯನ್ನು ಹಿಡಿಯದೆ ಬಿಟ್ಟರು!" ಎಂದು ಮಂತ್ರಿ ಅರ್ಭಟಿಸಿದ. "ಹೇಡಿಗಳು! ಎಂದು ಅಧಿಕಾರಿಗಳು ಅಬ್ಬರಿಸಿದರು. "ಅನಾಹುತ ವಾಯಿತು!" ಎಂದು ಜನ ನೊಂದುಕೊಂಡರು. ಈ ಪ್ರಮಾದದ ಸುದ್ದಿ ಅದೇ ಧ್ಯಾನದಲ್ಲಿದ್ದ ದೊರೆಯ ಕಿವಿ ಮುಟ್ಟಿತು. ಸಿಡಿಲು ಬಡಿದವನಂತೆ ದೊರೆ ದಡದಡನೆ ಜನ ನೆರೆದ ಕಡೆ ಓಡಿಬಂದು ಕೆಂಡದಂತೆ ಸಿಡಿಸಿಡಿಯಾದ. ಜನರಲ್ಲಿ ಇನ್ನೊಂದು ಕೋಲಾಹಲ. ನಿರ್ಬುದ್ಧಿಯ ಆಗ್ರಹ ವೆಂದರೆ ಸಾಮಾನ್ಯವೆ! ಸೂರ್ಯನೇ ಸೊರಗಿಯಾನು, ಚಂದ್ರ ತತ್ತರಿಸಿಯಾನು. ಕೋಪದ ಕಾವು ಆರಿದ ಮೇಲೆ ದೊರೆಗೆ ಒಂದು ಉಪಾಯ ಹೊಳೆಯಿತು. "ಏಕಾದಶಿ ಈ ಸಣ್ಣ ಬಿಲದಲ್ಲಿ ಹೋದದ್ದು ಒಳ್ಳೆಯದೇ ಆಯಿತು. ಬಿಲವನ್ನು ಅಗೆದು ಹಿಂಬಾಲಿಸಬಹುದು. ಇಂದಲ್ಲ ನಾಳೆ, ಇಲ್ಲಲ್ಲ ಮುಂದೆ ಸಿಕ್ಕಿಯೇ ಸಿಕ್ಕುವನು. ಇನ್ನು ಅವನನ್ನು ಹಿಡಿಯುವ ಕೆಲಸ ನಾನೇ ನೋಡಿಕೊಳ್ಳುತ್ತೇನೆ. ತಾನು ಮಾಡುವುದು ಉತ್ತಮ ಎಂದು ಶಾಸ್ತ್ರವೇ ಹೇಳುತ್ತದೆ. ನಾನು ಯಶಸ್ವಿಯಾಗಿ ಹಿಂತಿರುಗಿ ಬರುವವರೆಗೆ ಮಂತ್ರಿಯೇ ರಾಜ್ಯಭಾರ ನೋಡಿಕೊಳ್ಳುತ್ತಿರಲಿ" ಎಂದು ನಿರ್ಧಾರ ಮಾಡಿ ಅಲ್ಲೇ ಗುದ್ದಲಿ ಹಿಡಿದು ಬಿಲವನ್ನು ಅಗೆಯಲು ತೊಡಗಿದ. ದೊರೆಯ ದಿವ್ಯವಾದ ನಿರ್ಧಾರಕ್ಕೆ ಜನ ತಲೆದೂಗಿದರು. ಮಂತ್ರಿಯೂ ತಲೆ ತೂಗಿದ.

*

ಹನ್ನೊಂದನೆಯ ಗಳಿಗೆಯಲ್ಲಿ ತನ್ನ ಅಜಾಗರೂಕತೆ ಗಾಗಿ ಮಂತ್ರಿ ತುಂಬ ಕಳವಳಗೊಂಡ. ಎಂಥ ಕರ್ತವ್ಯ ಲೋಪ! ಆದರೆ ದೊರೆಗೆ ಸಮಾಧಾನ ಮೂಡಿಸಲು ಇನ್ನೂ ಒಂದು ಅವಕಾಶ ಉಂಟಲ್ಲ; ರಾಜ್ಯಭಾರ ಚೆನ್ನಾಗಿ ಮಾಡಿ ದರೆ ಹಿಂದಿರುಗಿ ಬರುವ ದೊರೆ ಸಂತೋಷಪಟ್ಟಾನು. ಹೀಗೆ ತನ್ನನ್ನು ತಾನು ಸಂತೈಸಿಕೊಂಡು ಮಂತ್ರಿ ಅರಮನೆಯ ಕಡೆ ನಡೆದ.ಇತ್ತ ದೊರೆ ತನ್ನ ಇನ್ನೂರು ಅಧಿಕಾರಿಗಳೊಂದಿಗೆ ಏಕಾದಶಿಯ ಅನ್ವೇಷಣೆಯಲ್ಲಿ ತೊಡಗಿದ. ಬಿಲವನ್ನು ಅಗೆ ದರೆ ಅದು ನಿಂತೀತೆ? ಹೋಯಿತು, ಹೋಯಿತು, ಒಂದು ಫರ್ಲಾಂಗು ದೂರದಷ್ಟು ಅಗೆದಾಯಿತು. ದೊರೆ ಉಸ್ಸಪ್ಪಾ ಎಂದು ಸೊಂಟ ಎತ್ತಿ ನಿಂತ; ಅಧಿಕಾರಿಗಳೂ ನಿಂತರು. ಆ ಹೊತ್ತಿಗೆ ಸರಿಯಾಗಿ ಒಂದು ಹೆಗ್ಗಣ ಓಡಿತು. ದೊರೆ "ಓ! ಏಕಾದಶಿ ಈಗ ಹೆಗ್ಗಣವಾಗಿ ಓಡಿ ಹೋಗುತ್ತಿದ್ದಾನೆ! ಹಿಡಿ ಯಿರಿ!" ಎಂದು ಕೂಗಿದ. ಸರಿ, ಎಲ್ಲರೂ ಹೆಗ್ಗಣವನ್ನು ಅಟ್ಟಸಿಕೊಂಡು ಓಡಿದರು. ಅದು ಅವರನ್ನು ಒಂದು ಮೈಲಿ ಯಷ್ಟು ದೂರ ಓಡಿಸಿ, ಒಂದು ಸಂದಿನಲ್ಲಿ ಸೇರಿಕೊಂಡಿತು. ಆ ಸಂದನ್ನು ಅಗೆದು ನೋಡುವ ಕೆಲಸ ಶುರುವಾಯಿತು.

ಹೀಗೆ ಅರಸನೂ ಅವನ ಅಧಿಕಾರಿಗಳೂ ಇದ್ದ ಬದ್ದ ಬಿಲವನ್ನೆಲ್ಲ ಅಗೆದರು. ಕಂಡ ಕಂಡ ಪ್ರಾಣಿಗಳ ಹಿಂದೆಲ್ಲ ಓಡಿದರು. ದಿನವೆಲ್ಲ ಅಗೆಯುವುದು, ಓಡುವುದು; ರಾತ್ರಿ ಮಲಗುವುದು—ಹೀಗೆ ಒಂದು ವಾರ ಕಳೆಯಿತು. ದೊರೆ ಊರಿನಿಂದ ಮೈಲಿಗಳ ದೂರ ಸಾಗಿದ್ದ; ಏಕಾದಶಿ ಮಾತ್ರ ಸಿಗಲಿಲ್ಲ. ದೊರೆಯೂ ಏಕಾದಶಿಯನ್ನು ಹಿಡಿಯದೆ ಊರಿಗೆ ಮರಳುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ.

ಈ ಕಡೆ ಊರಿನಲ್ಲಿ ಮಂತ್ರಿ ರಾಜ್ಯಭಾರ ಮಾಡಲು ಆರಂಭಿಸಿದ. ಊರಿನ ಜನ ಎಲ್ಲ ಬೆಪ್ಪರು ; ಅರಸರೆಂದರೆ ಅವರಿಗೆ ದೈವಭಕ್ತಿ. ಹೀಗಾಗಿ ಅಲ್ಲಿ ಆಡಳಿತ ನಡೆಸುವುದು ಕಷ್ಟದ ಕೆಲಸವಾಗಿರಲಿಲ್ಲ. ಮಂತ್ರಿಯೂ ಮಿತಿಮೀರಿದ ಶ್ರದ್ಧೆಯಿಂದ ಜನಗಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ. ರಾಜ್ಯ ಸುಭಿಕ್ಷವಾಗಿಯೇ ಇತ್ತು. ಅರಮನೆಯ ರಾಣೀವಾಸದ ಮೇಲಂತೂ ಮಂತ್ರಿಯ ಶ್ರದ್ಧೆ, ಗೌರವ, ಆಸಕ್ತಿಗಳು ಹೇಳ ತೀರದು. ಅವರು ನಿರ್ಬುದ್ಧಿ ಮಹಾರಾಜನ ಪ್ರಿಯ ವರ್ಗ ದವರಲ್ಲವೇ ? ಹೀಗೆ ಒಂದು ತಿಂಗಳು ಕಳೆಯಿತು.

ಎರಡನೇ ತಿಂಗಳ ಮೊದಲನೆಯ ಪಕ್ಷದ ಒಂದು ರಾತ್ರಿ ಮಂತ್ರಿ ತನ್ನ ಮನೆಯ ಅಂಗಳದಲ್ಲಿ ಕೂತಿದ್ದಾನೆ. ಚೊಕ್ಕ ಭೋಜನ ಮುಗಿಸಿ ತಾಂಬೂಲ ಜಗಿಯುತ್ತಾ ಚಂದ್ರನನ್ನು ಪ್ರೀತಿಯಿಂದ ನೋಡುತ್ತಿದ್ದಾನೆ.ಆ ಹೊತ್ತಿಗೆ ರಾಣೀವಾಸದ ಊಳಿಗದವಳೊಬ್ಬಳು ಬಡಬಡನೆ ಓಡಿಬಂದಳು. ಮಂತ್ರಿಯ ಎದೆ ದಡದಡನೆ ಬಡಿದುಕೊಂಡಿತು. ನಿರ್ವಿಣ್ಣನಾಗಿ ನಡು ಗುತ್ತ ಮಂತ್ರಿ "ಏನಾಯಿತು, ರಾಣಿ ಸುಖವಾಗಿದ್ದಾಳೆ ತಾನೆ? ಏನು ಬಂದೆ? ಬೇಗ ಹೇಳು" ಎಂದು ಕೇಳಿದ. ಊಳಿಗದ ವಳು ನಿಟ್ಟುಸಿರು ಬಿಡುತ್ತ "ಮಹಾಸ್ವಾಮಿ, ಏನು ಹೇಳಲಿ? ನಮ್ಮ ಮೇಲೆ ಭಗವಂತನಿಗೆ ಏಕೆ ನಿರ್ದಯವೊ ಕಾಣೆ? ದಿನಾ ಮಧ್ಯಾಹ್ನದ ಮೇಲೆ ರಾಣಿ ಅಮ್ಮನವರು ಸುಖವಾಗಿ ನಿದ್ದೆ ಮಾಡುತ್ತಾರೆ. ಅರಮನೆಯೇ ಮುರಿದು ಬಿದ್ದರೂ ಅವ ರಿಗೆ ಎಚ್ಚರವಾಗುವುದಿಲ್ಲ. ಆದರೆ ಇಂದು ಅವರು ನಿದ್ದೆ ಮಾಡುತ್ತಿದ್ದಾಗ ಗಾಳಿ ಬೀಸುತ್ತಾ ನಿಂತಿದ್ದೆ. ಎಂದಿನಂತೆ ಗಟ್ಟಿಯಾಗಿ ಗೊರಕೆ ಹೊಡೆಯುತ್ತಿದ್ದ ರಾಣಿ ಅಮ್ಮನವರು ಇದ್ದಕ್ಕಿದ್ದಂತೆ ನಾಲ್ಕು ಘಂಟೆ ಮೂರು ನಿಮಿಷಕ್ಕೆ 'ಹಾ!'

ಎಂದು ಕೂಗಿ ಹೊರಳಿದರು. ಮತ್ತೆ ಗೊರಕೆ ಆರಂಭ ವಾಯಿತು. ಅಮ್ಮನವರು ನಿದ್ದೆಯಲ್ಲಿ ಎಂದೂ 'ಹಾ' ಎಂದು ದನ್ನೇ ನಾವು ಕೇಳಿಲ್ಲ. ಇಂದೇಕೆ ಹೀಗಾಯಿತೋ ತಿಳಿ ಯದು !" ಎಂದು ಹೇಳಿದಳು.

ಮಂತ್ರಿಯ ಮುಖ ಹುಚ್ಚಿಟ್ಟಿತು. ಉಸಿರು ಬಿಡುವುದೇ ಕಷ್ಟವಾಯಿತು. ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡು "ಅಯ್ಯೋ, ಏನು ದುರದೃಷ್ಟ ! ಸಾಮಾನ್ಯವಾಗಿ ಹಾವು ಕಡಿ ದರೇ 'ಹಾ' ಎಂದು ಕೂಗುವುದು. ರಾಣಿಗೆ ಹಾವು ಕಡಿದಿದೆ ಯೆಂಬುದು ಖಂಡಿತ ! ಆದರೆ ಯಾವ ಹಾವು ? ಎಲ್ಲಿ ಕಡಿ ದಿದೆಯೆಂಬುದನ್ನು ನಿರ್ಧರಿಸಬೇಕು. ಯಾವುದಕ್ಕೂ ಅವ ಸರಪಡಬಾರದು. ರಾತ್ರಿಯಂತೂ ಚಿಕಿತ್ಸೆ ಮಾಡಲೇಬಾರದು. ಇದು ಶಾಸ್ತ್ರದಲ್ಲಿ ಹೇಳಿದೆ. ನಾಳೆ ಬೆಳಗಾಗುತ್ತಲೇ ವೈದ್ಯ ರಿಗೆ ಹೇಳಿ ಕಳುಹಿಸುತ್ತೇನೆ. ಅಲ್ಲಿಯುವರೆಗೆ ರಾಣಿಯನ್ನು ಸುಖವಾಗಿ ನೋಡಿಕೋ !" ಎಂದು ಹೇಳಿ ಅವಳನ್ನು ಕಳು ಹಿಸಿದ. ಮಂತ್ರಿಗೆ ರಾತ್ರಿಯೆಲ್ಲ ನಿದ್ದೆ ಬಾರದು. ತಾನು ಆಡ ಳಿತ ನೋಡಿಕೊಳ್ಳುತ್ತಿದ್ದಾಗ ರಾಣಿಗೆ ಹಾವು ಕಡಿಯಿತಲ್ಲ; ನಿರ್ಬುದ್ಧಿ ಬಂದ ಮೇಲೆ ಕಡಿಯಬಾರದಾಗಿತ್ತೆ ? ಹಾವಿಗೆ ಅಷ್ಟು ಅವಸರ ಏನು ? ರಾಣಿ ಸತ್ತರೆ ಚಿಂತೆಯಿಲ್ಲ, ದೊರೆ ಏನಂದಾನು ?

ಅಂತೂ ಬೆಳಕು ಹರಿಯುವುದೇ ತಡ, ಮಂತ್ರಿ ಇಬ್ಬರು ಸೇವಕರನ್ನು ಊರಿನ ವಿಖ್ಯಾತ ವೈದ್ಯನ ಬಳಿಗೆ ಅಟ್ಟಿದ. ಹಾವು ಕಡಿದವರಿಗೆ ಚಿಕಿತ್ಸೆ ಮಾಡುವುದರಲ್ಲಿ ಆ ವೈದ್ಯನ ಪ್ರತಾಪ ಆ ಕಡೆಯಲ್ಲೆಲ್ಲ ಮನೆಮಾತಾಗಿತ್ತು. ಆದಿಶೇಷನ ವಿಷವನ್ನೇ ಇಂಗಿಸುವಷ್ಟು ಅವನ ಪ್ರತಿಭೆ ! ಆದರೆ ಎಷ್ಟು ಪ್ರತಿಭೆ ಇದ್ದರೇನು, ಅವನು ಆಂದು ಊರಿನಲ್ಲಿರಲಿಲ್ಲ;

ಹಿಂದಿನ ಸಂಜೆ ನೆರೆಯೂರಿಗೆ ಹೊರಟದ್ದ. ವೈದ್ಯನಿಗಾಗಿ ಬಂದಿದ್ದ ಮಂತ್ರಿಯ ಸೇವಕರು ಹಾಗೇ ಹಿಂದಿರುಗುವುದುಂಟೆ? ಸರಿ, ಆ ವೈದ್ಯನ ಮಗನನ್ನೇ ಕರೆದೊಯ್ದುರು. ಅವನಿಗೆ ವೈದ್ಯ ಬರದು, ಆದರೆ ವೈದ್ಯನ ಮಗ ಅಲ್ಲ ಎನ್ನಲಾದೀತೇ? ಮಂತ್ರಿಯ ನಿರ್ಬಂಧ ಬೇರೆ. ಮರುದಿನ ತಮ್ಮ ತಂದೆ ಹಿಂತಿರುಗುತ್ತಾರೆಂದು ಹೇಳಿದರೂ ಮಂತ್ರಿಯ ಆತುರ. ಕೊನೆಗೆ ಮಗ–ವೈದ್ಯ ಹೇಳಿದ, "ಸ್ವಾಮಿ, ನಮ್ಮ ತಂದೆ ಹೀಗೆ ಎಂದೋ, ಯಾರಿಗೋ ಹೇಳಿದ್ದು ನೆನಪಿದೆ. ವಿಷ ತಲೆಗೆ ಏರಿದರೆ ಪ್ರಾಣ ಉಳಿಯದು ಎಂದು. ಆದ್ದರಿಂದ ರಾಣಿಯ ತಲೆಯನ್ನು ಉಳಿದ ಶರೀರದಿಂದ ಬೇರೆ ಇರಿಸಿದರೆ ಪ್ರಾಣ ಉಳಿಯುವ ಸಂಭವ ಉಂಟು. ನಾಳೆ ಬೆಳಿಗ್ಗೆ ನಮ್ಮ ತಂದೆ ಹೇಗೂ ಬರುತ್ತಾರೆ, ಚಿಕಿತ್ಸೆ ಮಾಡುತ್ತಾರೆ. ಅಲ್ಲಿಯವರೆಗೆ ರಾಣಿಗೆ ಕಷ್ಟವಾಗದಂತೆ ಅವಳ ತಲೆಯನ್ನು ಬೇರ್ಪಡಿಸಿ ದೂರ ಇರಿಸಿ."

ಮಂತ್ರಿಗೆ ತುಂಬ ಸಂತೋಷವಾಯಿತು. ಎಷ್ಟಾದರೂ ಪ್ರಸಿದ್ಧ ವೈದ್ಯನ ಮಗನಲ್ಲವೆ? ರಕ್ತದಲ್ಲಿ ಬಂದ ಪ್ರತಿಭೆ ಎಲ್ಲಿ ಹೋಗುತ್ತದೆ? ವಯಸ್ಸಿನಲ್ಲಿ ಚಿಕ್ಕವನಾದರೇನು? ಸಲಹೆ ಉತ್ತಮವಾದದ್ದು. ಸರಿ, ಮಂತ್ರಿಯ ಅಪ್ಪಣೆ, ಊಳಿಗದವರ ಆದರ, ಅಧಿಕಾರಿಗಳ ಆಸಕ್ತಿ, ಮಹಾಜನರ ರಾಜಭಕ್ತಿ–ರಾಣಿಯನ್ನು ಉಳಿಸಲು ಒಂದೇ ಉಪಾಯ— ಅವಳ ತಲೆಯನ್ನು ದೇಹದಿಂದ ಬೇರ್ಪಡಿಸುವುದು! ಸಲಹೆ ಕಾರ್ಯಗತವೂ ಆಗಿಬಿಟ್ಟಿತು!

*

ಬೆಳಕು ಹರಿಯಿತು. ವೈದ್ಯ ಊರಿಗೆ ಹಿಂತಿರುಗಿದ. ಮಗ ಜಂಬದಿಂದ ಹೇಳಿದ ಸುದ್ದಿಯನ್ನು ಕೇಳಿ ಕುಸಿದು

ಬಿದ್ದ. ಮಂಗನೂರಿನ ನೀರು ಕುಡಿದಿದ್ದರೂ ಆ ವೈದ್ಯನ ಬುದ್ಧಿ ಅಷ್ಟು ಕದಡಿರಲಿಲ್ಲ. ಆದ ಪ್ರಮಾದದ ಪ್ರಮಾಣ ಅವನಿಗೆ ತಟ್ಟನೆ ಅರಿವಾಯಿತು. ಇಂಥ ಮಗ ತನಗಿರುವ ನೆಂದು ದುಃಖವೂ ಆಯಿತು. ಆದರೆ ಮಾಡುವುದೇನು? ತನ್ನ ತಲೆಯನ್ನು ತಪ್ಪಿಸಿಕೊಳ್ಳುವುದು ಬುದ್ಧಿವಂತಿಕೆ. ಸ್ನಾನ ಮಾಡಿ ರಾಜಸಭೆಗೆ ತಕ್ಕ ಉಡುಪು ಧರಿಸಿ ಔಷಧಿಯ ಪೆಟ್ಟಗೆ ಹಿಡಿದು ವೈದ್ಯ ರಾಣೀವಾಸಕ್ಕೆ ಬಂದ. ಮಂತ್ರಿ ಅವನ ಬರವನ್ನೇ ಇದಿರು ನೋಡುತ್ತಿದ್ದ. ವೈದ್ಯ ನೇರವಾಗಿ ರಾಣಿಯನ್ನು ಮಲಗಿಸಿದ್ದ ಕೋಣೆಗೆ ಬಂದವನೇ "ಅಯ್ಯೋ, ಸರ್ವನಾಶವಾಯಿತು! ದೇಹದಿಂದ ತಲೆಯನ್ನು ಬೇರ್ಪಡಿಸಿದ್ದು ಸರಿ! ಆದರೆ ತಲೆಯನ್ನು ಇನ್ನೂ ಸ್ವಲ್ಪ ದೂರ ಇಡಬೇಕಾಗಿತ್ತು. ಈಗ ವಿಷ ರಕ್ತದ ಮೂಲಕ ಹರಿದು ತಲೆಯನ್ನು ಸೇರಿಬಿಟ್ಟದೆ! ಊಳಿಗದವರ ಅಚಾತುರ್ಯ! ಈಗ ಸ್ವಯಂ ಧನ್ವಂತರಿಯೇ ಬಂದರೂ ವಿಷವನ್ನು ಇಳಿಸಲಾರ!" ಎಂದು ಹೇಳಿ ಅಳುವ ನಾಟಕ ಮಾಡಿದ. ಇಡೀ ಅರಮನೆಯೇ ಅಳಲು ಮೊದಲಿಟ್ಟಿತು. ಮಂತ್ರಿ ಬಿದ್ದುಬಿದ್ದು ಅತ್ತ. ಅಧಿಕಾರಿಗಳು ಬಿಕ್ಕಿಬಿಕ್ಕಿ ಅತ್ತರು. ಮಹಾಜನರೂ ಬೇಕಾದಷ್ಟು ಅತ್ತರು.

ಎಷ್ಟು ಹೊತ್ತು ಅಳಲಾದೀತು? ಕಡೆಗೆ ಮಂತ್ರಿ "ಇನ್ನು ಅತ್ತೇನು ಪ್ರಯೋಜನ? ರಾಣಿಯಂತೂ ತೀರಿಕೊಂಡಳು. ರಾಜ ಏಕಾದಶಿಯ ಅನ್ವೇಷಣೆಯಲ್ಲಿದ್ದಾನೆ; ಆ ಹಾಳು ಏಕಾದಶಿಯೋ ಇನ್ನೂ ಸಿಕ್ಕಿಲ್ಲ. ಅವನು ಸಿಗದೆ ರಾಜ ಬರುವಂತಿಲ್ಲ. ಅಂದಮೇಲೆ ಶವ ಸಂಸ್ಕಾರ ನಮ್ಮದೇ ಕೆಲಸ. ಸಾಯುವುದು ಸುಲಭ, ಬದುಕಿರುವವರಿಗೆ ತಾನೆ ಕಷ್ಟ? ಇನ್ನು ಶವವನ್ನು ದಹನ ಮಾಡುವ ಪ್ರಯತ್ನ"

ಎಂದು ಅಧಿಕಾರಿಗಳಿಗೆ ಹೇಳಿದ. ಅವರೂ ಅಳು ನಿಲ್ಲಿಸಿ ಮುಂದೇನು ಮಾಡುವುದೆಂದು ಚರ್ಚಿಸಲಾರಂಭಿಸಿದರು. ದಿನವೆಲ್ಲ ಚರ್ಚೆ ನಡೆದು ಕಡೆಗೆ "ರಾಣಿಯನ್ನು ಸಾಮಾನ್ಯ ಸ್ಮಶಾನದಲ್ಲಿ ಎಲ್ಲರಂತೆ ಸುಡುವುದು ಸರಿಯಲ್ಲ. ಆಕೆಯ ಸ್ಥಾನ, ಗೌರವಕ್ಕೆ ತಕ್ಕಂತೆ, ಆಕೆ ತೀರಿಕೊಂಡ ಸ್ಥಳದಲ್ಲೇ ದಹನ ಮಾಡುವುದು ತಕ್ಕುದು" ಎಂದು ತೀರ್ಮಾನಿಸಿದರು. ಮಂತ್ರಿಯೂ "ಅದು ಸರಿಯಾದ ಸಲಹೆ. ರಾಣಿಯನ್ನು ಅವಳ ಅನುಮತಿಯಿಲ್ಲದೆ ಅಲ್ಲಿ ಇಲ್ಲಿ ಒಯ್ಯಬಾರದು. ಈಗ ಆಕೆಯನ್ನು ನಾಲ್ಕಾರು ಜನ ಮುಟ್ಟಿ ಅರಮನೆಯಿಂದ ಹೊರ ಗೊಯ್ದರೆ ರಾಜರು ಏನಂದಾರು" ಎಂದು ಒಪ್ಪಿಕೊಂಡ.

ಹೀಗೆ ಎಲ್ಲರೂ ಒಪ್ಪಿ, ಆ ಕೋಣೆಯಲ್ಲೇ ಚಿತೆ ನಿರ್ಮಿಸಿ ರಾಣಿಯ ಕಳೇಬರಕ್ಕೆ ಬೆಂಕಿಯಿಟ್ಟರು! ತೇಗ, ಗಂಧ, ದೇವ ದಾರು ಮರದ ದಿಮ್ಮಿಗಳನ್ನೇ ಚಿತೆಗೆ ಒಡ್ಡಿ ತಂತಮ್ಮ ಮರ್ಯಾದೆ ತೋರಿಸಿದರು. ಅಷ್ಟರಲ್ಲಿ ಅರಮನೆಯ ಮೂಲೆ ಮೂಲೆಯಿಂದ ಉರಿ ಏಳಲಾರಂಭಿಸಿತು. ಆದರೆ ಚಿತೆಯನ್ನು ಶಮನ ಮಾಡುವುದು ಶಾಸ್ತ್ರಕ್ಕೆ ವಿರುದ್ಧವಲ್ಲವೇ? ಕಳೇಬರ ಪೂರ್ತಿಯಾಗಿ ಬೂದಿಯಾಗುವವರೆಗೆ ಕಾಯಬೇಕು. ಅರ ಮನೆ ಉರಿದುಬಿದ್ದರೇನಂತೆ, ಬೇರೆ ಅರಮನೆ ಕಟ್ಟಿಸ ಬಹುದು. ಆದರೆ ಸರಿಯಾಗಿ ಸುಡಲು ರಾಣಿಯ ಬೇರೆ ಒಂದು ಶವವನ್ನು ತರಲಾದೀತೆ? ಹೀಗೆಂದು ತರ್ಕಮಾಡಿ ಮಂತ್ರಿ ಅರಮನೆ ಸಂಪೂರ್ಣವಾಗಿ ಉರಿದು ಬೀಳುವುದನ್ನು ನೋಡಿದ.

ಬೆಂಕಿಗೆ ಅರಮನೆಯೇನು, ಅದರ ನೆರ ಮನೆಯೇನು? ಸ್ವಲ್ಪ ಹೊತ್ತಿನಲ್ಲೇ ಊರಿನ ಅರ್ಧಭಾಗ ಯಜ್ಞೇಶ್ವರನ ವಶದಲ್ಲಿತ್ತು. ಬೆಂಕಿ ಇಷ್ಟು ಪ್ರಬಲವಾದಮೇಲೆ ಆರಿಸು

ವುದು ಹೇಗೆ? ಕುಶಲಬುದ್ಧಿಯ ಮಂತ್ರಿಗೆ ತಟ್ಟನೆ ಒಂದು ಯೋಚನೆ ಹಾಯಿತು. ಊರಿನ ಮಗ್ಗುಲಲ್ಲಿ ಹೇಗೂ ದೊಡ್ಡ ಕೆರೆ ಇದೆ. ಅದರ ನೀರು ಊರಿಗೆ ನುಗ್ಗದಿರಲೆಂದು ತೂಬು ಮುಚ್ಚಿದೆ. ಆ ತೂಬುಗಳನ್ನು ಈಗ ತೆಗೆದುಬಿಟ್ಟ ರಾಯಿತು. ನೀರು ತಾನಾಗಿ ಊರಿನೊಳಕ್ಕೆ ಬಂದು ಬೆಂಕಿ ಯನ್ನು ಆರಿಸುತ್ತದೆ. ಊರಿನ ಜನರಿಗೆ ಕಷ್ಟವೂ ತಪ್ಪು ತ್ತದೆ. ಸರಿ, ಮಂತ್ರಿಯ ತಲೆಗೆ ಹೊಳೆದ ಯೋಚನೆಯನ್ನು ಕಾರ್ಯಗತ ಮಾಡುವ ನಿರ್ಧಾರ ಅಧಿಕಾರಿಗಳದ್ದು. ಕೆರೆಗೆ ಬಲವಾಗಿ ನಿಲ್ಲಿಸಿದ್ದ ತೂಬುಗಳನ್ನು ಬಲವಂತದಿಂದಲೇ ತೆಗೆದದ್ದೂ ಆಯಿತು. ಕೆರೆಯ ನೀರು ಭೋ ಎಂದು ರಭಸ ದಿಂದ ಊರಿನೊಳಗೆ ನುಗ್ಗಿತು. ಬೆಂಕಿ ಏನೋ ಆರಿತು ನಿಜ, ಆದರೆ ಊರಿನ ಮುಕ್ಕಾಲು ಭಾಗ ನೀರಿನಿಂದ ಕೊಚ್ಚಿ ಹೋಯಿತು. ಮಂಗನೂರಿನ ನೂರಾರು ಬುದ್ಧಿವಂತರು ಅಂದು ಪ್ರಾಣ ಬಿಟ್ಟರು, ಅನೇಕ ಮನೆ-ಮಠಗಳು ಉರುಳಿ ದವು. ಅದೃಷ್ಟವಶಾತ್ ಮಂತ್ರಿ ಮತ್ತು ಅಧಿಕಾರಿಗಳು ಪಾರಾದರು.

*

ಮಂತ್ರಿ ನಡೆದ ಪ್ರಸಂಗಗಳನ್ನೆಲ್ಲ ಆಲೋಚನೆ ಮಾಡು ತ್ತಿದ್ದಾಗ ಅವನಿಗೆ ಒಂದು ಯೋಚನೆ ಹೊಳೆಯಿತು. ಜರು ಗಿದ ವಿದ್ಯಮಾನಗಳನ್ನು ದೊರೆಗೆ ತಿಳಿಸಿದರೆ ಹೇಗೆ ಎಂದು. ಸರಿ, ಯೋಚನೆ ಬಂದದ್ದೇ ತಡ, ಅಲ್ಲೇ ಕೂತು ದೊಡ್ಡ ವರದಿಯೊಂದನ್ನು ತಯಾರಿಸಿದ. ಅದರಲ್ಲಿ ರಾಣಿ 'ಹಾ!' ಎಂದುದರಿಂದ ಮೊದಲುಮಾಡಿ ಮಂತ್ರಿಯ ಕತ್ತಿನವರೆಗೆ ಕೆರೆಯ ನೀರು ಬಂದುದರವರೆಗೆ ಎಲ್ಲ ವಿವರಗಳೂ ಇದ್ದವು.

ವರದಿ ದೊರೆಯನ್ನು ಮುಟ್ಟಬೇಕಲ್ಲ? ಮಂತ್ರಿಯ ಬಳಿ ಆಪ್ತರಾದ ಇಬ್ಬರು ಸೇವಕರು—ಕೊಂಡಯ್ಯನಾಯಕ, ಮಿರಾನ್‌ಸಾಬಿ. ಆದರೆ ಇವರಿಬ್ಬರಲ್ಲೂ ಮಾತ್ಸರ್ಯ, ಸ್ಪರ್ಧೆ, ದೊರೆಗೆ ವರದಿಯನ್ನು ಕೊಂಡೊಯ್ಯುವ ಗೌರವ ತನ್ನದಾಗಬೇಕೆಂದು ಒಬ್ಬೊಬ್ಬರಿಗೂ ಬಯಕೆ. ಆದರೆ ಮಂತ್ರಿ ಹೇಗೋ ಮಿರಾನ್‌ಸಾಬಿಯನ್ನೇ ಕರೆದು ಅವನಿಗೆ ಕೆಲಸ ಒಪ್ಪಿಸಿದ.

ಮಿರಾನ್‌ಸಾಬಿಗೆ ಎಲ್ಲೂ ಇಲ್ಲದ ಸಂತೋಷ. ವರದಿಯನ್ನೊಪ್ಪಿಸುವ ಕೆಲಸ ತನ್ನ ಪಾಲಿಗೆ ಬಂತೆಂದಲ್ಲ, ಕೊಂಡಯ್ಯನಾಯಕನಿಗೆ ಬರಲಿಲ್ಲವೆಂದು! ಮೊದಲನೆಯ ದಿನ ಓಡೋಡಿ ದಾರಿ ಸವೆಸಿದ; ಸಂಜೆಯಾಗುವಲ್ಲೇ ದಣಿದು ಮರವೊಂದರ ಕೆಳಗೆ ಮಲಗಿದ. ಆಗ ಒಂದು ಅಚಾತುರ್ಯ ನಡೆಯಿತು. ಅದು ಕಂಗಾಲನಗರಕ್ಕೆ ಹೋಗುವ ದಾರಿ. ಅಲ್ಲಿನ ರಾಜನಿಗೆ ಕ್ಷೌರ ಮಾಡಲೆಂದು ಅರಮನೆಯ ಕ್ಷೌರಿಕ ಆ ದಾರಿಯಲ್ಲೇ ನಡೆದು ಹೋಗುತ್ತಿದ್ದ. ಮಲಗಿದ್ದ ಮಂಗನೂರಿನ ಮಿರಾನ್‌ಸಾಬಿಯನ್ನು ನೋಡಿ ಅವನಿಗೆ ಏನನ್ನಿಸಿತೋ ಏನೋ, ಅಲ್ಲೆ ತನ್ನ ಹಡಪವನ್ನು ಇಟ್ಟು ಕ್ಷೌರದ ಸಾಮಾನನ್ನು ಬಿಚ್ಚಿದ. ಕಂಗಾಲನಗರದ ದೊರೆ ಇವನು ಎಷ್ಟು ಹರಿತವಾದ ಕತ್ತಿಯಿಂದ ಕ್ಷೌರ ಮಾಡಿದರೂ ಬಯ್ಯುತ್ತಿದ್ದ; ಕ್ಷೌರಿಕನಿಗೆ ತನ್ನ ಕಲೆಯಲ್ಲೇ ಸಂದೇಹ ಬಂದಿತ್ತು. "ನೋಡೋಣ. ಈ ಮಲಗಿರುವ ಮಡ್ಡಿಗೆ ಎಚ್ಚರವಾಗದಂತೆ ಅವನ ಗಡ್ಡವನ್ನು ಬೋಳಿಸುತ್ತೇನೆ. ಅವನು ಏಳದಿದ್ದರೆ ನಾನು ಚತುರನಾದ ಕ್ಷೌರಿಕನೆಂದು ಸಿದ್ಧವಾಗುತ್ತದೆ" ಎಂದುಕೊಂಡು ಮಿರಾನ್‌ಸಾಬಿಯ ಹುಲುಸಾದ ಗಡ್ಡವನ್ನು ಪೂರ್ತಿಯಾಗಿ ಬೋಳಿಸಿ

ಅವನ ಮೀಸೆಯನ್ನು ತಿರುಗಿಸಿ, ಅವನ ಹಣೆಯ ಮೇಲೆ ಗಂಧದ ಬೊಟ್ಟನಿಟ್ಟು ಅವನ ಮುಂದೆ ಒಂದು ಕನ್ನಡಿಯನ್ನೂ ನಿಲ್ಲಿಸಿ ತನ್ನ ದಾರಿ ಹಿಡಿದು ಮುಂದೆ ನಡೆದ. ಗಡ್ಡವಿಲ್ಲದ ಕೆನ್ನೆ, ತಿರುವಿದ ಮೀಸೆ, ಗಂಧದ ಬೊಟ್ಟು ಇವು ಕೊಂಡಯ್ಯನಾಯಕನ ಮುಖದ ಲಕ್ಷಣಗಳು. ಸರಿ, ಮಿರಾನ್‌ಸಾಬಿ ಎದ್ದವನೇ ನೋಡುತ್ತಾನೆ, ಮುಂದೆ ಕನ್ನಡಿ, ಅದರಲ್ಲಿ ಮುಖವೂ ಕಾಣುತ್ತಿದೆ ! ಮಿರಾನ್‌ಸಾಬಿಗೆ ಎಲ್ಲಿಲ್ಲದ ಕೋಪ ಬಂತು. "ಎಲಾ ಮಂತ್ರಿ, ಇಷ್ಟು ಅನ್ಯಾಯ ಮಾಡುತ್ತೀಯಾ ? ನೆನ್ನೆಯವರೆಗೆ ವರದಿಯನ್ನು ಕೊಂಡೊಯ್ಯುವವನು ನಾನೇ ಎಂದಿದ್ದೆ. ಈಗ ನೋಡಿದರೆ ನಾನಲ್ಲ ! ಕೊಂಡಯ್ಯನಾಯಕ ! ಮೊದಲು ನನ್ನನ್ನು ಆ ಕೆಲಸಕ್ಕೆ ನಿಯಮಿಸಿ ಈಗ ಕೊಂಡಯ್ಯನನ್ನು ಕಳುಹಿಸಿದ್ದೀಯಾ; ಇರಲಿ, ದೊರೆಯ ತನಕ ದೂರು ಹೇಗೂ ಇದೆ" ಎಂದುಕೊಂಡು ಮುಂದೆ ನಡೆದ.

ತಾನು ಕೊಂಡಯ್ಯನಾಯಕನೆಂದುಕೊಂಡು ಮಿರಾನ್‌ಸಾಬಿ ಕಡೆಗೆ ಮಂಗನೂರಿನ ಅರಸು ನಿರ್ಬುದ್ಧಿ ಇದ್ದಲ್ಲಿಗೆ ತಲುಪಿ ಮಂತ್ರಿಯು ವರದಿಯನ್ನು ಒಪ್ಪಿಸಿದ. ವರದಿಯ ತೂಕ, ಅದರಲ್ಲಿ ನಮೂದಿಸಿದ ವಿವರಗಳ ರೀತಿಯನ್ನು ನೋಡಿ ದೊರೆಗೆ ತುಂಬ ಸಂತೋಷವಾಯಿತು. ಮಂತ್ರಿಯ ಕರ್ತವ್ಯನಿಷ್ಠೆಯನ್ನು ಮೆಚ್ಚಿಕೊಂಡ. ಆದರೆ ಮಿರಾನ್‌ಸಾಬಿ ಸುಮ್ಮನಿರಬೇಕಲ್ಲ ? ಮಂತ್ರಿ ತನಗೆ ಮಾಡಿದ ಅನ್ಯಾಯವನ್ನು ದೊರೆಯ ಮುಂದೆ ಹೇಳಿಕೊಂಡ. ಮೊದಲು ಮಿರಾನ್‌ಸಾಬಿಗೆ ಕೆಲಸ ಒಪ್ಪಿಸಿ ನಂತರ ಕೊಂಡಯ್ಯನಾಯಕನನ್ನು ಕಳುಹಿಸುವುದು ಯಾವ ನ್ಯಾಯ ? ಪಕ್ಷಪಾತಿಯಾದ ದೊರೆಗೆ ಸಿಟ್ಟು ಬಂತು. "ಇಂಥವನು ಮಂತ್ರಿ

ಯಾಗಿರಲು ಯೋಗ್ಯನಲ್ಲ. ಹೋಗು ! ನೀನೆ ಮಂಗನೂರಿನ ಮಂತ್ರಿಯಾಗಿರು" ಎಂದು ಅಪ್ಪಣೆ ಮಾಡಿದ. ಸಂತೋಷ ದಿಂದ ಮಿರಾನ್‌ಸಾಬಿ ಸಲಾಮು ಮಾಡಿ ಹಿಂತಿರುಗಿದ. ಆದರೆ ದಾರಿಯಲ್ಲಿ ಬರುತ್ತ ಅವನಿಗೆ ದೊಡ್ಡ ಶಂಕೆಯೊಂದು ಒದಗಿತು."ದೊರೆ ಮಂತ್ರಿಯನ್ನಾಗಿ ಮಾಡಿದುದು ಯಾರನ್ನು ಮಿರಾನ್‌ಸಾಬಿಯನ್ನೋ ಕೊಂಡಯ್ಯನಾಯಕನನ್ನೋ? ಆ ಶಂಕೆ ನಮ್ಮ ಬುದ್ಧಿವಂತನಿಗೆ ಬಗೆಹರಿಯಲೇ ಇಲ್ಲ !

ಇಷ್ಟೆಲ್ಲ ಅವಾಂತರಗಳು ನಡೆಯುತ್ತಿದ್ದರೂ ಏಕಾದಶಿ ಮಾತ್ರ ಸಿಗಲೇ ಇಲ್ಲ. ಅರಸನೂ ಅವನ ಪರಿವಾರದವರೂ ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಏಕಾದಶಿಯನ್ನು ಹುಡುಕಲು ಮೊದಲುಮಾಡಿ ಆಗಲೇ ಒಂದು ವರ್ಷವಾ ಗಿತ್ತು. ಆದರೆ ಏಕಾದಶಿ ಸಿಗದೆ ದೊರೆ ಊರಿಗೆ ಹಿಂತಿರುಗು ವಂತಿಲ್ಲ. ಈ ವಿಚಿತ್ರವಾದ ವ್ಯಾಪಾರವನ್ನು ಕೇಳಿ, ಕಂಗಾಲ ನಗರದ ಪುರೋಹಿತನೊಬ್ಬನಿಗೆ ಅಯ್ಯೋ ಎನಿಸಿತು. ಹೇಗಾ ದರೂ ಈ ಮಡ್ಡಿಯನ್ನು ಊರಿಗೆ ಸಾಗಿಸಬೇಕೆಂಬ ತವಕ ಉಂಟಾಯಿತು. ಅವನು ಒಂದು ಉಪಾಯ ಮಾಡಿದ.

ಮರುದಿನ ಒಂದು ಪಲ್ಲಕ್ಕಿಯನ್ನು ಬಾಡಿಗೆಗೆ ಕೊಂಡು ಹತ್ತು ಜನ ಸೇವಕರನ್ನೂ ಗೊತ್ತುಮಾಡಿಕೊಂಡು ಮಂಗ ನೂರಿನ ದೊರೆ ಬಿಟ್ಟಿದ್ದ ಬೀಡಿನ ಮುಂದೆ ಮೆರವಣಿಗೆಯಲ್ಲಿ ಹೋದ. ಮುಂದೆ ಮಂಗಳವಾದ್ಯ, ಹಿಂದೆ ಪರಾಕು, ಪಕ್ಕ ದಿಂದ ಚಾಮರ – ಈ ವೈಭವವನ್ನು ನೋಡಿ ನಿರ್ಬುದ್ಧಿಯ ಕುತೂಹಲ ಕೆರಳಿತು. ತನ್ನ ಊಳಿಗದವನನ್ನು ಕಳುಹಿಸಿ ಪಲ್ಲಕ್ಕಿಯ ಒಡೆಯನನ್ನು ಕರೆಸಿಕೊಂಡ. ಅವನ ಪರಿವಾರ ದವರು ಅರಸನಿಗೆ "ಸ್ವಾಮಿ, ಒಳಗಿರುವವರು ಏಕಾದಶಿ ಎಂಬ ಹೆಸರಿನ ಪಂಡಿತರು, ತ್ರಿಕಾಲಜ್ಞರು" ಎಂದು ಮೆಲು

ದನಿಯಲ್ಲಿ ನುಡಿದರು. ಒಡನೆಯೇ ನಿರ್ಬುದ್ಧಿ ಅವನ ಮುಂದೆ ಅಡ್ಡಬಿದ್ದು "ಸ್ವಾಮಿ, ಏಕಾದಶಿಯವರೇ! ಇಂದು ಸುದಿನ. ತಮ್ಮನ್ನು ಕಾಣುವ ಸುಯೋಗ ನನ್ನ ಪೂರ್ವ ಜನ್ಮದ ಪುಣ್ಯದಿಂದ ಸಂದಿತು. ತಮ್ಮ ಹೆಸರಿನ ಮಾಯಾವಿಯೊಬ್ಬ ನನ್ನ ರಾಜ್ಯದಿಂದ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ. ಅವನನ್ನು ಹಿಡಿಯಲು ಒಂದು ವರ್ಷದಿಂದ ಒದ್ದಾಡುತ್ತಿದ್ದೇನೆ. ತಾವು ತ್ರಿಕಾಲಜ್ಞರಂತೆ. ಆ ಪಾಪಿ ಈಗ ಎಲ್ಲಿದ್ದಾನೆ, ದಯಮಾಡಿ ತಿಳಿಸುವಿರಾ?" ಎಂದು ಬೇಡಿಕೊಂಡ. ಕಂಗಾಲನಗರದ ಪುರೋಹಿತ ಎರಡು ನಿಮಿಷ ಕಣ್ಣು ಮುಚ್ಚಿ, ನಂತರ "ಅಯ್ಯಾ, ಸತ್ಪುರುಷ. ನೀನು ಮಂಗನೂರು ಬಿಟ್ಟಮೇಲೆ ಈಗಾಗಲೇ ಏಕಾದಶಿ ಇಪ್ಪತ್ತುನಾಲ್ಕು ಬಾರಿ ಅಲ್ಲಿಗೆ ಬಂದು ಹೋಗಿದ್ದಾನೆ. (ಹೌದು, ಒಂದು ವರ್ಷದಲ್ಲಿ ಇಪ್ಪತ್ನಾಲ್ಕು ಏಕಾದಶಿ ತಾನೆ?) ಪ್ರತಿ ತಿಂಗಳೂ ಎರಡು ಬಾರಿ ಮಂಗನೂರಿಗೆ ಬಂದೇಬರುತ್ತಾನೆ. ಆದರೆ ಅವನು ಅಸುರ, ಅವನನ್ನು ಮಾನವರು ಹಿಡಿಯಲು ಸಾಧ್ಯವಿಲ್ಲ" ಎಂದು ಗಂಭೀರವಾಗಿ ನುಡಿದ.

ದೊರೆಯ ಮನಸ್ಸು ಎಷ್ಟೋ ಹಗುರವಾಯಿತು. ಏಕಾದಶಿಯ ಅನ್ವೇಷಣೆಯನ್ನು ಅಷ್ಟಕ್ಕೇ ನಿಲ್ಲಿಸಿ ಮಂಗನೂರಿಗೆ ಹಿಂತಿರುಗಿದ. ಅಲ್ಲಿಯ ಜನಗಳ ಸಂತೋಷ ಹಿಡಿಸಲಾರದಷ್ಟು.

ರಾಣಿಯ ಬೊಜ್ಜು ಕರಗಿತು

ಸಿಂಧ್ ಪ್ರಾಂತ್ಯದಲ್ಲಿ ಹಿಂದೆ ಒಬ್ಬ ರಾಜನಿದ್ದ. ಆ ರಾಜನಿಗೆ ಏಕೋ ತೆಳುವಾಗಿರುವ ಜನರನ್ನು ಕಂಡರೆ ಆಗದು! ತನ್ನ ರಾಜ್ಯದಲ್ಲಿ ಎಲ್ಲರೂ ಗಟ್ಟಿಮುಟ್ಟಾಗಿ, ದಪ್ಪದಪ್ಪನಾಗಿಯೇ ಇರಬೇಕೆಂದು ಅವನ ಇಷ್ಟ. ಅವನು ಹೇಗೂ ರಾಜನಲ್ಲವೇ? ಸರಿ. ಒಂದು ಆಜ್ಞೆಯನ್ನೇ ಹೊರಡಿಸಿದ-ಎಲ್ಲ ಪ್ರಜೆಗಳೂ ಪ್ರಯತ್ನಪಟ್ಟು ದಪ್ಪನಾಗಬೇಕೆಂದು. ತೆಳುವಾಗಿರುವವರು ದಂಡ ತೆರಬೇಕಾಯಿತು, ಪಾಪ.

ಸುಮ್ಮಸುಮ್ಮನೆ ದಂಡ ಯಾರು ತೆರುತ್ತಾರೆ? ಎಲ್ಲರೂ ಮಿತಿಮೀರಿ ತಿಂದು, ಕೆಲಸ ಮಾಡದೆ, ದಪ್ಪನಾಗಲು ಹವಣಿಸಿದರು. ಸಿಂಧೀ ಹಲ್ವದ ವ್ಯಾಪಾರ ಹೆಚ್ಚಾಯಿತು. ಜನ ಬರುಬರುತ್ತ ಊದಲಾರಂಭಿಸಿದರು. ರಾಜ ಮೊದಲೇ ದಪ್ಪನಾಗಿದ್ದ, ಈಗಂತೂ ಇನ್ನಷ್ಟು ಗುಂಡುಗುಂಡಾದ. ಆ ರಾಜನಿಗೆ ಒಬ್ಬಳೇ ಮಗಳು. ಅವಳೂ ಮಣಗಟ್ಟಲೆ ಸಿಂಧೀ ಹಲ್ವ ತಿಂದು ಕುಂಬಳಕಾಯಿಯಂತೆ ಹಿಗ್ಗಿದಳು. ದಪ್ಪನಾದರೆ ಸುಖವೆ? ಆ ಹುಡುಗಿ ಏಳಲೂ, ಕೂಡಲೂ, ನಡೆಯಲೂ ಆಗದಷ್ಟು ದಪ್ಪವಾಗಿಬಿಟ್ಟಳು! ನಡೆಯದೆ, ದೇಹ ಬಗ್ಗಿಸದೆ ಉಂಡದ್ದು ಅರಗುವುದು ಹೇಗೆ?

ಬೊಜ್ಜು ಮಿತಿಮೀರಿ ಬೆಳೆದು ಆ ಹುಡುಗಿಗೆ ಬೇನೆ ಮೊದಲಿಟ್ಟಿತು. ರಾಜನಿಗೆ ಆಗ ಆತಂಕವಾಯಿತು. ದೇಶದ ವೈದ್ಯರನ್ನೆಲ್ಲ ಕರೆಯಿಸಿ ಔಷಧದಿಂದ ಮಗಳ ಮೈ ಕರಗಿಸುವಂತೆ ಅಪ್ಪಣೆ ಮಾಡಿದ; ಅವರು ಮಾಡಲಾರರಾದರೆ ಅವರ

ತಲೆಯನ್ನೂ ಕಡಿಸಿದ! ಪಾಪ,ಅವನ ಆತಂಕ ಅಷ್ಟು!ಧೈರ್ಯ ಇದ್ದ ವೈದ್ಯರೆಲ್ಲ ಬಂದು ಚಿಕಿತ್ಸೆಗೆ ಕೈಹಾಕಿ ಸೋತು, ತಲೆಯನ್ನು ಒಪ್ಪಿಸಿದರು. ರಾಜಕುಮಾರಿಯ ಮೈಯೇನು ಕರಗಲಿಲ್ಲ. ಅವರೆಲ್ಲ ಕೊಟ್ಟ ಔಷಧವೂ ಅರಗದೆ ಬೊಜ್ಜು ಇನ್ನಷ್ಟು ಬೆಳೆಯಿತು !

ವೈದ್ಯರು ಸಾಹಸ ಮಾಡುವುದೂ ನಿಂತಿತು. ರಾಜನ ಮಗಳಿಗೆ ಮೈ ಎಷ್ಟಿದ್ದರೆ ಅವರಿಗೇನು ? ಚಿಕಿತ್ಸೆಗೆ ಕೈಹಾಕಿ ತಲೆ ಕಡಿಸಿಕೊಳ್ಳುವುದು ಯಾರಿಗೆ ಬೇಕು ? ಮಗಳ ಬೊಜ್ಜು ಕಡಮೆ ಮಾಡಿದವರಿಗೆ ಅರ್ಧ ರಾಜ್ಯ ಕೊಡುತ್ತೇನೆಂದೂ ರಾಜ ಆಸೆ ತೋರಿಸಿದ. ಆದರೆ ಚಿಕಿತ್ಸೆ ಸಾರ್ಥಕವಾಗದಿದ್ದರೆ ತಲೆ ಕತ್ತರಿಸುವುದಿಲ್ಲ ಎಂದೇನು ಹೇಳಲಿಲ್ಲ! ಹೀಗಾಗಿ, ಯಾವ ವೈದ್ಯನೂ ಮುಂದೆ ಬರಲಿಲ್ಲ. ಮೊದಲು ತಲೆಯಿದ್ದರಲ್ಲವೆ ಅರ್ಧರಾಜ್ಯ ಅನುಭವಿಸುವುದು ?

ರಾಜನಿಗೆ ಚಿಂತೆ ಬಲವಾಯಿತು. ಆ ಚಿಂತೆಯಲ್ಲೇ ಪಾಪ, ತೀರಿಕೊಂಡ. ಅವನ ಮಗಳೇ ಅವನ ಉತ್ತರಾಧಿಕಾರಿಯಾಗಿ ರಾಣಿಯಾದಳು. ರಾಜಕುಮಾರಿ ಆಗಿದ್ದಾಗಲೇ ಇದ್ದ ಬೊಜ್ಜು ರಾಣಿಯಾದ ಮೇಲೆ ಇನ್ನಷ್ಟು ಹುಲುಸಾಗಿ ಬೆಳೆದು, ಆಕೆಗೆ ಎದ್ದರೆ ಕೂಡುವುದು ಕಷ್ಟ; ಕೂತರೆ ಏಳುವುದು ಕಷ್ಟ. ಮಲಗಿದರೆ ಮಗ್ಗುಲಾಗಲು ಕಷ್ಟವಾಯಿತು. ಊಟ ಮಾಡಲು ತುತ್ತೆತ್ತಿ ಬಾಯಿಗೆ ಮುಟ್ಟಿಸುವುದೂ ಕಷ್ಟವಾಯಿತು. ನಡೆಯುವುದನ್ನು ಕೇಳಲೇಬೇಡಿ.

ರಾಣಿಯೂ ವೈದ್ಯರಿಗೆ ಕರೆ ಕಳುಹಿಸಿದಳು ; ದೇಶದಲ್ಲೆಲ್ಲ ಡಂಗುರ ಹೊಡೆಯಿಸಿದಳು. ತನ್ನ ಬೊಜ್ಜು ಕರಗುವಂತೆ ಚಿಕಿತ್ಸೆ ಮಾಡಿದ ವೈದ್ಯನನ್ನು ತಾನು ಮದುವೆಯಾಗುತ್ತೇನೆಂದೂ, ಮುಂದೆ ಅವನೇ ರಾಜನಾಗುವನೆಂದೂ ಸಾರಿ

ದಳು. ಆಕೆ ತಂದೆಗಿಂತ ಸ್ವಲ್ಪ ಜಾಣೆ; ಚಿಕಿತ್ಸೆ ಗುಣವಾಗ ದಿದ್ದರೆ ತಲೆ ತೆಗೆಯುವ ಕರಾರನ್ನು ಬಿಟ್ಟಳು. ಆಗ ಕೆಲವು ವೈದ್ಯರು ಒಂದು ಕೈ ನೋಡೋಣವೆಂದು ಬರಲಾರಂಭಿ ಸಿದರು.

ಪಕ್ಕದ ಪ್ರಾಂತ್ಯದ ಜಾಣನೊಬ್ಬನಿಗೆ ಈ ಸುದ್ದಿ ತಿಳಿ ಯಿತು. ಅವನೇನು ವೈದ್ಯನಲ್ಲ, ಆದರೂ ವೈದ್ಯನಂತೆ ವೇಷ ಧರಿಸಿ ಈ ರಾಣಿಯ ಬಳಿ ಬಂದ. ರಾಣಿ ಕೂತಿದ್ದರೆ ಅವಳ ಕತ್ತೆಲ್ಲಿ, ನಡುವೆಲ್ಲಿ, ತೋಳೆಲ್ಲಿ ಎಂದು ಕಾಣದಷ್ಟು ಗುಂಡು ಗುಂಡಾಗಿಬೆಳೆದ ಮೈ;ಉಬ್ಬಿದ ಕೆನ್ನೆಗಳು, ಗುಳಿಗಿಳಿದ ಕಣ್ಣು, ಮೈಗೆಲ್ಲ ಹೊಟ್ಟೆಯೇ ಮುಂದು! 'ವೈದ್ಯ'ನನ್ನು ರಾಣಿಯ ಪರಿವಾರದವರು ಕೂಡಿಸಿದರು. ರಾಣಿಯು "ನೀವು ಚಿಕಿತ್ಸೆ ಮಾಡಬಲ್ಲಿರಾ?" ಎಂದು ಕೇಳಿದಳು. ಈ ವೈದ್ಯ "ಅದಕ್ಕಾ ಗಿಯೇ ಬಂದಿದ್ದೇನೆ, ಮಹಾರಾಣಿಯವರೇ, ಆದರೆ ಚಿಕಿತ್ಸೆ ಮೊದಲುಮಾಡುವ ಮುಂಚೆ ತಮ್ಮ ಜಾತಕವನ್ನಿಷ್ಟು ನೋಡ ಬೇಕೆಂದಿದ್ದೇನೆ, ಅಪ್ಪಣೆಯಾಗಬೇಕು. ನನಗೆ ಜ್ಯೋತಿಷ್ಯದ ಪರಿಚಯವೂ ಉಂಟು" ಎಂದನು. ರಾಣಿಯು ತನ್ನ ಜಾತಕ ವನ್ನು ತರಿಸಿಕೊಟ್ಟಳು.

ಈ ಬೂಟಾಟಿಕೆ 'ವೈದ್ಯ' ರಾಣಿಯ ಜಾತಕವನ್ನು ನೋಡುತ್ತ ಕಾಗದದ ಮೇಲೆ ಸುಳ್ಳು ಸುಳ್ಳೇ ಗುಣಾಕಾರ ಮಾಡುತ್ತ ಬಹಳ ಹೊತ್ತು ಕಳೆದ. ರಾಣಿಗೆ ತಾಳ್ಮೆ ತಪ್ಪಿ "ಏನು, ಅಷ್ಟು ನೋಡುತ್ತಿದ್ದೀರಿ?" ಎಂದು ಕೇಳಿದಳು. ಅದಕ್ಕೆ ನಮ್ಮ ವೈದ್ಯರಾಜನು ನಿದಾನವಾಗಿ "ನಾನೇನೋ ಬೇನೆಯನ್ನು ಗುಣಪಡಿಸಬಲ್ಲೆ. ಆದರೆ ಚಿಕಿತ್ಸೆ ಮುಗಿಯು ವುದರೊಳಗೆ ಮಹಾರಾಣಿಯವರಿಗೆ ಒಂದು ಗಂಡಾಂತರ

ಕಾದಿದೆ. ಅದನ್ನು ಜಾತಕ ಸ್ಪಷ್ಟಪಡಿಸುತ್ತದೆ" ಎಂದು ಹೇಳಿದನು.

ರಾಣಿಯು ಬೆಚ್ಚಿದಳು. ಹೌಹಾರಿ "ಗಂಡಾಂತರವೇ? ಏನದು, ವಿವರವಾಗಿ ಹೇಳಿ" ಎಂದು ಕೇಳಿದಳು. ವೈದ್ಯನು "ಹೌದು, ತಾಯಿ! ಇನ್ನು ನಲವತ್ತು ದಿನಗಳಿಗೆ ಸರಿಯಾಗಿ ತಮಗೆ ಪ್ರಾಣಭಯ ಇದೆ. ನನ್ನ ಚಿಕಿತ್ಸೆ ಮುಗಿಯುವುದು ಇನ್ನೂ ಕೆಲವು ದಿನಗಳಿರುವಾಗಲೇ ಈ ಅನಿಷ್ಟ ಒದಗಿ ಬಿಡುತ್ತದೆ. ಚಿಕಿತ್ಸೆಯಿಂದ ತಮಗಾಗಲೀ ನನಗಾಗಲೀ ಏನೂ ಪ್ರಯೋಜನವಿಲ್ಲ. ಗುಣವಾಗಿ ತಾವು ಉಳಿಯುವ ಹಾಗಿಲ್ಲ, ನನಗೆ ರಾಜನಾಗುವ ಯೋಗವಿಲ್ಲ! ಚಿಕಿತ್ಸೆ ಆರಂಭ ಸುವುದೇ ಬೇಡವೇ ಎಂದು ಯೋಚನೆ ಮಾಡುತ್ತಿದ್ದೇನೆ" ಎಂದನು.

ರಾಣಿಗೆ ದಿಗ್ಭ್ರಮೆಯಾಯಿತು. ಗಂಡಾಂತರ ಇರುವು ದೆಂದು ಅವಳು ಕನಸು ಮನಸಿನಲ್ಲಿಯೂ ನೆನೆಸಿರಲಿಲ್ಲ. ಬೆದರಿ ಬೆಂಡಾಗಿ "ನೋಡಿ ಸ್ವಾಮಿ, ಪ್ರಾಣಭಯಕ್ಕೆ ಏನಾ ದರೂ ಪರಿಹಾರ ಸೂಚಿಸಿ" ಎಂದು ಅಂಗಲಾಚಿಕೊಂಡಳು ರಾಣಿ. ವೈದ್ಯನೂ ಗಂಭೀರವಾಗಿ "ಅದೇ ಇಷ್ಟು ಹೊತ್ತೂ ನೋಡುತ್ತಿದ್ದೆ, ಮಹಾರಾಣಿಯವರೇ! ಆದರೆ ಏನು ಪರಿ ಹಾರವೂ ಇದ್ದಂತಿಲ್ಲ. ಗ್ರಹಗಳು ತುಂಬ ಕ್ರೂರವಾಗಿವೆ, ಉಪಾಯವಿಲ್ಲ. ಇಂದಿನಿಂದ ನಲವತ್ತು ದಿನಗಳು ತಮ್ಮ ಆಯುಸ್ಸು. ಮರುದಿನ ತಮ್ಮನ್ನು ಅನಿಷ್ಟವು ಇರಗೊಡಿಸು ವುದಿಲ್ಲ! ಅಪ್ರಿಯವಾದರೂ ಸತ್ಯವಾದ ಸುದ್ದಿ ಇದು. ತಮಗೆ ಇದನ್ನು ತಿಳಿಸಿ ತಮ್ಮ ಮನಸ್ಸಿಗೆ ಬೇಸರ ಪಡಿಸಿದ್ದರೆ ಕ್ಷಮೆ ಬೇಡುತ್ತೇನೆ. ಆದರೆ ನಿಜವನ್ನು ಮರೆಮಾಚಿ,

ತಮ್ಮನ್ನು ವಂಚಿಸಲು ನನಗಿಷ್ಟವಿಲ್ಲ" ಎಂದು ದುಃಖವನ್ನು ನಟಿಸಿ ಸುಮ್ಮನಾದನು.

ರಾಣಿಗೆ ಕಣ್ಣು ಕತ್ತಲೆ ಕವಿಯಿತು. ನಡುಕ ಆರಂಭ ವಾಯಿತು. ಕಳವಳದಿಂದ ಗಳಗಳನೆ ಅಳಲು ಮೊದಲಿಟ್ಟಳು. ಮಂತ್ರಿಯೂ ಮತ್ತಿತರರೂ ಅಂದಿನ ಸಭೆಯನ್ನು ಮುಗಿಸಿ ನೆರೆದವರನ್ನು ಕಳಿಸಿದರು. ವೈದ್ಯನೂ ಅರಮನೆಯಿಂದ ಹೊರಟು ಆ ಊರಿನಲ್ಲಿ ತಾನು ಇಳಿದುಕೊಂಡಿದ್ದ ಮನೆಗೆ ಬಂದನು.

ಅಂದಿನಿಂದ ರಾಣಿ ಹಾಸಿಗೆ ಹಿಡಿದಳು. ತಾನು ತೆಳ್ಳ ಗಾಗಬೇಕೆಂಬ ಯೋಚನೆ ಹೊರಟುಹೋಯಿತು. ಪ್ರಾಣ ಭಯ ಅವಳನ್ನು ಕಾಡತೊಡಗಿತು. ನಲವತ್ತು ದಿನಗಳಲ್ಲಿ ತಾನು ಸಾಯುವೆನೆಂಬ ವೈದ್ಯನ ಭವಿಷ್ಯ ಅವಳ ಮನಸ್ಸನ್ನು ಹಿಡಿಯಿತು. ಊಟದಲ್ಲಿ ರುಚಿ ಇಂಗಿಹೋಯಿತು. ಆಹಾರದ ಬಯಕೆ ಮಾಯವಾಯಿತು. ರಾತ್ರಿ ನಿದ್ದೆ ಬಾರದು, ಮನ ಸ್ಸಿಗೆ ಹರ್ಷ ಇರದು, ಯಾರೊಂದಿಗೆ ಮಾತನಾಡುವುದೂ ಬೇಡವಾಯಿತು. ದಿನಗಳನ್ನು ಎಣಿಸುತ್ತ ನಲವತ್ತನೆಯ ದುರ್ದಿನವನ್ನು ನಿರೀಕ್ಷಿಸುತ್ತ ಬಾಳನ್ನು ದುಗುಡದಿಂದ ನೂಕ ಲಾರಂಭಿಸಿದಳು.

ಒಂದೊಂದು ದಿನ ಕಳೆದಂತೆ ಅವಳ ಆತಂಕ ಹೆಚ್ಚಿತು. ಸಾವಿನ ಸಮಯ ಹತ್ತಿರ ಬರುತ್ತಿದ್ದಾಗ ಸಮಾಧಾನದಿಂದ ಯಾರಿದ್ದಾರು? ಅಂತೂ ಮೂವತ್ತೊಂಬತ್ತು ದಿನಗಳು ಕಳೆದು ನಲವತ್ತನೆಯ ದಿನವೂ ಬಂದಿತು. ರಾಣಿಯ ಮುಖ ದಲ್ಲಿ ಮಂಕು ಕವಿಯಿತು; ಹೃದಯ ಭಾರವಾಗಿ ಕಳವಳ ಹೆಚ್ಚಾಯಿತು. ಅವತ್ತೇ ಅವಳ ಬಾಳುವೆಯ ಕಡೆಯ ದಿನ ಅಲ್ಲವೆ? ಹೆದರಿದ ಹಕ್ಕಿಯಂತಾಗಿದ್ದ ರಾಣಿಯ ಪಾಲಿಗೆ

ಒಂದೊಂದು ಗಳಿಗೆಯೂ ಒಂದೊಂದು ಯುಗವಾಯಿತು. ದಿನವೂ ಮುಗಿಯಿತು, ಸಂಜೆಯಾಯಿತು, ರಾತ್ರಿಯೂ ಕಳೆಯಿತು, ಮರುದಿನ ಬೆಳಕೂ ಹರಿಯಿತು. ನಲವತ್ತೊಂದನೆಯ ದಿನ, ಆದರೂ ರಾಣಿ ಬದುಕಿದ್ದಾಳೆ.

ಅವಳಿಗೆ ಸಂತೋಷವಾಗುವುದಕ್ಕಿಂತ ಹೆಚ್ಚಾಗಿ ಆಶ್ಚರ್ಯವಾಯಿತು. ನಲವತ್ತು ದಿನಗಳಿಂದ ನಿರೀಕ್ಷಿಸಿದ್ದ ಸಾವು ಬರಲಿಲ್ಲವೇಕೆ ? ಈ ಸಮಸ್ಯೆ ಅವಳನ್ನು ಕಾಡಿತು. ಹಾಗೂ ಹೀಗೂ ಆ ದಿನವೂ ಕಳೆಯಿತು. ಮರುದಿನವೂ ಬಂದು ಹೋಯಿತು; ರಾಣಿ ಸಾಯಲಿಲ್ಲ. ಆ ವೈದ್ಯ–ಜ್ಯೋತಿಷಿಯ ಲೆಕ್ಕಾಚಾರ ತಪ್ಪಿದ್ದೀತೆಂಬ ಸಂಶಯ ಅವಳಿಗೆ ಒದಗಿತು. ಸುಮ್ಮಸುಮ್ಮನೆ ತನ್ನನ್ನು ಇಷ್ಟು ಕಳವಳಕ್ಕೆ ಗುರಿಮಾಡಿದನೆಂದು ಅವನ ಮೇಲೆ ಕೋಪವೂ ಬಂದಿತು. ಒಡನೆಯೇ ಅವನನ್ನು ಕರೆಕಳುಹಿಸಿದಳು.

'ವೈದ್ಯ'ನು ಬಂದೊಡನೆ ರಾಣಿ ಕೋಪದಿಂದ "ಏನಯ್ಯಾ. ಜ್ಯೋತಿಷಿ, ನಿನ್ನ ಭವಿಷ್ಯ ಏನಾಯಿತು? ಸುಳ್ಳುಸುಳ್ಳೇ ಹೇಳಿ ನನ್ನನ್ನು ಬವಣೆಪಡಿಸಿದೆಯಲ್ಲವೆ ? ನಲವತ್ತೆರಡು ದಿನಗಳಾದುವು ; ಇನ್ನೂ ಕಲ್ಲುಗುಂಡಿನಂತೆ ಇದ್ದೇನಲ್ಲ. ನಿನ್ನನ್ನು ಯಾವ ಶಿಕ್ಷೆಗೆ ಗುರಿಪಡಿಸಬೇಕು,ಬಲ್ಲೆಯಾ?" ಎಂದು ಗುಡುಗುಡಿಸಿದಳು. ಆದರೆ 'ವೈದ್ಯ'ನೇನು ಬೆದರಲಿಲ್ಲ. ಅವನು ನಸುನಗುತ್ತ "ನನ್ನ ಜ್ಯೋತಿಷ್ಯ ಸುಳ್ಳಿರಬಹುದು, ಮಹಾರಾಣಿಯವರೇ, ಆದರೆ ನನ್ನ ವೈದ್ಯ ನಿರರ್ಥಕವಾಗಲಿಲ್ಲವಲ್ಲ" ಎಂದ. ಆದಕ್ಕೆ ರಾಣಿ "ಏನು ನಿನ್ನ ವೈದ್ಯ ? ಆರಂಭಿಸಲೇ ಇಲ್ಲವಲ್ಲ ?" ಎಂದು ಕೇಳಲು 'ವೈದ್ಯ'ನು "ದಯಮಾಡಿ ನಿಲುಗನ್ನಡಿಯಲ್ಲಿ ನೋಡಿಕೊಳ್ಳಿ" ಎಂದು ಸೂಚಿಸಿದನು.

ಒಡನೆಯೇ ರಾಣಿ ಎದ್ದು ಹೋಗಿ ನಿಲುಗನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ನೋಡಿಕೊಂಡಳು. ಅಲ್ಲಿಯವರೆಗೆ ಸಾಯುವ ಬೆದರಿಕೆಯಲ್ಲಿ ಅವಳು ಕನ್ನಡಿಯಲ್ಲಿ ನೋಡಿಕೊಂಡೇ ಇರಲಿಲ್ಲ. ಬೊಜ್ಜೆಲ್ಲ ಕರಗಿ ಹೋಗಿ ತೆಳ್ಳಗಾಗಿ ಬಿಟ್ಟಿದ್ದಾಳೆ ರಾಣಿ! ದುಗುಡ, ಭೀತಿ, ಆತಂಕ ಎಲ್ಲ ಸೇರಿ ಅವಳ ಆಹಾರದಲ್ಲಿ ಮಿತಿ, ದೇಹಕ್ಕೆ ಶೋಷಣೆ, ಸಾಕಷ್ಟು ಶ್ರಮಗಳನ್ನು ಒದಗಿಸಿದ್ದುವು. ಹೀಗಾಗಿ ತಾನು ಪ್ರಯತ್ನ ಪಡದೆಯೇ ದೇಹ ತೆಳುವಾಗಿ ಇದ್ದಿತು. ಇದು 'ವೈದ್ಯ'ನ ಉಪಾಯವೆಂದು ಆಗ ಅವಳಿಗೆ ಹೊಳೆಯಿತು. ಮನಸ್ಸಿಗೆ ಸಮಾಧಾನ ಆಗಿ, ಸಂತೋಷವಾಯಿತು.

ಮುಂದೆ ಆ 'ವೈದ್ಯ'ನನ್ನು ಮದುವೆಯಾಗಿ, ರಾಜ್ಯವನ್ನು ಅವನಿಗೆ ಒಪ್ಪಿಸಿ ಸುಖವಾಗಿದ್ದಳು.

ಠಕ್ಕರ ಗುರು

ಒಂದು ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣನಿದ್ದ. ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಿ ಅಲ್ಲಿ ತಿಥಿ – ಮತಿ, ಪೂಜೆ – ಪುನಸ್ಕಾರಗಳನ್ನು ನಡೆಸಿ ಅವರು ಕೊಟ್ಟ ಅಷ್ಟಿಷ್ಟು ದಕ್ಷಿಣೆ – ದಾನಗಳಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ದಿನವೆಲ್ಲ ದುಡಿದರೂ ಕೈ ತುಂಬ ದುಡ್ಡು ಬರುತ್ತಿರಲಿಲ್ಲ.

ಒಂದು ದಿನ ಮುಂಜಾನೆಯೇ ಎದ್ದು ಪಕ್ಕದ ಹಳ್ಳಿಗೆಂದು ಹೊರಟ. ಅವನ ಹೆಂಡತಿ "ಇವತ್ತು ಮಹಾಲಯವಲ್ಲವೆ? ನಮ್ಮ ಮನೆಯಲ್ಲಿ ತರ್ಪಣ ಶ್ರಾದ್ಧಗಳನ್ನು ಮಾಡುವುದು ಬಿಟ್ಟು ಹೊರಟದ್ದೀರಲ್ಲ?" ಎಂದು ನಿಲ್ಲಿಸಿದಳು.

ಅದಕ್ಕೆ ಬ್ರಾಹ್ಮಣ "ನಮ್ಮ ಮನೆಯಲ್ಲೇ ಮಾಡುತ್ತ ಕೂತರೆ ದಕ್ಷಿಣೆ ಕೊಡುವವರು ಯಾರು? ಇವತ್ತು ಒಂದು ಏಳೆಂಟು ಮನೆಗಳಿಗೆ ಹೋದರೆ ತಿಂಗಳು ಪೂರ್ತಿ ಪಥ ನಡೆದೀತು!" ಎಂದು ಮೂಗೆಳೆದ. ಹೆಂಡತಿ "ಚೆನ್ನಾಯಿತು, ನಮಗೇನು ಹಿರಿಯರಿಲ್ಲವೆ? ಅವರಿಗೆ ಸದ್ಗತಿ ಬೇಡವೆ? ತಿಂಗಳು ಪೂರ್ತಿ ಪಥ ನಡೆಯಲು ನಮ್ಮ ಮನೆಯಲ್ಲಿ ಒಂದು ಹಸುವಿದೆಯಲ್ಲ, ಮಾರಿಬಿಡಿ. ಅದರಿಂದ ಒದಗುವ ಹಾಲು ಅಷ್ಟರಲ್ಲೇ ಇದೆ" ಎಂದು ಸೂಚಿಸಿದಳು.

ಬ್ರಾಹ್ಮಣನು ಸರಿಯೆಂದು ಕೊಟ್ಟಿಗೆಗೆ ಹೋಗಿ ಹಸುವನ್ನು ಬಿಚ್ಚಿ ಹೊಡೆದುಕೊಂಡು ಹೊರಟ. ಅವನ ಹೆಂಡತಿ "ನೋಡಿ, ನಿಮಗೇನೂ ತಿಳಿಯದು. ಹಸುವನ್ನು ನೂರು ರೂಪಾಯಿಗಳಿಗಿಂತ ಕಡಮೆ ಬೆಲೆಗೆ ಮಾರಬೇಡಿ. ಅಷ್ಟಕ್ಕೆ ಯಾರೂ ಕೊಳ್ಳದಿದ್ದರೆ ಹಿಂದಕ್ಕೆ ತನ್ನಿ" ಎಂದು ಹೇಳಿ ಕಳುಹಿಸಿದಳು. ಆಗಲೆಂದು ಹೇಳಿ ಬ್ರಾಹ್ಮಣ ಹೊರಟ.

ಹಳ್ಳಿಯಾಚೆ ಹೋಗುತ್ತಿದ್ದಾಗ ನೆರೆಯೂರಿನ ಕುರಿ ಕಾಯುವವನೊಬ್ಬನು–"ಏನು ಸ್ವಾಮಿಗಳು,ಹಸು ಹೊಡೆದುಕೊಂಡು ಹೊರಟಿದ್ದಾರೆ?" ಎಂದು ಕೇಳಿದನು. "ಮಾರುವುದಕ್ಕೆ" ಎಂದು ಬ್ರಾಹ್ಮಣ ಹೇಳಿದ. "ಏನು ಬೆಲೆ? ನನಗೇ ಬೇಕಾಗಿದೆ" ಎಂದ ಈತ. ಬ್ರಾಹ್ಮಣ "ಒಂದು ನೂರು ರೂಪಾಯಿ" ಎನ್ನಲು ಆತ "ಓಹೋ, ಅಯ್ಯನವರಿಗೆ ಆಸೆ ಹೆಚ್ಚು! ಈ ಹಸುವಿಗೆ ನೂರು ರೂಪಾಯಿ ಯಾರು ಕೊಡುತ್ತಾರೆ, ಸ್ವಾಮಿ? ನಿಮಗೆ ಮಾರಾಟ ತಿಳಿಯದು" ಎಂದು ನಕ್ಕ. ಬ್ರಾಹ್ಮಣ "ನನಗೇನೂ ತಿಳಿಯದು, ಸರಿಯೆ! ಆದರೆ ನನ್ನ ಹೆಂಡತಿ ಹಾಗೆ ಹೇಳಿದ್ದಾಳಲ್ಲ, ಏನು ಮಾಡುವುದು?" ಎಂದ.

"ಊರೂರು ತಿರುಗುವ ನಿಮಗೇ ತಿಳಿಯದಿದ್ದರೆ, ಮನೆಯಲ್ಲಿರುವ ನಿಮ್ಮ ಹೆಂಡತಿಗೆ ತಿಳಿಯುತ್ತದೆಯೆ ? ಹೋಗಲಿ, ಮುಂದೆ ಯಾರನ್ನಾದರೂ ಕೇಳುವ, ಅವರು ಹೇಳಿದ ಬೆಲೆಗೆ ಕೊಟ್ಟುಬಿಡಿ. ಸರಿಯೋ ? ಬನ್ನಿ" ಎಂದು ಬ್ರಾಹ್ಮಣನನ್ನು ಕರೆದೊಯ್ದ. ಸ್ವಲ್ಪ ದೂರ ಹೋಗುವಾಗಲೇ ಬೀದಿಯ ಪಕ್ಕದಲ್ಲಿ ಬಂಡೆಯ ಮೇಲೆ ಮುದುಕನೊಬ್ಬ ಕುಳಿತಿದ್ದ. ಈ ಕುರಿ ಕಾಯುವಾತ "ನೋಡಿ, ಸ್ವಾಮಿ, ಇಲ್ಲಿ ಯಾರೋ ಯಜಮಾನ ಕೂತಿದ್ದಾನೆ. ಅವನನ್ನು ಕೇಳೋಣವೆ?" ಎಂದ. ಬ್ರಾಹ್ಮಣ ಒಪ್ಪಿದ. ಹೇಗೂ ಮುದುಕ,ಅನುಭವಸ್ಥ; ಇಬ್ಬರಿಗೂ ಅಪರಿಚಿತ.

ಕುರಿ ಕಾಯುವಾತ ಮುದುಕನನ್ನು ನೋಡಿ "ಅಯ್ಯಾ ಯಜಮಾನ, ಈ ಹಸುವಿಗೆ ಏನು ಬೆಲೆ ಆದೀತು ಹೇಳು. ಅಯ್ಯನವರು ಮಾರಬೇಕೆಂದಿದ್ದಾರೆ" ಎಂದು ಕೇಳಲು ಆ ಮುದುಕ ಹಸುವನ್ನು ಚೆನ್ನಾಗಿ ಪರೀಕ್ಷಿಸಿ "ಏನು ಒಂದು ಇಪ್ಪತ್ತು ರೂಪಾಯಿ ಆದೀತು ! ಅಂಥ ಒಳ್ಳೆಯದೇನಲ್ಲ" ಎಂದು ಹೇಳಿದ.

"ನೋಡಿದಿರ, ಸ್ವಾಮಿ ! ನಾನು ಹೇಳಲಿಲ್ಲವೆ, ನಿಮಗೆ ಬೆಲೆ ತಿಳಿಯದೆಂದು ! ಈ ಹಸುವಿನ ಬೆಲೆ ಮುದುಕ ಹೇಳಿದಷ್ಟೇ. ಅವನಿಗೆ ಚೆನ್ನಾಗಿ ಅನುಭವ ಇರಬೇಕು. ನಿಮಗೆ ಮೋಸ ಮಾಡಿ, ನನಗೆ ಅನುಕೂಲ ಮಾಡಿಕೊಡಲು ಇವನೇನು ನಮ್ಮ ಚಿಕ್ಕಪ್ಪನೆ ? ನಿಮಗೆ ಹೇಗೋ ನನಗೂ ಹಾಗೇ ಹೊಸಬ."

ಕುರಿ ಕಾಯುವವನ ತರ್ಕಕ್ಕೆ ಕಟ್ಟುಬಿದ್ದ ಬ್ರಾಹ್ಮಣ ಆಗಲೆಂದು ಇಪ್ಪತ್ತು ರೂಪಾಯಿಗಳಿಗೇ ಹಸುವನ್ನು ಆತನಿಗೆ ಮಾರಿ ಹಳ್ಳಿಗೆ ಹಿಂತಿರುಗಿದ. ಮನೆಯಲ್ಲಿ ಹೆಂಡತಿಗೆ

ನಡೆದ ವಿಚಾರವನ್ನು ತಿಳಿಸಲು, ಆಕೆ ಸುಮ್ಮನಿರುತ್ತಾಳೆಯೆ? ಸಿಟ್ಟಿಗೆದ್ದಳು. "ಏನು, ನಿಮಗೆ ಅಷ್ಟು ವಿವೇಕ ಬೇಡವೆ ? ಇಪ್ಪತ್ತು ರೂಪಾಯಿಗೆ ಯಾರಾದರೂ ಹಸುವನ್ನು ಮಾರುತ್ತಾರೆಯೆ? ಅವರಿಬ್ಬರೂ ಠಕ್ಕರಿರಬೇಕು. ನಿಮಗೆ ಮೋಸ ಮಾಡಿದ್ದಾರೆ, ಅಷ್ಟೆ!" ಎಂದು ಕೂಗಾಡಿದಳು.

ಬ್ರಾಹ್ಮಣ "ಇರಲಿ, ಅವರು ಠಕ್ಕರಿದ್ದರೆ ಅವರಿಗೆ ತಕ್ಕ ಶಾಸ್ತಿ ಮಾಡದೆ ಬಿಡಬಾರದು. ನಾಳೆಯೇ ನೋಡುತ್ತೇನೆ. ತಾಳು" ಎಂದು ಹೆಂಡತಿಗೆ ಸಮಾಧಾನ ಹೇಳಿ ಮರುದಿನ ಮುಂಜಾನೆಯೇ ಎದ್ದು, ಹೆಂಗಸಿನಂತೆ ವೇಷ ಮರೆಸಿಕೊಂಡು ಮುಖದ ಮೇಲೆ ಸೀರೆಯ ಸೆರಗೆಳೆದುಕೊಂಡು ಹೊರಟ. ಹಿಂದಿನ ದಿನ ತನ್ನ ಹಸುವನ್ನು ಮಾರಿದ ಸ್ಥಳಕ್ಕೇ ಹೋಗಿ ನಿಂತ. ಕುರಿ ಕಾಯುವಾತ ಅಲ್ಲಿಯೇ ಆಡ್ತಾಡುತ್ತಿದ್ದ. ಅವನಿಗೆ ಈ ಹೆಂಗಸು ಒಬ್ಬಳೇ ಬರುತ್ತಿದ್ದುದನ್ನು ಕಂಡು ಆಶ್ಚರ್ಯವಾಯಿತು. ಹತ್ತಿರ ಹೋಗಿ "ಏನು ತಾಯಿ, ಯಾರು ನೀನು ? ಒಬ್ಬಳೇ ಹೋಗುತ್ತಿದ್ದೀಯಲ್ಲ!" ಎಂದು ಕೇಳಲು ಬ್ರಾಹ್ಮಣ ಮುಸುಕಿನ ಒಳಗಿನಿಂದಲೇ ಧ್ವನಿಯನ್ನು ಬದಲಾಯಿಸಿ "ಮನೆಯಿಂದ ಜಗಳವಾಡಿ ಬಂದಿದ್ದೇನೆ. ಯಾರು ಒಂದಿಷ್ಟು ಅನ್ನ ಹಾಕಿದರೆ ಅವರ ಮನೆಗೆ ಹೋಗುತ್ತೇನೆ" ಎಂದ. ಕುರಿ ಕಾಯುವವನಿಗೆ ಸಂತೋಷವಾಯಿತು. "ಹಾಗಾದರೆ ನನ್ನ ಮನೆಗೇ ಬಾ, ನಾನು ಅನ್ನ ಹಾಕುತ್ತೇನೆ. ನನಗೂ ಇನ್ನು ಮದುವೆಯಿಲ್ಲ" ಎಂದು ಬ್ರಾಹ್ಮಣನನ್ನು ಹತ್ತಿರದಲ್ಲೇ ಇದ್ದ ತನ್ನ ಮನೆಗೆ ಕರೆದುಕೊಂಡು ಹೋದ.

ಬ್ರಾಹ್ಮಣ ಒಳಗೆ ಹೋಗಿ ನೋಡುತ್ತಾನೆ, ಹಿಂದಿನ ದಿನ ಹಸುವಿನ ಬೆಲೆ ಹೇಳಿದ ಮುದುಕ ಅಲ್ಲೇ ಕೂತಿದ್ದಾನೆ!

ಈ ಕುರಿಕಾಯುವವನ ಅಪ್ಪನೇ ಅವನು ಕುರಿಯಾತ. ತನ್ನ ತಂದೆಗೆ ಈ 'ಹುಡುಗಿ'ಯನ್ನು ತೋರಿಸಿ "ನೋಡು, ನನಗೆ ಹೆಂಡತಿಯನ್ನು ಕರೆತಂದಿದ್ದೇನೆ" ಎಂದು ಹೇಳಲು ಮುದುಕ "ಮಗು, ನೀನಿನ್ನೂ ಹರೆಯದವನು. ನಿನಗೆ ಇನ್ನು ಯಾರಾದರೂ ಸಿಗುತ್ತಾರೆ. ನಾನು ಮುದುಕನಾದೆ, ಈ ಹುಡುಗಿ ನನಗಿರಲಿ ಬಿಡು" ಎಂದ. ಯುವಕನು ಆಗಲೆಂದು ಒಪ್ಪಿ ಆ 'ಹುಡುಗಿ'ಯನ್ನು ಮನೆಯಲ್ಲೇ ಬಿಟ್ಟು ನನ್ನ ಕೆಲಸಕ್ಕೆ ತಾನು ಹೊರಟ.

ಮನೆಯಲ್ಲಿ ಮುದುಕ ಬಂದ 'ಹುಡುಗಿ'ಯ ವಿಶ್ವಾಸವನ್ನು ಗಳಿಸಲು ತನ್ನ ವಿಚಾರವನ್ನೆಲ್ಲ ಹೇಳಿ ತನ್ನ ಬಳಿಯಿದ್ದ ಐಶ್ವರ್ಯವನ್ನೆಲ್ಲ ತೋರಿಸಲು ಮೊದಲುಮಾಡಿದ. ನಿಜವಾಗಿ ಅವರು ಠಕ್ಕರೇ! ಮೋಸ, ಕಳ್ಳತನ, ದರೋಡೆಗಳಿಂದ ಬೇಕಾದಷ್ಟು ಐಶ್ವರ್ಯವನ್ನು ಗಳಿಸಿದ್ದರು. ಮುದುಕನು 'ಹುಡುಗಿ'ಯನ್ನು ಕೆಳಗಿನ ಕೋಣೆಯೊಂದಕ್ಕೆ ಕರೆದೊಯ್ದು ಅಲ್ಲಿದ್ದ ನಾಲ್ಕು ಪೆಠಾರಿಗಳನ್ನು ತೋರಿಸಿದ. ಒಂದರ ತುಂಬ ಬಂಗಾರದ ನಗಗಳು, ಇನ್ನೊಂದರಲ್ಲಿ ನಾಣ್ಯ, ಮತ್ತೊಂದರಲ್ಲಿ ಬೆಳ್ಳಿ ಸಾಮಾನುಗಳು, ಮಗುದೊಂದರಲ್ಲಿ ಮುತ್ತು, ರತ್ನ ಮೊದಲಾದ ಒಡವೆಗಳು.

ಮುದುಕ ಪ್ರಣಯಾತುರನಾಗಿ ಮೈಮರೆತಾಗ,ಹುಡುಗಿ ತಟ್ಟನೆ ಮೂಲೆಯೊಂದರಲ್ಲಿಟ್ಟದ್ದ ಕಟ್ಟಿಗೆಯೊಂದನ್ನು ಎತ್ತಿಕೊಂಡು ಮುದುಕನನ್ನು ಮೈ ಮುರಿಯ ಹೊಡೆದು, ಒಂದು ಪೆಠಾರಿಯನ್ನೆತ್ತಿಕೊಂಡು ಓಡಿಬಿಟ್ಟಳು. ಹೊಡೆಯುವಾಗ "ನಾನು ಠಕ್ಕರ ಗುರು" ಎಂದು ಕೂಗಿ ಹೇಳಿದನು.

ಮನೆಗೆ ಹೋಗಿ ಬಂಗಾರದ ನಗಗಳಿದ್ದ ಪೆಠಾರಿಯನ್ನು ಹೆಂಡತಿಗೆ ಒಪ್ಪಿಸಿ ನಡೆದುದನ್ನು ಹೇಳಲು ಆಕೆ ಪಕ್ಕೆ ಬಿರಿಯ

ವಂತೆ ನಕ್ಕಳು. ಬ್ರಾಹ್ಮಣ "ಇಷ್ಟಕ್ಕೇ ಮುಗಿಯಲಿಲ್ಲ, ತಾಳು" ಎಂದು ಹೇಳಿದ. ಮರುದಿನ ಬೆಳಿಗ್ಗೆ ಎದ್ದು ವೈದ್ಯನಂತೆ ವೇಷ ಮರೆಸಿಕೊಂಡು ಠಕ್ಕರ ಮನೆಯ ಮುಂದೆ ಹೋದ. ಬೀದಿಯಲ್ಲಿ ಹೋಗುತ್ತ "ಯಾರಿಗಾದರೂ ಕಾಹಿಲೆ, ಗಾಯ ಆಗಿದ್ದರೆ ವೈದ್ಯ" ಎಂದು ಪದ್ಧತಿಯಂತೆ ಕೂಗಿದ. ಕುರಿ ಕಾಯುವ ಯುವಕ ಇವನನ್ನು ಒಳಗೆ ಕರೆದು ಹಿಂದಿನ ದಿನ ಪೆಟ್ಟು ತಿಂದು ಬವಣೆ ಪಡುತ್ತಿದ್ದ ತನ್ನ ತಂದೆಗೆ ಚಿಕಿತ್ಸೆ ಮಾಡಲು ಹೇಳಿದನು.

'ವೈದ್ಯ'ನು ಆಗಲೆಂದು ಹೇಳಿ, ಔಷಧಕ್ಕೆ ಸ್ವಲ್ಪ ಹಸುವಿನ ಹಾಲು ಬೇಕೆಂದು ಯುವಕನನ್ನು ಮನೆಯಿಂದ ಕಳುಹಿಸಿದನು. ಮುದುಕ ಒಬ್ಬನೇ ಇದ್ದಾಗ, ಮೂಲೆಯಲ್ಲಿದ್ದ ಕಟ್ಟಿಗೆಯಿಂದ ಮತ್ತೆ ಬೆನ್ನಿನ ಮೇಲೆ ಬಾರಿಸಿ "ನಾನೇ ಠಕ್ಕರ ಗುರು" ಎಂದು ಹೇಳಿ ಓಡಿದ. ಓಡುವಾಗ ಕೆಳಗಿನ ಕೋಣೆಯಿಂದ ಎರಡನೇ ಪೆಟ್ಟಿಗೆಯನ್ನು ಎತ್ತಿಕೊಂಡು ಹೋದ.

ಮನೆಗೆ ಹೋಗಿ ನಾಣ್ಯಗಳಿದ್ದ ಪೆಠಾರಿಯನ್ನು ಹೆಂಡತಿಗೆ ಕೊಟ್ಟು ಆ ದಿನದ ಕಥೆಯನ್ನು ಹೇಳಿದ. ಗಂಡನ ಬುದ್ಧಿಶಕ್ತಿಗೆ ಹೆಂಡತಿ ಬೆರಗಾದಳು. ಮರುದಿನ ಮುಂಜಾನೆ ಎದ್ದು ಕಣಿ ಹೇಳುವ ಜೋಯಿಸನಂತೆ ವೇಷ ಮರೆಸಿಕೊಂಡು ಅದೇ ಠಕ್ಕರ ಮನೆಯ ಮುಂದೆ ಹೋದ. 'ಜೋಯಿಸ' ಬರುತ್ತಿದ್ದುದನ್ನು ನೋಡಿ, ಕುರಿ ಕಾಯುವ ಯುವಕ ಅವನನ್ನು ಕರೆದು "ಸ್ವಾಮಿ, ನನ್ನ ತಂದೆಗೆ ಏನೋ ಗ್ರಹಚಾರ ಕಾಲ ಎಂದು ತೋರುತ್ತದೆ. ಸ್ವಲ್ಪ ಗುಣಿಸಿ ನೋಡಿ, ಪರಿಹಾರಕ್ಕೆ ಏನು ಮಾಡಬೇಕು ಹೇಳಿ" ಎಂದು ಕೇಳಿದ. 'ಜೋಯಿಸ' ಒಳಗೆ ಬಂದು ಕುಳಿತು ಕಪಟ ಗುಣಾಕಾರ ಹಾಕುತ್ತ "ಮುದುಕನಿಗೆ ಶನಿಯ ಕಾಟ ಸ್ವಲ್ಪ ಇದೆ. ಹಳ್ಳಿಯಲ್ಲಿ ಗುಡಿ ಇದ್ದರೆ ಈಗಲೇ

ಹೋಗಿ ಎಣ್ಣೆ ದೀಪ ಹಚ್ಚಿಬಿಟ್ಟು ಬಾ; ಅಷ್ಟರಲ್ಲಿ ನಾನು ಮಂತ್ರ ಹಾಕುತ್ತೇನೆ" ಎಂದು ಹೇಳಿ ಯುವಕನನ್ನು ಮನೆಯಿಂದ ಹೊರಗಟ್ಟಿದ.

ಮುದುಕ ಒಬ್ಬನೇ ಆದಾಗ, ಮೂಲೆಯ ಕಟ್ಟಿಗೆಯಿಂದ ಮತ್ತೆ ಅವನಿಗೆ ಪೆಟ್ಟುಗಳನ್ನು ಕೊಟ್ಟು "ನಾನೇ ಠಕ್ಕರ ಗುರು" ಎಂದು ಹೇಳಿ ಒಳಗಿನ ಕೋಣೆಯಿಂದ ಮೂರನೆಯ ಪೆಟ್ಟಿಗೆಯನ್ನು ಎತ್ತಿಕೊಂಡು ಮನೆಗೆ ಓಡಿದ. ಬೆಳ್ಳಿಯ ಸಾಮಾನುಗಳಿದ್ದ ಪೆಠಾರಿಯನ್ನು ನೋಡಿ ಹೆಂಡತಿಗೆ ಸಂತೋಷವಾಯಿತು; ಕಥೆಯನ್ನು ಕೇಳಿ ಆಶ್ಚರ್ಯವಾಯಿತು. ಬ್ರಾಹ್ಮಣನು ಹೆಂಡತಿಗೆ "ಅವರ ಬಳಿ ನಾಲ್ಕು ಪೆಠಾರಿಗಳಿವೆ. ಅವುಗಳಲ್ಲಿ ಮೂರು ಬಂದುವು. ಇನ್ನೂ ಒಂದು ಉಳಿದಿದೆ. ನಾಳೆ ಅದೂ ಬರುತ್ತದೆ" ಎಂದು ಹೇಳಿದ.

ಮರುದಿನ ಬೆಳಿಗ್ಗೆ ಎದ್ದು, ಉಪಾಯವನ್ನು ಆಲೋಚಿಸುತ್ತ ಹಳ್ಳಿಯ ಹೊರಗೆ ತಿರುಗಾಡುತ್ತಿದ್ದ. ಅಷ್ಟರಲ್ಲಿ ಕುದುರೆ ಸವಾರನೊಬ್ಬನು ಆ ಮಾರ್ಗವಾಗಿ ಹೋಗುತ್ತ ಬ್ರಾಹ್ಮಣನನ್ನು ಕಂಡು "ಸ್ವಾಮಿ,ನನ್ನ ಯಜಮಾನನ ಒಂಟೆಯೊಂದು ಕಾಣದಾಗಿದೆ. ನೀವೇನಾದರೂ ಇಲ್ಲಿ ಕಂಡಿರಾ?" ಎಂದು ಕೇಳಿದ. ಬ್ರಾಹ್ಮಣನು "ಅಯ್ಯಾ. ನಾನು ಒಂಟೆಯನ್ನೇನು ನೋಡಲಿಲ್ಲ. ಆದರೆ ಒಂಟೆ ಕದಿಯುವ ಮಂದಿ ಇಲ್ಲೇ ಒಂದು ಹಳ್ಳಿಯಲ್ಲಿದ್ದಾರೆ. ನನಗೆ ಗೊತ್ತು" ಎಂದು ಹೇಳಲು ಕುದುರೆ ಸವಾರನು "ಎಲ್ಲಿ, ಆ ಹಳ್ಳಿ ತೋರಿಸುತ್ತೀರಾ?" ಎಂದು ಕೇಳಿದನು. ಬ್ರಾಹ್ಮಣನು "ಆಗಲಿ, ಹಳ್ಳಿಯನ್ನು ತೋರಿಸುತ್ತೇನೆ. ಆ ಠಕ್ಕರು ಗುರು ಇರುವ ಮನೆಯನ್ನೂ ತೋರಿಸುತ್ತೇನೆ. ಆ ಠಕ್ಕರ ಗುರು ಈಗ ಹಳ್ಳಿಯಲ್ಲಿಲ್ಲ. ನೀವು ಆ ಮನೆ ಬಾಗಿಲಿಗೆ ಹೋಗಿ– 'ನಾನು ಠಕ್ಕರ

ಗುರು ಬಂದಿದ್ದೇನೆ' – ಎಂದು ಕೂಗಿಕೊಂಡರೆ ಕದ ತೆಗೆಯು ತ್ತಾರೆ. ನೀವು ಒಳಗೆ ಹೋಗಿ ನಿಮ್ಮ ಯಜಮಾನನ ಒಂಟಿ ಯನ್ನು ಹಿತ್ತಲಲ್ಲಿ ಕಟ್ಟಿದ್ದಾರೋ, ನೋಡಿ. ಆದರೆ ನಾನು ಮಾತ್ರ ನಿಮ್ಮೊಂದಿಗೆ ಮನೆಯುವರೆಗೆ ಬರುವುದಿಲ್ಲ. ಸ್ವಲ್ಪ ಹಿಂದೇ ನಿಲ್ಲುತ್ತೇನೆ" ಎಂದನು.

ಕುದುರೆ ಸವಾರನನ್ನು ಬ್ರಾಹ್ಮಣನು ಈ ಠಕ್ಕರ ಮನೆಗೇ ಕರೆತಂದನು. ಸ್ವಲ್ಪ ದೂರದಲ್ಲೇ ನಿಂತು "ಅದೇ ಮನೆ, ಹೋಗಿ ಕೂಗಿ" ಎಂದನು. ಕುದುರೆ ಸವಾರನು ಮನೆಯು ಮುಂದೆ ಬಂದು ನಿಂತು ಗಟ್ಟಿಯಾಗಿ "ನಾನು ಠಕ್ಕರ ಗುರು ಬಂದಿದ್ದೇನೆ" ಎಂದು ಕೂಗಿಕೊಂಡನು. 'ಠಕ್ಕರ ಗುರು' ಎನ್ನುವ ಮಾತನ್ನು ಕುರಿ ಕಾಯುವ ಯುವಕ ಕೇಳಿದನೋ ಇಲ್ಲವೊ, ಅವನ ಮೈಯೆಲ್ಲ ಉರಿಯಾಯಿತು. ದೊಡ್ಡ ದೊಣ್ಣೆ ಯೊಂದನ್ನು ಎತ್ತಿಕೊಂಡು, ಬಾಗಿಲು ತೆಗೆದು ಹೊರಬಂದು ಕುದುರೆ ಸವಾರನನ್ನು ಹೊಡೆಯಲು ಹೋದನು. ಇದೇ ನೆಂದು ಗಾಬರಿಯಾಗಿ ಆತ ಕುದುರೆಯನ್ನು ಬೇಗ ಓಡಿಸಿ ಕೊಂಡು ಹೊರಡಲು, ಯುವಕ ಠಕ್ಕನೂ ದೊಣ್ಣೆಯೆತ್ತಿ ಕೊಂಡು ಅವನನ್ನು ಅಟ್ಟಿಸಿಕೊಂಡು ಹೋದನು.

ಅಷ್ಟರಲ್ಲಿ ಬ್ರಾಹ್ಮಣನು ಓಡಿಬಂದು, ತೆಗೆದ ಬಾಗಿಲಿ ನಿಂದ ಮನೆಯು ಒಳ ಹೊಕ್ಕು, ಮನೆಯಲ್ಲಿ ಇದ್ದ ಕಟ್ಟಿಗೆ ಯಿಂದ ಮುದುಕನನ್ನು ಹೊಡೆದು "ನಾನು ಇನ್ನೊಬ್ಬ ಠಕ್ಕರ ಗುರು" ಎಂದು ಹೇಳುತ್ತ ಒಳಕೋಣೆಗೆ ನುಗ್ಗಿ ನಾಲ್ಕನೆಯ ಪೆಠಾರಿಯನ್ನು ಎತ್ತಿಕೊಂಡು ತನ್ನ ಮನೆಯು ಕಡೆ ಓಡಿದನು. ಕುದುರೆ ಸವಾರನನ್ನು ಹಿಡಿಯಲಾರದೆ ಯುವಕ ಹಿಂದಿರುಗು ವಷ್ಟರಲ್ಲಿ ಬ್ರಾಹ್ಮಣ ಪರಾರಿಯಾಗಿದ್ದನು.

ಹೀಗೆ ಮುತ್ತು ರತ್ನಗಳಿದ್ದ ನಾಲ್ಕನೆಯ ಪೆಠಾರಿಯೂ

ಬ್ರಾಹ್ಮಣನ ಮನೆ ಸೇರಿತು. "ನನಗೆ ಮೋಸ ಮಾಡಿದ ಠಕ್ಕರು ನನಗಿಂತ ಬುದ್ಧಿವಂತರೇನಲ್ಲ" ಎಂದು ಅವನು ಹೆಂಡತಿಗೆ ಹೇಳಲು, ಆಕೆ ಹೌದೆಂದು ಒಪ್ಪಿದಳು.

ಟಗರು ಟಗ್ಗಣ್ಣ

ತಿಪಟೂರಿನಲ್ಲಿ ಒಬ್ಬಳು ಮುದುಕಿ. ಅವಳ ಮನೆಯಲ್ಲಿ ಇದ್ದವಳು ಅವಳು ಒಬ್ಬಳೇ. ಬೇರೆ ಯಾರೂ ಇರಲಿಲ್ಲ. ಅವಳು ದಿನವೂ ಚಕ್ಕುಲಿ. ಕೋಡುಬಳೆ, ಮುಚ್ಚೋರೆ, ಮುರುಕು, ಜಿಲೇಬಿ ಮುಂತಾದ ತಿಂಡಿಗಳನ್ನು ತಾನೇ ಮನೆ ಯಲ್ಲಿ ಮಾಡಿ, ಮಾರುಕಟ್ಟೆಗೆ ಹೋಗಿ ಮಾರುತ್ತಿದ್ದಳು. ಬಂದ ಹಣದಿಂದ ಜೀವಿಸುತ್ತಿದ್ದಳು.

ಒಂದು ದಿನ ಬೆಳಿಗ್ಗೆ ಈ ತಿಂಡಿಗಳನ್ನೆಲ್ಲ ಮಾಡಿ ಬುಟ್ಟಿ ಯಲ್ಲಿ ತುಂಬಿದಳು. ಅಡುಗೆಯನ್ನೂ ಮುಗಿಸಿ ಮಾರುಕಟ್ಟೆಗೆ ಹೊರಡಲು ಸಿದ್ಧಳಾದಳು. ಅಷ್ಟರಲ್ಲಿ ನೀರು ತರಬೇಕೆಂದು ನೆನಪಾಯಿತು. ಅವಳ ಮನೆಯಲ್ಲಿ ನಲ್ಲಿ ಇರಲಿಲ್ಲ; ಬೀದಿಯ ಕೊಳಾಯಿಯಿಂದಲೇ ನೀರನ್ನು ಹಿಡಿದುಕೊಂಡು ಬರ ಬೇಕು. ಮುದುಕಿ ಕೊಡವನ್ನು ತೆಗೆದುಕೊಂಡು ಬಾಗಿಲು ಹಾಗೆಯೇ ಮುಂದು ಮಾಡಿಕೊಂಡು ಬೀದಿಗೆ ಬಂದಳು. ನಲ್ಲಿಗೂ ಅವಳ ಮನೆಗೂ ತುಂಬ ದೂರ ಏನೂ ಇರಲಿಲ್ಲ. ಮನೆ ಕಾಣಿಸುತ್ತಲೇ ಇತ್ತು : ಬಾಗಿಲಿಗೆ ಬೀಗ ಏನು ಹಾಕು ವುದು ಎಂದುಕೊಂಡಳು.

ನಲ್ಲಿಯು ಬಳಿ ಇನ್ನೊಬ್ಬಳು ಮುದುಕಿಯೊಂದಿಗೆ ಮಾತನಾಡುತ್ತ ನಿಂತಿದ್ದಳು. ಅಷ್ಟರಲ್ಲಿ ದಾರಿಯಲ್ಲಿ ಹೋಗುತ್ತಿದ್ದ ಟಗರು ಒಂದು ಇವಳ ಮನೆಬಾಗಿಲಿಗೆ ಬಂದಿತು. ಒಳಗಿನಿಂದ ತಿಂಡಿಗಳ ಪರಿಮಳ ಅದರ ಮೂಗನ್ನು ಹಿಂಡಿತು. ಏನಿದೆಯೋ ನೋಡೋಣವೆಂದು ಬಾಗಿಲನ್ನು ತನ್ನ ಕೊಂಬಿನಿಂದ ನೂಕಿತು. ಬಾಗಿಲು ತೆಗೆಯಿತು, ಚಿಲಕವೂ ಹಾಕಿರಲಿಲ್ಲ, ಬೀಗವೂ ಹಾಕಿರಲಿಲ್ಲ. ಇದು ಒಳಗೆ ಹೋದದ್ದನ್ನು ಮುದುಕಿ ನೋಡಲಿಲ್ಲ, ಮಾತಿನ ಕಾವಿನಲ್ಲಿ ಇದ್ದಳು.

ಟಗರು ಒಳಗೆ ಹೋಗಿ ನೋಡಿತು. ಎಷ್ಟೊಂದು ತಿಂಡಿ! ಎಷ್ಟೆಷ್ಟು ಬಗೆಯದು ? ಬಣ್ಣ ಹೇಗಿದೆ ? ವಾಸನೆಯೋ ! ಆಹಾ ಅದಕ್ಕೆ ಹಿಡಿಸದಷ್ಟು ಸಂತೋಷ ಆಯಿತು. ಎಲ್ಲವನ್ನೂ ಒಬ್ಬನೇ ತಿನ್ನುತ್ತೇನೆ ಎಂದುಕೊಂಡಿತು. ಒಳಗೆ ಯಾರೂ ಬರದಂತೆ ಬಾಗಿಲಿಗೆ ಅಗುಳಿ ಹಾಕಿ ಭದ್ರಪಡಿಸಿತು. ತಿನ್ನುವ ಮೊದಲು ಇದನ್ನೆಲ್ಲ ಮೈಮೇಲೆ ಏರಿಸಿಕೊಂಡು ಕುಣಿಯುತ್ತೇನೆ ಎಂದುಕೊಂಡು ಕೋಡುಬಳೆಗಳನ್ನು ಕೊಂಬಿಗೆ ತೂರಿಸಿಕೊಂಡಿತು; ಚಕ್ಕುಲಿಗಳನ್ನೆಲ್ಲ ಪೋಣಿಸಿ ಕೊರಳಿಗೆ ಮಾಲೆಯಂತೆ ಹಾಕಿಕೊಂಡಿತು. ಜಿಲೇಬಿಗಳನ್ನು ಕಿವಿಗೆ ಏರಿಸಿತು; ಮುಚ್ಚೋರೆಗಳನ್ನು ಬಳೆಗಳಂತೆ ಮಾಡಿಕೊಂಡು ಕಾಲುಗಳಿಗೆ ತೂರಿಸಿಕೊಂಡಿತು. ಅದರ ಮುಂದೆ ನಿಲುಗನ್ನಡಿಯೂ ಒಂದು ಇದ್ದಿತು. ತನ್ನನ್ನು ತಾನೇ ನೋಡಿಕೊಂಡು ಹಿಗ್ಗಿತು. ಏನು ವೇಷ. ಏನು ರೂಪ ! ಏನು ಸಡಗರ ! ಸಂತೋಷ ತಡೆಯಲಾರದೆ ಥೈ ಥೈ ತಕ್ಕಥೈ ಎಂದು ನೆಗೆದು ಕುಣಿಯಲಾರಂಭಿಸಿತು. ಕುಣಿದಾಗ ಚಕ್ಕುಲಿ ಮಾಲೆಗಳೂ, ಕೋಡುಬಳೆಗಳೂ, ಮುಚ್ಚೋರೆ ಬಳೆಗಳೂ ಗಿಲ್ ಗಿಲ್ ಎಂದು ಸದ್ದು ಮಾಡಿದುವು.

ಸ್ವಲ್ಪ ಹೊತ್ತಾದ ಮೇಲೆ ಮುದುಕಿ ಮಾತನ್ನು ಮುಗಿಸಿ ನೀರನ್ನು ಹಿಡಿದು ಕೊಡವನ್ನು ಹೊತ್ತುಕೊಂಡು ಮನೆಗೆ ಬಂದಳು. ಒಳಗೆ ಹೋಗಲು ಬಾಗಿಲನ್ನು ನೂಕುತ್ತಾಳೆ; ಬಾಗಿಲು ಅಲ್ಲಾಡಲಿಲ್ಲ. ಅವಳಿಗೆ ಆಶ್ಚರ್ಯವಾಯಿತು. 'ಇದೇನಿದು. ನಾನು ಬಂದಾಗ ಬಾಗಿಲಿಗೆ ಬೀಗ ಗೀಗ ಹಾಕದೆ ಮುಂದು ಮಾಡಿಕೊಂಡು ಬಂದಿದ್ದೆ ಅಷ್ಟೆ. ಈಗ ಯಾರು ಒಳಗೆ ಹೋಗಿ ಅಗುಳಿ ಹಾಕಿಕೊಂಡುಬಿಟ್ಟಿದ್ದಾರೆ?" ಎಂದುಕೊಂಡು ಬಾಗಿಲನ್ನು ತಟ್ಟಿ "ಯಾರದು, ಬಾಗಿಲು ತೆಗೆಯಿರಿ " ಎಂದು ಕೂಗಿದಳು.

ಟಗರಿಗೆ ಕೇಳಿಸಿತು. "ಓಹೋ ಬುದ್ಧಿ ಉಪಯೋಗಿಸದಿದ್ದರೆ ಈ ಮುದುಕಿ ಒಳಗೆ ಬಂದು ನನ್ನನ್ನು ಓಡಿಸಿಬಿಡುತ್ತಾಳೆ. ನನಗೆ ಈ ತಿಂಡಿಗಳೆಲ್ಲ ಸೊನ್ನೆ" ಎಂದುಕೊಂಡು ಆ ಟಗರು—

"ಯಾರಾದರೇನು ? ನಾನು ಟಗರು ಟಗ್ಗಣ್ಣ !
ಹುಲಿ ಹುಬ್ಬಣ್ಣ. ಹಂದಿ ಹರಿಯಣ್ಣ !
ಹೆಬ್ಬುಲಿ ಬಂದರೆ ಹಲ್ಲು ಮುರಿಯುವೆ.
ಕಾಡು ಹಂದಿ ಬಂದರೆ ಕೋಡು ಕಡಿಯುವೆ.
ರಾಯರ ದಂಡು ಬಂದರೆ ಹಾಗೇ ಬರಲೋ ?
ಹಗ್ಗ ತರಲೋ? ಗಿಲ್ ಗಿಲ್ ಗಿಲ್ ಗಿಲ್"

ಎಂದು ಕೆಟ್ಟ ದನಿಯಲ್ಲಿ ಅಬ್ಬರಿಸಿತು. ಒಂದು ಸಾರಿ ಮೈ ಅಲ್ಲಾಡಿಸಿದರೆ ಕೋಡುಬಳೆ, ಚಕ್ಕುಲಿ, ಮುಚ್ಚೋರೆ ಎಲ್ಲ 'ಗಿಲ್‌ಗಿಲ್' ಎಂದು ಶಬ್ದ ಮಾಡುತ್ತಿದ್ದುವು.

ಮುದುಕಿಗೆ ಹೆದರಿಕೆಯಾಯಿತು. ಹುಲಿಯನ್ನೂ ಹಂದಿಯನ್ನೂ ರಾಯರ ದಂಡನ್ನೂ ಬೆದರಿಸುವ ಇವನು ಯಾರು ? ಅಥವಾ ಯಾವ ಪ್ರಾಣಿ ? ಅಥವಾ ದೆವ್ವ,

ಭೂತವೋ ? ರಾಕ್ಷಸನೋ ? ಆ 'ಗಿಲ್ ಗಿಲ್' ಶಬ್ದ ಏನು? ಅವಳಿಗೆ ಒಂದೂ ಅರ್ಥವಾಗಲಿಲ್ಲ. ದಾರಿಗೆ ಬಂದು ನೀರನ್ನು ಪಕ್ಕದಲ್ಲಿ ಇಟ್ಟು ತಾನೂ ಕೂತು ಅಳುತ್ತಿದ್ದಳು.

ಅಷ್ಟು ಹೊತ್ತಿಗೆ ಹುಲಿಯೊಂದು ಆ ಕಡೆ ಹೋಗುತ್ತಿತ್ತು. ಮುದುಕಿ ಅಳುತ್ತಿದ್ದುದನ್ನು ನೋಡಿ 'ಅಯ್ಯೋ ಪಾಪ' ಎಂದುಕೊಂಡು ಹತ್ತಿರ ಬಂದು, "ಏನಮ್ಮಾ ಮುದುಕಿ, ಏನಾಯಿತು ?" ಎಂದು ಕೇಳಿತು. ಮುದುಕಿಗೆ ಹುಲಿ ಬಂದುದನ್ನು ಕಂಡು ಹೆದರಿಕೆಯಾಯಿತು. ಆದರೂ, "ನೋಡು ಹುಲಿರಾಯ, ನನ್ನ ಮನೆಯ ಒಳಗೆ ಯಾವುದೋ ಮಾರಿ ಸೇರಿಕೊಂಡುಬಿಟ್ಟಿದೆ. ನನ್ನನ್ನು ಹೊರಗೆ ಹಾಕಿದೆ. ಈಗ ನಾನೇನು ಮಾಡುವುದು ?" ಎಂದು ಇನ್ನೂ ಜೋರಾಗಿ ಅತ್ತಳು.

ಹುಲಿ ಅವಳನ್ನು ಸಂತಯಿಸುತ್ತ "ಅಳಬೇಡ, ಅಳಬೇಡ. ಮುದುಕಮ್ಮ, ನಾನು ಬಾಗಿಲು ತೆಗೆಸುತ್ತೇನೆ. ಮಾರಿಯಾದರೆ ನನಗೇನು ಅಂಜಿಕೆ ಇಲ್ಲ ನೋಡು !" ಎಂದು ಹೇಳಿ ಅವಳ ಮನೆಯ ಬಾಗಿಲ ಬಳಿ ಬಂದು ಬಾಗಿಲನ್ನು ಜೋರಾಗಿ ಅಪ್ಪಳಿಸಿ "ಏ ! ಯಾರು ಒಳಗೆ ? ತೆಗಿ ಬಾಗಿಲು !" ಎಂದು ಆರ್ಭಟಿಸಿತು. ಹುಲಿಯ ಅಬ್ಬರ ಕೇಳಿ ಟಗರೇನು ಹೆದರಲಿಲ್ಲ, ಅದು ಮತ್ತೆ—

"ಯಾರಾದರೇನು ? ನಾನು ಟಗರು ಟಗ್ಗಣ್ಣ !
ಹುಲಿ ಹುಬ್ಬಣ್ಣ ! ಹಂದಿ ಹರಿಯಣ್ಣ !
ಹೆಬ್ಬುಲಿ ಬಂದರೆ ಹಲ್ಲು ಮುರಿಯುವೆ.
ಕಾಡುಹಂದಿ ಬಂದರೆ ಕೋಡು ಕಡಿಯುವೆ.
ರಾಯರ ದಂಡು ಬಂದರೆ ಹಾಗೇ ಬರಲೋ ?

ಹಗ್ಗ ತರಲೋ? ಗಿಲ್ ಗಿಲ್ ಗಿಲ್ ಗಿಲ್!" ಎಂದು ಕೂಗಿ ಹೇಳಿತು.

ಹುಲಿಯೂ ಇಂಥ ಮಾತನ್ನು ಈ ಮುಂಚೆ ಕೇಳಿಯೇ ಇರಲಿಲ್ಲ. ಹುಲಿಯ ಹಲ್ಲನ್ನೂ ಮುರಿಯುವ ಈ ಮಾರಿಯ ದನಿಯೇ ಭಯಂಕರವಾಗಿದ್ದಿತು. ಅದಕ್ಕೂ ಎದೆ ನಡುಗಿತು; ಕೈಕಾಲು ಅಲ್ಲಾಡಿತು; ಧೈರ್ಯ ಉಡುಗಿತು. 'ಈ ಮುದುಕಿಯ ಪಾಡು, ನನಗೇಕೆ ಕಷ್ಟ' ಎಂದುಕೊಂಡು ಹೇಳದೆ ಕೇಳದೆ ಓಡಿಹೋಯಿತು. 'ಏನೋ, ಹುಲಿ ಬಾಗಿಲು ತೆಗೆಸುತ್ತದೆ' ಎಂದುಕೊಂಡಿದ್ದ ಮುದುಕಿ ಮತ್ತೆ ಅಳುವುದಕ್ಕೆ ಶುರು ಮಾಡಿದಳು.

ಅಷ್ಟು ಹೊತ್ತಿಗೆ ಅಲ್ಲಿಗೆ ಒಂದು ಕಾಡುಹಂದಿ ತನ್ನ ಕೋರೆದಾಡೆಯನ್ನು ಮಸೆಯುತ್ತ ಬಂದಿತು. ಅಳುತ್ತಿರುವ ಮುದುಕಿಯನ್ನು ನೋಡಿ ಕನಿಕರಪಟ್ಟು "ಏನು ಮುದುಕಿ? ಏಕೆ ಅಳುತ್ತೀ?" ಎಂದು ಕೇಳಿತು. ಅದಕ್ಕೆ ಮುದುಕಿ "ನೋಡು ಹಂದಿಯಣ್ಣ, ನನ್ನ ಮನೆಗೆ ಯಾವುದೋ ಮಾರಿ ಬಂದು ಸೇರಿಕೊಂಡುಬಿಟ್ಟಿದೆ. ಬಾಗಿಲು ತೆಗೆಯುತ್ತಿಲ್ಲ. ಹುಲಿಯನ್ನೂ ಹೆದರಿಸಿ ಓಡಿಸಿಬಿಟ್ಟಿತು" ಎಂದಳು. ಕಾಡುಹಂದಿ "ನಾನು ತೆಗೆಸುತ್ತೇನೆ, ಸುಮ್ಮನಿರು. ಹುಲಿಗೆ ಧೈರ್ಯ ಸಾಲದು" ಎಂದು ಹೇಳಿ ಅವಳ ಮನೆ ಬಾಗಿಲಿಗೆ ಬಂದು ತನ್ನ ಕೋರೆ ದಾಡೆಯಿಂದ ಬಲವಾಗಿ ಬಡಿದು "ಯಾರದು, ಬಾಗಿಲು ತೆಗಿ" ಎಂದು ಕೂಗಿತು.

ಟಗರು 'ಹುಲಿಯಂತೂ ಹೆದರಿ ಓಡಿತು. ಈಗ ಹಂದಿ ಬಂದಿದೆ, ಇದನ್ನೂ ಓಡಿಸುತ್ತೇನೆ' ಎಂದುಕೊಂಡು ಮತ್ತೆ

"ಯಾರಾದರೇನು? ನಾನು ಟಗರು ಟಗ್ಗಣ್ಣ.

ಹುಲಿ ಹುಬ್ಬಣ್ಣ. ಹಂದಿ ಹರಿಯಣ್ಣ.

ಹೆಬ್ಬುಲಿ ಬಂದರೆ ಹಲ್ಲು ಮುರಿಯುವೆ.
ಕಾಡು ಹಂದಿ ಬಂದರೆ ಕೋಡು ಕಡಿಯುವೆ.
ರಾಯರ ದಂಡು ಬಂದರೆ ಹಾಗೇ ಬರಲೋ ?
ಹಗ್ಗ ತರಲೋ ? ಗಿಲ್ ಗಿಲ್ ಗಿಲ್ ಗಿಲ್" ಎಂದು ಅಬ್ಬರಿಸಿತು.

ಕಾಡುಹಂದಿ ಇದನ್ನು ಕೇಳಿ ನಡುಗಿತು. ತನ್ನ ಕೋಡನ್ನೇ ಕಡಿಯುವ ಈ ಮಾರಿ ಯಾವುದು ಎಂದು ಅದಕ್ಕೆ ತಿಳಿಯಲಿಲ್ಲ; ತಾನು ಬಂದದ್ದು ಇದಕ್ಕೆ ಹೇಗೆ ತಿಳಿಯಿತು ಎಂದೂ ಗೊತ್ತಾಗಲಿಲ್ಲ. ಅದಕ್ಕೂ ಹೆದರಿಕೆಯಾಯಿತು. 'ನನಗೇಕೆ ಈ ಕಷ್ಟ !' ಎಂದುಕೊಂಡು ಮುದುಕಿಗೂ ಹೇಳದೆ ಹಿಂದೆ ನೋಡದೆ ಓಡಿಹೋಯಿತು.

ಮುದುಕಿಯ ಹೆದರಿಕೆ ಹೆಚ್ಚಾಯಿತು. ಏನಿದು ? ಹುಲಿಯೂ ಹೆದರಿ ಓಡಿತು; ಕಾಡುಹಂದಿಯೂ ಅದೇ ದಾರಿ ಹಿಡಿಯಿತು. ಮನೆಯ ಒಳಗೆ ಏನಿರಬಹುದು? ಮತ್ತೆ ಅಳುತ್ತಾ ಕೂತಳು. ಏನು ಮಾಡುತ್ತಾಳೆ ಪಾಪ? ಅಷ್ಟು ಹೊತ್ತಿಗೆ ರಾಯರ ದಂಡು, ಎಂದರೆ ಸಿಪಾಯಿಗಳು, ಸಾಲಾಗಿ ದಾರಿಯಲ್ಲಿ ಹೋಗುತ್ತಿದ್ದರು. ಮುದುಕಿಯು ಓಡಿಹೋಗಿ ಅವರಿಗೆ ತನ್ನ ಕಷ್ಟವನ್ನು ಹೇಳಿಕೊಂಡಳು. ರಾಯರ ದಂಡಿನ ಮುಖಂಡ ತಟಕ್ಕೆಂದು ನಡಿಗೆಯನ್ನು ನಿಲ್ಲಿಸಿ ಎಲ್ಲರನ್ನೂ ಮುದುಕಿಯ ಮನೆಯ ಬಳಿ ಕರೆದುತಂದ. ಎಲ್ಲ ಸಿಪಾಯಿಗಳೂ ಬಂದೂಕನ್ನು ಹಿಡಿದು ಹೊಡೆಯಲು ಸಿದ್ಧರಾದರು. ಮುಖಂಡ ಬಾಗಿಲ ಬಳಿ ಹೋಗಿ ತನ್ನ ಬಂದೂಕಿನಿಂದ ಬಾಗಿಲನ್ನು ಕುಟ್ಟಿ "ಏ! ಯಾರದು ? ಬಾಗಿಲು ತೆಗಿ. ತಡ ಮಾಡಿದರೆ ಗುಂಡು ಹೊಡೆಯುತ್ತೇವೆ, ಜೋಕೆ" ಎಂದು ಜೋರು ಮಾಡಿದ.

ಟಗರು ಈ ಜೋರನ್ನೆಲ್ಲ ಕೇಳುತ್ತದೆಯೆ ? ಮತ್ತೆ–
"ಯಾರಾದರೇನು ? ನಾನು ಟಗರು ಟಗ್ಗಣ್ಣ.
ಹುಲಿ ಹುಬ್ಬಣ್ಣ, ಹಂದಿ ಹರಿಯಣ್ಣ,
ಹೆಬ್ಬುಲಿ ಬಂದರೆ ಹಲ್ಲು ಮುರಿಯುವೆ,
ಕಾಡುಹಂದಿ ಬಂದರೆ ಕೋಡು ಕಡಿಯುವೆ,
ರಾಯರ ದಂಡು ಬಂದರೆ ಹಾಗೇ ಬರಲೋ ?
ಹಗ್ಗ ತರಲೋ ? ಗಿಲ್ ಗಿಲ್ ಗಿಲ್ ಗಿಲ್ !"

ಎಂದು ಅರಚಿತು. ರಾಯರ ದಂಡಿನವರಿಗೆ ಗಾಬರಿ ಆಯಿತು. ಸದ್ಯ, ಓಡಿಹೋಗೋಣವೆಂದು ನಿಶ್ಚಯಿಸಿದರು. ಅಲ್ಲೇ ನಿಂತರೆ ಎಲ್ಲಾದರೂ ಹೊರಗೆ ಬಂದು ಹಗ್ಗದಿಂದ ಕಟ್ಟಿ ಹಾಕುವುದೋ ಏನೋ ಎಂದು ಹೆದರಿಕೆ ಅವರಿಗೆ. ಮುದುಕಿಯನ್ನು ಅಲ್ಲಿಯೇ ಬಿಟ್ಟು, ಬಂದೂಕನ್ನು ಹೆಗಲಿಗೇರಿಸಿ ಹೊರಟುಬಿಟ್ಟರು.

ಈಗ ಮುದುಕಿಯನ್ನು ಕೇಳುವವರು ಯಾರು ? ರಾಯರ ದಂಡೇ ಹೆದರಿ ಓಡಿಹೋದ ಮೇಲೆ ಇನ್ನು ಯಾರು ಕೇಳುತ್ತಾರೆ ? ಮುದುಕಿಗೆ ಏನು ಮಾಡುವುದು ಎಂದೇ ಗೊತ್ತಾಗಲಿಲ್ಲ. ಮತ್ತೆ ಅಳುತ್ತಾ ಕೂತಳು. ಪಕ್ಕದ ಮರದ ಮೇಲಿದ್ದ ಕೋತಿಯೊಂದು ಇದನ್ನೆಲ್ಲ ನೋಡುತ್ತ ಇದ್ದಿತು. ಹುಲಿಯನ್ನೂ, ಕಾಡುಹಂದಿಯನ್ನೂ, ರಾಯರ ದಂಡನ್ನೂ ಒಳಗಿನಿಂದಲೇ ಓಡಿಸಿದ ಈ ಪ್ರಾಣಿ ಯಾವುದೆಂದು ತಿಳಿದುಕೊಳ್ಳಬೇಕು ಎನಿಸಿತು ಅದಕ್ಕೆ. ಮರದಿಂದ ಕೆಳಗೆ ಇಳಿದು ಬಂದು "ಮುದುಕಿ, ಹೆದರಬೇಡ. ಒಳಗೆ ಏನಿದೆ ಎಂದು ನೋಡದೆಯೇ ಅದು ಹೇಳಿದುದಕ್ಕೇ ಹೆದರಿಕೊಂಡು ಹುಲಿಯೂ, ಹಂದಿಯೂ, ರಾಯರ ದಂಡೂ ಓಡಿಹೋದುವು. ನಾನು ನೋಡಿ ಬರುತ್ತೇನೆ, ತಾಳು" ಎಂದು

ಹೇಳಿ ಮನೆಯ ಮೇಲೆ ಹತ್ತಿ ಹೆಂಚನ್ನು ತೆಗೆದು ಒಳಗೆ ಇಣಿಕಿ ನೋಡಿತು. ಆಗ ಅದಕ್ಕೆ ಕಂಡದ್ದೇನು ? ಟಗರು ಕೋಡುಬಳೆ, ಚಕ್ಕುಲಿ, ಮುಚ್ಚೋರೆ ಎಲ್ಲವನ್ನೂ ಮೈ ಮೇಲೆಲ್ಲ ಸಿಕ್ಕಿಸಿಕೊಂಡು ಕುಣಿದಾಡುತ್ತಿದೆ ! ಕೋತಿಗೆ ನಗು ಬಂದಿತು. ಒಂದು ಟಗರು ಹುಲಿಯನ್ನು ಓಡಿಸಿತು, ಹಂದಿಯನ್ನು ಓಡಿಸಿತು, ರಾಯರ ದಂಡೂ ಟಗರಿಗೆ ಹೆದರಿತು ಎಂದರೆ ಯಾರಿಗೆ ನಗು ಬರುವುದಿಲ್ಲ ?

ಆದರೆ ಕೋತಿ ಜಾಣ ಕೋತಿ. ಅದಕ್ಕೆ ಕೋಡುಬಳೆ, ಚಕ್ಕುಲಿ, ಮುಚ್ಚೋರೆ ಎಂದರೆ ಇಷ್ಟ ಇಲ್ಲವೆ ? ಮುದುಕಿಯನ್ನು ಹೊರಗೇ ಬಿಟ್ಟು ತಾನು ಹೆಂಚಿನಿಂದ ಹಾಗೆಯೇ ಕೆಳಗೆ ಇಳಿಯಿತು. ಕೋತಿ ಒಳಗೆ ಬಂದುದನ್ನು ನೋಡಿ ಟಗರು ಬೆಚ್ಚಿತು. ಕೋತಿ ಅದರ ಮೈಮೇಲೆ ಇದ್ದ ತಿಂಡಿಯನ್ನೆಲ್ಲ ಕಿತ್ತುಕೊಂಡು ತಾನು ತಿನ್ನಲು ಶುರುಮಾಡಿತು. ತನಗೆ ಹೊಟ್ಟೆ ತುಂಬಿದ ಮೇಲೆ ಬಾಗಿಲನ್ನು ತೆಗೆಯಿತು. ಟಗರು ಬಿದ್ದೆನೋ ಕೆಟ್ಟೆನೋ ಎಂದು ಹೊರಗೆ ಓಡಿತು. ಹೋಗುವಾಗ ಬಾಗಿಲಲ್ಲಿ ನಿಂತಿದ್ದ ಮುದುಕಿಯನ್ನು ನೂಕಿ, ಬೀಳಿಸಿ, ಅವಳ ಮೇಲೆ ಹಾರಿಹೋಯಿತು.

ಹೀಗಾಗಿ ಮುದುಕಿಗೆ ಒಳಗೆ ಇದ್ದುದೇನು, ಹೊರಗೆ ಹೋದುದೇನು ಎಂದು ತಿಳಿಯಲೇ ಇಲ್ಲ. ಕೋತಿಯೂ ಹೇಳಲಿಲ್ಲ. "ಜಗಳವಾಡಿ ಓಡಿಸಿದ್ದೇನೆ, ನೋಡು" ಎಂದಷ್ಟೆ ಹೇಳಿ ಓಡಿಹೋಯಿತು. ಮುದುಕಿ ಒಳಗೆ ಹೋಗಿ ನೋಡುತ್ತಾಳೆ, ತಾನು ಮಾಡಿದ್ದ ತಿಂಡಿಗಳೇ ಮಾಯ !

ಜಾಣ ಕುರುಡ

ತುಂಬ ಹಿಂದಿನ ಕಥೆ. ಒಂದು ಹಳ್ಳಿ. ಶನಿವಾರ ಸಂತೆ ನಡೆಯುತ್ತಿದ್ದಿತು. ಆಚೆ ಈಚೆ ಹಳ್ಳಿಗಳ ಜನರೆಲ್ಲ ಬಂದು ನೆರೆದಿದ್ದರು. ನೂರಾರು ಅಂಗಡಿಗಳು; ಮಾರುವವರ, ಕೊಳ್ಳುವವರ ಗದ್ದಲ – ನೋಡಲು ಬಂದವರ ಸಂಭ್ರಮ. ಇಷ್ಟರ ನಡುವೆ ಬೀದಿಯ ಬದಿಯಲ್ಲಿ ಒಬ್ಬ ಕುರುಡ ಕುಳಿತು "ಬನ್ನಿ, ರಾಜ, ಬನ್ನಿ ತಮಾಷೆ ನೋಡಿ ಬನ್ನಿ ನಾಲ್ಕಾಣೆ ತಮಾಷೆ, ಎಂಟಾಣೆ ತಮಾಷೆ, ರೂಪಾಯಿ ತಮಾಷೆ. ಇಷ್ಟ ಆಗದಿದ್ದರೆ ದುಡ್ಡು ವಾಪಸ್" ಎಂದು ಕೂಗುತ್ತಿದ್ದ. ಹಳ್ಳಿಯವರು ಈ ಕೂಗನ್ನು ಕಿವಿಗೆ ಹಾಕಿಕೊಳ್ಳದೆ ತಮ್ಮ ವ್ಯಾಪಾರ – ಸಾಪಾರ ನೋಡಿಕೊಳ್ಳುತಿದ್ದರು.

ಆದರೆ ಪಟ್ಟಣದಿಂದ ಬಂದ ಜಾಣನೊಬ್ಬ ಅಲ್ಲಿದ್ದ. ಅವನು ಈ ಕೂಗನ್ನು ಕೇಳಿ ಕುರುಡನ ಬಳಿ ಬಂದ. ಇದೇನು ತಮಾಷೆ ನೋಡೋಣವೆಂದು ಅವನ ಕುತೂಹಲ.'ನೋಡಿ, ಇಷ್ಟವಾಗಲಿಲ್ಲವೆಂದರಾಯಿತು; ದುಡ್ಡು ಹಿಂದಕ್ಕೆ ಬರುತ್ತದೆ. ನೋಡಿದ ಹಾಗೂ ಆಯಿತು ಕಾಸೂ ಉಳಿಯಿತು! ನಾಲ್ಕಾಣೆ ಎಂಟಾಣೆ ತಮಾಷೆ ಎಂಥದು ನೋಡಿಯೇಬಿಡುವ. ಹೇಗೂ ಕೊಟ್ಟ ದುಡ್ಡು ಹಿಂದಕ್ಕೆ ಬರುತ್ತದೆ. ರೂಪಾಯಿ ತಮಾಷೆಯೇ ನೋಡಿದರಾಯಿತು' ಎಂದು ಆಲೋಚನೆ ಮಾಡಿದ. ಅವನ ಬಳಿ ಒಂದು ರೂಪಾಯಿಯೂ ಇದ್ದಿತು. ಕುರುಡನ ಬಳಿ ಬಂದು "ಅಯ್ಯಾ ತಗೋ ರೂಪಾಯಿ. ತಮಾಷೆ ತೋರಿಸು" ಎಂದು ಒಂದು ರೂಪಾಯಿ ಬಿಲ್ಲೆಯನ್ನು ಅವನ ಕೈಯಲ್ಲಿಟ್ಟ.

"ಬನ್ನಿ. ರಾಜ" ಎಂದು ಕುರುಡ ಅವನಿಂದ ರೂಪಾಯನ್ನು ತೆಗೆದುಕೊಂಡು ಅವನ ಹಣೆಯ ಮೇಲೆ ಆದರಿಂದ ತಿಕ್ಕಿ. "ಮೇಲೆ ನೋಡಿ, ಕಾಶಿ, ಕೈಲಾಸ. ಪರಂಧಾಮ ಕಂಡೀತು" ಎಂದ. ಜಾಣ ಕತ್ತನ್ನೆತ್ತಿ ನೋಡಿಯೇ ನೋಡಿದ; ಕಾಶಿಯೂ ಇಲ್ಲ. ಕೈಲಾಸವೂ ಇಲ್ಲ! ಕುರುಡನಿಗೆ "ಏನಯ್ಯಾ ಏನೂ ಕಾಣಿಸದು" ಎನ್ನಲು ಅವನು "ನಿಮಗೆ ಕಣ್ಣಿಲ್ಲ ಅಷ್ಟೆ" ಎಂದುಬಿಟ್ಟ. ಜಾಣನಿಗೆ ಇದು ಬರಿಯ ಮೋಸವೆನಿಸಿತು. "ಎಲಾ ಠಕ್ಕ ದುಡ್ಡು ದೋಚಿಕೊಳ್ಳಲು ಉಪಾಯ ಕಂಡುಹಿಡಿದಿದ್ದೀಯೆ. ಆದರೆ ನಾನೇನು ಮರುಳಾಗಲು ಹೆಡ್ಡನಲ್ಲ. ಕೊಡು ನಾನು ಕೊಟ್ಟ ರೂಪಾಯಿಯನ್ನು, ಸುಮ್ಮನೆ ಬಿಡುವುದಿಲ್ಲ" ಎಂದು ಗದರಿಸಿದ.

ಕುರುಡನೇನು ಜಗ್ಗಲಿಲ್ಲ. "ಓಹೋ, ತುಂಬ ಜಾಣ ನೀನು! ತಮಾಷೆಯನ್ನೂ ನೋಡಿ ದುಡ್ಡನ್ನೂ ಹಿಂದಕ್ಕೆ ಕೇಳುತ್ತೀಯಾ? ನಡಿ ನಡಿ ಕುರುಡನಾದರೂ ನಾನೇನು ಮಡ್ಡಿಯಲ್ಲ" ಎಂದು ದಬಾಯಿಸಿದ. ಇಬ್ಬರ ನಡುವೆ ಜಗಳ ಮೊದಲಾಯಿತು. ಸಂತೆಗೆ ಬಂದವರಲ್ಲಿ ಹಲವರು ಬಂದು ಸೇರಿದರು. ಅವರ ಮುಂದೆ ಕುರುಡ ತನ್ನ ನ್ಯಾಯವನ್ನೊಪ್ಪಿಸಿದ: "ನೋಡಿ, ಈ ಜಾಣನ ಭಂಡತನ! ತಮಾಷೆಯನ್ನು ನೋಡಿ, ಇಷ್ಟವಾಗಲಿಲ್ಲವೆಂದು ಹಣ ಹಿಂದಕ್ಕೆ ಕೇಳುತ್ತಾನೆ. ನೀವಾದರೂ ಬುದ್ಧಿ ಹೇಳಿ, ಕುರುಡನಿಗೆ ಅನ್ಯಾಯ ಮಾಡುವುದೇ" ಎಂದ ಕುರುಡ, ಜನರೆಲ್ಲ ಜಾಣನನ್ನೇ ಬಯ್ದರು. "ಹೋಗಯ್ಯಾ, ಸುಮ್ಮನೆ ಕುರುಡನನ್ನೇಕೆ ವಂಚಿಸುತ್ತೀಯ? ತಮಾಷೆ ನೋಡಿದ ಮೇಲೆ, ದುಡ್ಡನ್ನು ಕೇಳುವುದು ಯಾವ ನ್ಯಾಯ? ಕುರುಡನೆಂದು ನಿನಗೆ ಕನಿಕರ ಇರಬೇಕು; ಅದು

ಬಿಟ್ಟು ಅವನಿಗೇ ಮೋಸ ಮಾಡಲು ಹೋಗುತ್ತೀಯ"
ಎಂದು ಮೂದಲಿಸಿ, ಹೋದರು.

ಪಾಪ, ಜಾಣ ಏನು ತಾನೆ ಮಾಡುತ್ತಾನೆ? ಸುಮ್ಮನಾಗಿ ಬಿಟ್ಟ. ಆದರೆ ಆ ಸ್ಥಳ ಬಿಟ್ಟು ಕದಲಲಿಲ್ಲ. ಸಂಜೆಯಾಗುತ್ತ ಬಂದಾಗ ಸಂತೆಯ ಗದ್ದಲವೂ ಮುಗಿಯಿತು. ಬಂದವರೆಲ್ಲ ಒಬ್ಬೊಬ್ಬರಾಗಿ ಹೋಗತೊಡಗಿದರು. ವ್ಯಾಪಾರಿಗಳೂ ಗಂಟು ಮೂಟೆ ಕಟ್ಟಿದರು, ಕುರುಡನೂ ತನ್ನ ಕಂಬಳಿಯನ್ನು ಸುತ್ತಿ, ಕೋಲನ್ನು ಹಿಡಿದು ಮನೆಯ ಕಡೆ ನಡೆದ. ಜಾಣ ಅವನನ್ನೇ ಹಿಂಬಾಲಿಸಿದ.

ಊರ ಪಕ್ಕದ ಪೆಟ್ಟಿಗೆ ಅಂಗಡಿಯ ಮಗ್ಗುಲಲ್ಲೇ ಕುರುಡನು ವಾಸ ಮಾಡುತ್ತಿದ್ದ ಕೋಣೆಯಿದ್ದಿತು. ಕುರುಡ ಬಂದು ಈ ಕೋಣೆಯ ಬಾಗಿಲಿನ ಬೀಗ ತೆಗೆದು ಒಳಗೆ ಹೋದ; ಹೋದವನೇ ಅಗುಳಿಯನ್ನು ಎಳೆದುಕೊಂಡ. ಅಷ್ಟರಲ್ಲಿ ಜಾಣ ಅವನ ಹಿಂದೆಯೇ ಸರಿದು ಕೋಣೆಯ ಒಳಗೆ ಸೇರಿಬಿಟ್ಟಿದ್ದ.

ಕುರುಡ ಮಾಡದ ಮೇಲೆ ಕೈಯಾಡಿಸಿ ಡಬ್ಬಿಯೊಂದನ್ನು ತೆಗೆದುಕೊಂಡು, ತನ್ನ ಕಿಸೆಯಲ್ಲಿದ್ದ ಹಣವೆಲ್ಲವನ್ನೂ ಅದರೊಳಗೆ ಹಾಕಿದ. ಅನಂತರ ನಾಣ್ಯಗಳನ್ನು ಎಣಿಸಿ ಮತ್ತೆ ಡಬ್ಬಿಯೊಳಗೆ ಹಾಕಿ, ಡಬ್ಬಿಯನ್ನು ಜೋಪಾನವಾಗಿ ಮಾಡದ ಮೇಲಿಟ್ಟ. ಇದನ್ನು ನೋಡುತ್ತಿದ್ದ ಜಾಣ ಸದ್ದು ಮಾಡದೆ ಮಾಡಕ್ಕೆ ಕೈಹಾಕಿ ಆ ಡಬ್ಬಿಯನ್ನು ಎತ್ತಿಕೊಂಡು ತನ್ನ ಕಿಸೆಗೆ ಸೇರಿಸಿಬಿಟ್ಟ.

ಸ್ವಲ್ಪ ಹೊತ್ತಾದ ನಂತರ ಕುರುಡ, ಏನೋ ಜ್ಞಾಪಿಸಿಕೊಂಡು, ಮತ್ತೆ ಡಬ್ಬಿಯನ್ನು ತೆಗೆದುಕೊಳ್ಳಲು ಮಾಡಕ್ಕೆ ಕೈಹಾಕಿದ. ಎಷ್ಟು ತಡಕಾಡಿದರೂ ಡಬ್ಬಿ ಅಲ್ಲಿ ಸಿಗಲಿಲ್ಲ.

ಕುರುಡ ಗಾಬರಿಯಿಂದ ಕೂಗಿಕೊಳ್ಳಲಾರಂಭಿಸಿದ. ಬೀದಿಯಲ್ಲಿ ಓಡಾಡುತ್ತಿದ್ದ ಜನ ಇದೇನೆಂದು ಬಂದು ಆ ಕುರುಡನಿದ್ದ ಕೋಣೆಯ ಕಿಟಕಿಯಿಂದ ಒಳಗೆ ಇಣಿಕಿ ನೋಡಿದರು. ಅಷ್ಟರಲ್ಲಿ ಜಾಣ ಅಲ್ಲಿದ್ದ ಚಾಪೆಯೊಂದರ ಹಿಂದೆ ಅಡಗಿಕೊಂಡುಬಿಟ್ಟ. ಕುರುಡ ಕೂಗಿಕೊಳ್ಳುತ್ತಿರುವುದನ್ನು ಕಂಡು, ಅವರು "ಏನಯ್ಯಾ, ಏನಾಯಿತು ?" ಎಂದು ಕೇಳಿದರು.

ಹಣವಿದ್ದುದನ್ನೂ, ಅದು ಮಾಯವಾದುದನ್ನೂ ಹೇಳಿದರೆ ಅವರು ಕೋಣೆಗೆ ಬಂದು ಹುಡುಕುತ್ತಾರೆ. ಸಿಕ್ಕರೆ ತೆಗೆದುಕೊಂಡು ಹೋಗುತ್ತಾರೆ ಎಂದು ಕುರುಡ ಆಲೋಚನೆ ಮಾಡಿ "ಏನಿಲ್ಲ ಹೊಟ್ಟೆ ನೋಯುತ್ತಿತ್ತು. ತಡೆಯಲಾರದೆ ಕೂಗಿಕೊಂಡೆ ಅಷ್ಟೆ" ಎಂದು ಹೇಳಿದ. ಕೋಣೆಯ ಬಾಗಿಲನ್ನೇನು ತೆಗೆಯಲಿಲ್ಲ. ತನ್ನ ಹಣದ ಡಬ್ಬಿ ಕೋಣೆಯಿಂದ ಹೊರಗೆ ಹೋಗಿಲ್ಲವೆಂಬುದಂತೂ ಅವನಿಗೆ ಖಚಿತವಾಗಿದ್ದಿತು.

ಜನರೆಲ್ಲ ಹೊರಟುಹೋದರು. ಒಬ್ಬ ಕುರುಡ ಮಾತ್ರ ಎಲ್ಲರೂ ಹೋಗುವವರೆಗೂ ಕಾದಿದ್ದು, ಅನಂತರ ಕೋಣೆಯ ಬಾಗಿಲನ್ನು ತಟ್ಟಿ "ನಾನು ಸೀನಪ್ಪ" ಎಂದ. ಅವನ ಧ್ವನಿಯನ್ನು ಕೇಳಿ ಕೋಣೆಯ ಒಳಗಿದ್ದ ಕುರುಡ ಬಾಗಿಲನ್ನು ತೆಗೆದ. ಎರಡನೆಯ ಕುರುಡ ಒಳಗೆ ಬಂದು ಅಗುಳಿ ಹಾಕಿ ಬಾಗಿಲನ್ನು ಭದ್ರ ಮಾಡಿದ ನಂತರ "ಏನಾಯಿತು ?" ಎಂದು ಕೇಳಿದ. ಮೊದಲನೆಯ ಕುರುಡ ಮಾಡದಿಂದ ದುಡ್ಡಿನ ಡಬ್ಬಿ ಮಾಯವಾದ ವಿಚಾರವನ್ನು ಹೇಳಿದ; ಅದಕ್ಕೆ ಎರಡನೆಯ ಕುರುಡ "ನೀನು ಬೆಪ್ಪ, ಹಣವನ್ನು ಹಾಗೆ ಯಾರಾದರೂ ಇಡುತ್ತಾರೆಯೇ ? ನಾನು ಹೇಗಿಟ್ಟದ್ದೇನೆ, ಗೊತ್ತೆ? ಈ ಕೋಲನ್ನು ನೋಡು, ಇದರ ಮೇಲ್ಭಾಗ ತೆಗೆಯಲು

ಬರುತ್ತದೆ. ಕೋಲಿನೊಳಗೆ ಕಂಡಿಯಿದೆ; ಅದರಲ್ಲೇ ಹಣವನ್ನು ಇಟ್ಟಿರುತ್ತೇನೆ. ಯಾವಾಗಲೂ ಹಣ ನನ್ನ ಬಳಿಯೇ ಇರುತ್ತದೆ, ಯಾರಿಗೂ ತಿಳಿಯುವುದಿಲ್ಲ" ಎಂದು ಹೇಳಿ ತನ್ನ ಕೋಲನ್ನು ಮುಂದೆ ಚಾಚಿದ.

ಇದನ್ನು ನೋಡುತ್ತ ಕೇಳುತ್ತಿದ್ದ ಜಾಣ ಆ ಕೋಲನ್ನು ಕುರುಡನ ಕೈಯಿಂದ ತೆಗೆದುಕೊಂಡು ಪಕ್ಕಕ್ಕಿರಿಸಿಕೊಂಡ. ಎರಡನೆಯ ಕುರುಡ "ನೋಡಿದೆಯಾ? ಕೋಲನ್ನು ಕೊಡು" ಎಂದು ಕೇಳಲು ಮೊದಲನೆಯ ಕುರುಡ "ನಿನ್ನ ಕೋಲನ್ನು ನಾನೆಲ್ಲಿ ತೆಗೆದುಕೊಂಡೆ?" ಎಂದು ಕೇಳಿದ. ಜಾಣ ತೆಗೆದುಕೊಂಡದ್ದು ಇಬ್ಬರಿಗೂ ತಿಳಿಯದು. ಎರಡನೆಯ ಕುರುಡ ಸಿಟ್ಟಿಗೆದ್ದು "ಎಂಥ ಮೋಸಗಾರನಯ್ಯ ನೀನು! ಎರಡು ನಿಮಿಷದಲ್ಲೇ ನಿನ್ನ ಕೋಣೆಯಲ್ಲೇ ನನ್ನ ಕೋಲನ್ನು ಹಾರಿಸಿಬಿಟ್ಟೆಯಲ್ಲ! ನಿನಗೇನಾಗಿದೆ ನೋಡೋಣವೆಂದು ಬಂದರೆ ಇದೇ ಏನು ನೀನು ಮಾಡುವುದು? ಒಳ್ಳೆಯ ಮಾತಿನಲ್ಲಿ ಕೋಲನ್ನು ಕೊಡು" ಎಂದು ಕೂಗಿದ.

ಮೊದಲನೆಯ ಕುರುಡ ಕೋಲನ್ನು ಮುಟ್ಟಲೇ ಇಲ್ಲವೆಂದು ಆಣೆಯಿಟ್ಟ. ಎರಡನೆಯ ಕುರುಡ ನಂಬಲಿಲ್ಲ. ಇಬ್ಬರಿಗೂ ಜಗಳ ಶುರುವಾಗಿ ಕೂಗಿಕೊಳ್ಳಲಾರಂಭಿಸಿದರು. ಬೀದಿಯಲ್ಲಿ ಹೋಗುತ್ತಿದ್ದ ಜನ ಮತ್ತೆ ನೆರೆದು ಕೋಣೆಯ ಕಿಟಕಿಯಲ್ಲಿ ಇಣಿಕಿ ನೋಡಿ, "ಒಬ್ಬ ಕುರುಡನಿದ್ದುದು ಈಗ ಇಬ್ಬರಾಗಿದ್ದಾರೆ, ಏನು ಗದ್ದಲ?" ಎಂದು ಕೇಳಿದರು. ಹಣದ ಗುಟ್ಟು ಬಯಲಾಗಬಾರದೆಂದು ಇಬ್ಬರು ಕುರುಡರೂ "ಏನಿಲ್ಲ, ನಮ್ಮ ನಮ್ಮ ವ್ಯವಹಾರವಷ್ಟೆ, ಜಗಳವೇನಿಲ್ಲ. ಸರಿಯಾಗುತ್ತೇವೆ, ಹೋಗಿ" ಎಂದು ಹೇಳಿ ಅವರನ್ನೆಲ್ಲ ಕಳುಹಿಸಿ ಬಿಟ್ಟರು. ಬಾಗಿಲನ್ನು ಮಾತ್ರ ತೆಗೆಯಲಿಲ್ಲ. ಡಬ್ಬಿಯೂ



ಕೋಣೆಯಲ್ಲಿದೆ, ಕೋಲೂ ಕೋಣೆಯಲ್ಲಿದೆ ಎಂದು ಇಬ್ಬರಿಗೂ ಖಾತರಿ.

ಈ ಬಾರಿ ಎಲ್ಲ ಜನರೂ ಹೋದ ಬಳಿಕ ಇನ್ನೊಬ್ಬ ಕುರುಡ ಬಾಗಿಲು ತಟ್ಟಲು ಕಾದು ನಿಂತಿದ್ದ. ಅವನು ಬಾಗಿಲು ತಟ್ಟಿ "ನಾನು ಮಾನಪ್ಪ!" ಎಂದು ಹೇಳಿಕೊಳ್ಳಲು ಒಳಗಿನ ಕುರುಡರಿಬ್ಬರೂ ಬಾಗಿಲನ್ನು ತೆಗೆದು ಅವನನ್ನು ಒಳಗೆ ಕರೆದುಕೊಂಡು ಬಾಗಿಲನ್ನು ಭದ್ರಮಾಡಿದರು. ಕುರುಡರಿಬ್ಬರೂ ತಂತಮ್ಮ ಹಣ ಮಾಯವಾದ ವಿಚಾರವನ್ನು ಮೂರನೆಯ ಕುರುಡನ ಮುಂದೆ ವಿವರಿಸಿದರು. ಅವನು ಅದನ್ನು ಕೇಳಿ "ನೀವಿಬ್ಬರೂ ಹೆಡ್ಡರು. ನನ್ನ ಹಣ ಎಲ್ಲಿದೆ ಗೊತ್ತೆ? ಇಗೋ ಈ ಟೋಪಿಯ ಒಳಪದರದಲ್ಲಿದೆ. ನಾನು ಎಲ್ಲಿದ್ದರೂ ಹಣ ನನ್ನ ಬಳಿಯೇ ಇರುತ್ತದೆ, ಯಾರಿಗೂ ತಿಳಿಯುವುದಿಲ್ಲ. ನೋಡಿ ಈ ಟೋಪಿ" ಎಂದು ಹೇಳಿ ತನ್ನ ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ಅವರ ಮುಂದೆ ಹಿಡಿದ. ಇದನ್ನು ನೋಡುತ್ತ ಕೇಳುತ್ತಿದ್ದ ಜಾಣ ಒಡನೆಯೇ ಸದ್ದಿಲ್ಲದೆ ಮುಂದೆ ಬಂದು ಆ ಟೋಪಿಯನು ತೆಗೆದುಕೊಂಡುಬಿಟ್ಟ. ಸ್ವಲ್ಪ ಹೊತ್ತಾದ ನಂತರ ಕುರುಡ "ನೋಡಿದಿರಾ? ಕೊಡಿ ಟೋಪಿಯನ್ನು" ಎಂದು ಕೇಳಲು ಮೊದಲನೆಯ ಮತ್ತು ಎರಡನೆಯ ಕುರುಡರು "ಮಹರಾಯ, ನಿನ್ನ ಟೋಪಿಯನ್ನು ನಾವು ಮುಟ್ಟಲೇ ಇಲ್ಲ" ಎಂದರು. ಮೂರನೆಯವನು "ಎಲ್ಲಿಯಾದರೂ ಉಂಟೆ? ಈಗಲೇ ನನ್ನ ಕೈಯಿಂದ ತೆಗೆದುಕೊಳ್ಳಲಿಲ್ಲವೆ, ನೀವು? ನನಗೇ ಮೋಸಮಾಡುತ್ತೀರಾ? ಇಬ್ಬರು ಕುರುಡರು ಸೇರಿ ಮತ್ತೊಬ್ಬ ಕುರುಡನಿಗೆ ಅನ್ಯಾಯ ಮಾಡಬಹುದೇ? ಸುಮ್ಮನೆ ನನ್ನ ಟೋಪಿ ಕೊಟ್ಟುಬಿಡಿ, ಬಂದ ಹಾದಿ ಹಿಡಿದು

ಹೋಗುತ್ತೇನೆ. ನಿಮಗೇನು ಕಷ್ಟವೋ ವಿಚಾರಿಸುವ ಎಂದು ಬಂದರೆ ನೀವು ಹೀಗೆ ಮಾಡುವುದೋ ?" ಎಂದು ಕೂಗಾಡಿದ.

ಸರಿ, ಮತ್ತೆ ಅವರ ಜಗಳ ಕೂಗಾಟ ಮೊದಲಾಯಿತು. ಈ ಗದ್ದಲ ಕೇಳಿ ಜನ ಮತ್ತೆ ಅಲ್ಲಿ ನೆರೆದರು. ಅವರು ಕೋಣೆಯ ಕಿಟಕಿಯಲ್ಲಿ ಇಣಿಕಿ ನೋಡಲು ಅವರಿಗೆ ಆಶ್ಚರ್ಯವಾಯಿತು. 'ಇದೇನಿದು' ಮೊದಲು ಒಬ್ಬ ಕುರುಡನಿದ್ದ ; ಆಮೇಲೆ ಇಬ್ಬರಾದರು. ಈಗ ಮೂವರಿದ್ದಾರೆ! ಗಲಾಟೆಯಂತೂ ಹೆಚ್ಚುತ್ತಿದೆ. ಜಗಳವಾಡುತ್ತಿದ್ದಾರೆ,ಬಾಗಿಲು ಮಾತ್ರ ತೆಗೆಯುವುದಿಲ್ಲ' ಎಂದುಕೊಂಡು ಹಳ್ಳಿಯ ಪಟೇಲನಿಗೆ ಹೇಳಿ ಕಳುಹಿಸಿದರು. ಪಟೇಲ ಬಂದು ಬಾಗಿಲು ತೆಗೆಯಿರಿ ಎಂದು ಅಬ್ಬರಿಸಿದ. ಕುರುಡರು ಸದ್ದಿಲ್ಲದೆ ಒಳಗೇ ನಿಂತರು ; ಬಾಗಿಲು ತೆಗೆದರೆ ತಮ್ಮ ಹಣ ಇರುವುದು ಊರವರಿಗೆ ತಿಳಿದೀತೆಂದು ಅವರ ಹೆದರಿಕೆ. ಬಾಗಿಲು ತೆಗೆಯಲಿಲ್ಲ.

ಎಷ್ಟು ಹೇಳಿದರೂ ಬಾಗಿಲು ತೆಗೆಯದಿದ್ದುದರಿಂದ ಪಟೇಲ ಹಳ್ಳಿಯ ತಳವಾರನನ್ನು ಕರೆಯಿಸಿ ಬಾಗಿಲು ಒಡೆಯುವಂತೆ ಅಪ್ಪಣೆ ಮಾಡಿದ. ಜನ ಸೇರಿ ಕೋಲು, ಕಲ್ಲು, ಕೊಡಲಿ, ಪಿಕಾಸಿಗಳನ್ನು ಹಿಡಿದು ಬಾಗಿಲನ್ನು ಒಡೆದರು. ಜಾಣನಿಗೆ ಈಗ ಕಷ್ಟಕ್ಕಿಟ್ಟುಕೊಂಡಿತು. ತಾನು ಒಳಗಿರುವುದನ್ನು ಜನ ನೋಡಿರಲಿಲ್ಲ. ಈಗ ತನ್ನನ್ನು ಅವರು ಹಿಡಿದರೆ ಕಳ್ಳತನ ಪತ್ತೆಯಾಗುವುದೆಂದು ಬಗೆದು ಅವನೂ ಕಣ್ಣು ಮುಚ್ಚಿಕೊಂಡು ಕುರುಡನಂತೆ ನಟಿಸುತ್ತ ನಿಂತ. ಒಳಗೆ ನಾಲ್ಕು ಮಂದಿ ಕುರುಡರಿರುವುದನ್ನು ಜನ ನೋಡಿದರು.'ಒಬ್ಬೊಬ್ಬರಿಗೂ ಎರಡೆರಡು ಏಟು ಬಿಗಿಯಿರಿ!" ಎಂದು ಪಟೇಲ ಅಪ್ಪಣೆ ಮಾಡಿದ.

ಬಾಗಿಲ ಬಳಿಯೇ ಇದ್ದ ಜಾಣನಿಗೇ ಬಿತ್ತು ಮೊದಲ ಪೆಟ್ಟು, ಪೆಟ್ಟು ಬಿದ್ದೊಡನೆ ಅವನು ಕಣ್ಣು ತೆರೆದು "ಅಯ್ಯಾ ನಿಮ್ಮ ಪುಣ್ಯ ! ನಾನು ಹುಟ್ಟು ಕುರುಡ. ಈ ಪೆಟ್ಟು ಬಿದ್ದೊಡನೆ ನನ್ನ ಕಣ್ಣು ಬಂದಿತು. ನಿಮ್ಮ ದೊಣ್ಣೆಯಲ್ಲೇನೋ ಮಹಿಮೆಯಿದೆ ! ದೇವರು ನಿಮ್ಮನ್ನು ನೂರು ಕಾಲ ಇಟ್ಟಿರಲಿ !" ಎಂದು ಹೇಳಿ ಕೋಲನ್ನು ಹಿಡಿದುಕೊಂಡು, ಟೋಪಿಯನ್ನು ತಲೆಗೆ ಏರಿಸಿಕೊಂಡು ಕೋಣೆಯಿಂದ ಹೊರಗೆ ಬಂದು, ಬೀದಿಯಲ್ಲಿ ಜನ ನೋಡುವವರೆಗೂ ನಡೆಯುತ್ತಿದ್ದು ಅನಂತರ ಓಡಿಹೋದ ; ಮೊದಲನೆಯ ಕುರುಡನ ಡಬ್ಬಿ ಅವನ ಕಿಸೆಯಲ್ಲೇ ಇದ್ದಿತು. ಹೀಗೆ ಮೂರೂ ಕುರುಡರ ಹಣವೆಲ್ಲ ಅವನ ಪಾಲಾಯಿತು.

ಪಟೇಲನಿಗೆ ದೊಣ್ಣೆಯ ಪ್ರಭಾವವಿರುವುದು ಸೋಜಿಗವೆನಿಸಿತು. "ಒಬ್ಬ ಕುರುಡನಿಗೆ ಕಣ್ಣು ಬಂದಿತು ; ಉಳಿದ ಮೂವರಿಗೂ ಬಿಗಿಯಿರಿ ! ಅವರಿಗೂ ಕಣ್ಣು ಬರಲಿ !" ಎಂದು ಅಪ್ಪಣೆ ಮಾಡಿದ. ದೊಣ್ಣೆಯ ಸೇವೆ ಮೂವರೂ ಕುರುಡರಿಗೆ ಸಾಕಷ್ಟು ನಡೆಯಿತು ; ಕಣ್ಣು ಮಾತ್ರ ಬರಲಿಲ್ಲ. ಪಟೇಲನಿಗೆ ಇನ್ನಷ್ಟು ಆಶ್ಚರ್ಯವಾಯಿತು. "ಎಲಾ, ನಿಮಗೇಕೆ ಕಣ್ಣು ಬರಲಿಲ್ಲ ? ಆ ನಾಲ್ಕನೆಯ ಕುರುಡನಿಗೆ ಬಂದಿತಲ್ಲ ?" ಎಂದ ಅವನು. ಮೂವರೂ ಕುರುಡರಿಗೆ ಈ ಮಾತಿನಿಂದ ಆಶ್ಚರ್ಯವಾಯಿತು : "ನಾಲ್ಕನೆಯವನು ಯಾರು ? ನಾವು ಮೂವರೇ ಕುರುಡರು ಕೋಣೆಯಲ್ಲಿದ್ದುದು !" ಎಂದರು ಅವರು.

ಆಗ ಮೊದಲಲ್ಲಿ ಕೋಣೆಯಿಂದ ಹೊರಗೆ ಬಂದವನು ಠಕ್ಕನೆಂದು ಜನರಿಗೆ ತಿಳಿದು ಅವನನ್ನು ಅರಸಿಕೊಂಡು ಹಳ್ಳಿಯಲ್ಲೆಲ್ಲ ತಿರುಗಿದರು. ಪಟ್ಟಣದ ಜಾಣ ಹಳ್ಳಿಯಲ್ಲಿ ಸಿಗುತ್ತಾನೆಯೇ ?

ಪೆದ್ದನ ಜಾಣತನ

ಒಂದು ಹಳ್ಳಿಯಲ್ಲಿ ಇಬ್ಬರು ಸ್ನೇಹಿತರು ತುಂಬ ಅನ್ಯೋನ್ಯ ವಾಗಿದ್ದರು; ಅಣ್ಣತಮ್ಮಂದಿರ ಹಾಗೇ ಪ್ರೀತಿಯಿಂದ ಇರುತ್ತಿದ್ದರು. ಆದರೆ ಅವರಲ್ಲಿ ಒಬ್ಬ ತುಂಬ ಜಾಣ, ಚಾಲಾಕು, ಇನ್ನೊಬ್ಬ ಪೆದ್ದ, ಮೊದ್ದು. ಬರುಬರುತ್ತ ಜಾಣನಿಗೆ ಪೆದ್ದನಲ್ಲಿ ಪ್ರೀತಿಗಿಂತ ಅವನನ್ನು ಮೋಸಪಡಿಸಿ ತಾನು ಲಾಭ ಪಡೆಯಬೇಕೆಂಬ ಆಸೆ ಹೆಚ್ಚಾಯಿತು.

ಒಮ್ಮೆ ಇವರಿಬ್ಬರೂ ಕೂಡಿ ಒಂದು ಹಸುವನ್ನೂ, ಒಂದು ಮಾವಿನ ಮರವನ್ನೂ, ಒಂದು ಕಂಬಳಿಯನ್ನೂ ಕೊಂಡರು. ಇಬ್ಬರೂ ಸೇರಿಯೇ ಇವನ್ನು ನೋಡಿಕೊಳ್ಳುತ್ತ, ಅವುಗಳ ಪ್ರಯೋಜನವನ್ನು ಸಮಾನವಾಗಿಯೇ ಪಡೆಯುತ್ತಿದ್ದರು. ಒಂದು ದಿನ ಜಾಣ ಪೆದ್ದನನ್ನು ಕುರಿತು "ಅಯ್ಯಾ ನೆಂಟ, ನಾವು ಹೀಗೇಕೆ ಮಾಡಬಾರದು ? ಈ ವಸ್ತುಗಳನ್ನು ಹೀಗೆ ಕೂಡಿ ಅನುಭವಿಸುತ್ತಿದ್ದರೆ ನಮ್ಮದೆಂಬ ಅಭಿಮಾನವೇ ಬರುವುದಿಲ್ಲ. ಇವನ್ನು ಪಾಲುಮಾಡಿಕೊಳ್ಳೋಣ. ನೋಡಿಕೊಳ್ಳುವುದೂ ಸುಲಭ, ಅನುಭವಿಸುವುದಕ್ಕೂ ಸಂಕೋಚವಿರುವುದಿಲ್ಲ" ಎಂದು ಸಲಹೆ ಮಾಡಿದ.

ಪೆದ್ದ "ಹಾಗೆಯೇ ಆಗಲಿ" ಎಂದು ಒಪ್ಪಿಕೊಂಡ. ಜಾಣ ಹೇಳಿದ "ಈ ಹಸು ಇದೆಯಲ್ಲ, ಅದರ ಮುಂದಿನ ಭಾಗ ನಿನ್ನದಾಗಲಿ, ಹಿಂದಿನ ಭಾಗ ನನ್ನದಿರಲಿ. ಮಾವಿನ ಮರದ ಕೆಳಭಾಗ ನಿನಗಿರಲಿ, ಮೇಲಿನದು ನನಗಿರಲಿ. ಇನ್ನು ಈ ಕಂಬಳಿ, ಹಗಲೆಲ್ಲ ಅದು ನಿನ್ನ ಬಳಿಯಿರಲಿ, ರಾತ್ರಿ ನನ್ನ ಬಳಿಯಿರಲಿ. ಸರಿಯೋ?" ಪೆದ್ದ "ಸರಿ, ಹಾಗೆಯೇ ಆಗಲಿ" ಎಂದ.

ಪಾಪ, ಅವನಿಗೆ ತನ್ನ ಸ್ನೇಹಿತ ತನ್ನನ್ನು ವಂಚಿಸುವನೆಂಬ ಆಲೋಚನೆಯೇ ಬರಲಿಲ್ಲ.

ಹಸುವಿನ ಮುಂದಿನ ಭಾಗ ಪೆದ್ದನದು ತಾನೆ ? ಅದಕ್ಕೆ ಮಾಡಬೇಕಾದುದನ್ನೆಲ್ಲ ಅವನೇ ಮಾಡಬೇಕು. ನೀರು ಕುಡಿಸುವುದು, ಹುಲ್ಲು ತಿನ್ನಿಸುವುದು, ಹಿಂಡಿ ಇಡುವುದು, ಮುಖ ಉಜ್ಜುವುದು, ಕೊಂಬು ತೊಳೆಯುವುದು–ಇವೆಲ್ಲ ಅವನದೇ ಕೆಲಸವಾಯಿತು. ತಿವಿದರೆ ತಿವಿಸಿಕೊಳ್ಳುವವನೂ ಅವನೇ ; ಹಸು ಹಾಯುವುದೂ ಅವನನ್ನೇ. ಜಾಣನಿಗೆ ಈ ತೊಂದರೆಯೇನೂ ಇಲ್ಲ. ಅಷ್ಟಲ್ಲದೆ, ಹಸುವಿನ ಕೆಚ್ಚಲಿದ್ದುದು ಅವನ ಕಡೆಯೇ. ಆದ್ದರಿಂದ ಹಾಲು ಕರೆದುಕೊಳ್ಳುವುದೂ ಅವನೇ. ತನಗೆ ಬೇಕಾದಷ್ಟನ್ನು ಕುಡಿದು, ಉಳಿದುದನ್ನು ಮಾರಿಕೊಂಡು ದುಡ್ಡು ಮಾಡಿಕೊಳ್ಳುತ್ತಿದ್ದ. ಪೆದ್ದನಿಗೇನು ಒಂದು ಹನಿ ಹಾಲನ್ನೂ ಕೊಡುತ್ತಿರಲಿಲ್ಲ. ಹಸು ಹಾಕಿದ ಸೆಗಣಿಯೂ ಜಾಣನದೇ. ಅದನ್ನು ಬೆರಣಿ ತಟ್ಟಿ, ಮಾರಿ, ಇನ್ನಷ್ಟು ದುಡ್ಡು ಸಂಪಾದಿಸುತ್ತಿದ್ದ.

ಇನ್ನು ಮಾವಿನ ಮರ. ಕೆಳಗಿನ ಭಾಗ ಪೆದ್ದನದು. ಮರಕ್ಕೆ ಪಾತಿ ಮಾಡುವುದು. ನೀರೆರೆಯುವುದು, ಗೊಬ್ಬರ ಹಾಕುವುದು, ಕಸ ತೆಗೆಯುವುದು ಎಲ್ಲ ಅವನ ಕೆಲಸವೇ. ಮೇಲಿನ ಭಾಗ ಜಾಣನದು. ಕಾಲದಲ್ಲಿ ದಂಡಿಯಾಗಿ ಹಣ್ಣು ಬಿಡುತ್ತಿತ್ತು ; ಅವೆಲ್ಲ ಜಾಣನದೇ. ತನಗೆ ಬೇಕಾದಷ್ಟನ್ನು ತಿಂದು, ಉಳಿದುದನ್ನು ಮಾರಿಬಿಡುತ್ತಿದ್ದ. ಕಷ್ಟಪಡುವವನು ಪೆದ್ದ, ಅದರ ಫಲ ಅನುಭವಿಸುವವನು ಜಾಣ !

ಹೋಗಲಿ, ಕಂಬಳಿಯ ವಿಚಾರದಲ್ಲಿಯಾದರೂ ಪೆದ್ದ ಸುಖಪಟ್ಟನೆ ? ಹಗಲೆಲ್ಲ ಅದು ಅವನ ಬಳಿ ಇರುತ್ತಿತ್ತು. ಸೂರ್ಯನಿದ್ದು ಬಿಸಿಲು ಕಾಯುವಾಗ ಕಂಬಳಿ ಯಾರಿಗೆ

ಬೇಕು ? ಅದೇ, ರಾತ್ರಿ ಛಳಿಯಾದಾಗ ಅದನ್ನು ಹೊದೆದು ಕೊಳ್ಳುತ್ತಿದ್ದವನು ಜಾಣ! ಎಷ್ಟಾದರೂ ಜಾಣನೇ ಅವನು. ಹಗಲು ಕಂಬಳಿಯಿಂದ ಪೆದ್ದನಿಗೆ ಉಪಯೋಗವಿಲ್ಲ. ರಾತ್ರಿ ಬೇಕಾದಾಗ ಅದು ತನ್ನ ಬಳಿಯಿಲ್ಲ! ಪೆದ್ದ ಪೆದ್ದನೇ!

ಪೆದ್ದನಿಗೆ ತುಂಬ ಬೇಜಾರಾಯಿತು. ಮನಸ್ಸಿಗೆ ದುಃಖವೂ ಆಯಿತು. ಆದರೆ ಅವನೇ ಒಪ್ಪಿಕೊಂಡಿದ್ದ ವಿಚಾರವಷ್ಟೇ ಇದು ? ಏನು ಮಾಡುವುದು ?

ಹೀಗೆಯೇ ಬಹು ದಿನ ನಡೆಯಿತು. ಒಂದು ದಿನ ಸಂಜೆ ಪೆದ್ದ ತನ್ನ ಕಷ್ಟವನ್ನು ನೆನಸಿಕೊಂಡು ಕಣ್ಣೀರಿಡುತ್ತ ತನ್ನ ಗುಡಿಸಲ ಮುಂದೆ ಕುಳಿತಿದ್ದ. ಜಾಣ ಎಲ್ಲಿಯೋ ಹೋಗಿದ್ದ, ಆಗ ಆ ದಾರಿಯಲ್ಲಿ ಹೋಗುತ್ತಿದ್ದ ಸಂನ್ಯಾಸಿಯೊಬ್ಬನು ಪೆದ್ದನನ್ನು ನೋಡಿ "ಏನಯ್ಯಾ, ಅಳುತ್ತಿದ್ದೀ ? ಏನು ಕಷ್ಟ ಹೇಳು" ಎಂದು ಕೇಳಿದ. ಪೆದ್ದ ತಾನು ಜಾಣನೊಂದಿಗೆ ನಡೆಸುತ್ತಿದ್ದ ವ್ಯವಹಾರವನ್ನೆಲ್ಲ ಹೇಳಿಕೊಂಡ. ಸಂನ್ಯಾಸಿ ನಕ್ಕು "ಓಹೋ, ಅಂಥ ಜಾಣನೋ ಅವನು! ಇರಲಿ, ನೀನು ನಾಳೆಯಿಂದ ಹೀಗೆ ಮಾಡು" ಎಂದು ಪೆದ್ದನಿಗೆ ಗುಟ್ಟಾಗಿ ಕೆಲವು ಮಾತುಗಳನ್ನು ಹೇಳಿ ಹೊರಟುಹೋದ.

ಮರುದಿನ ಬೆಳಿಗ್ಗೆ ಪೆದ್ದನು ಹಸುವಿಗೆ ನೀರನ್ನೂ ಕುಡಿಸ ಲಿಲ್ಲ, ಬೂಸವನ್ನೂ ಇಡಲಿಲ್ಲ, ಹುಲ್ಲನ್ನೂ ತಿನ್ನಿಸಲಿಲ್ಲ. ಜಾಣ ಏಕೆ ಮಾಡಲಿಲ್ಲವೆಂದು ಕೇಳಿದ. "ಅದು ನನ್ನ ಭಾಗದ ವಿಚಾರ. ನಿನಗೇನು?" ಎಂದ ಪೆದ್ದ. ಸರಿ, ಜಾಣನು ತಾನೇ ಆ ಕೆಲಸ ವನ್ನು ಮಾಡಿ ಹಾಲನ್ನು ಕರೆದುಕೊಳ್ಳಲು ಕುಳಿತ. ಒಡ ನೆಯೇ ಪೆದ್ದ ಕಟ್ಟಿಗೆಯೊಂದನ್ನು ತಂದು ಹಸುವಿನ ಮುಖಕ್ಕೆ ಹೊಡೆಯಲಾರಂಭಿಸಿದ. ಹೆದರಿದ ಹಸು ಹಾಲು ಕರೆಯುತ್ತ ದೆಯೆ ? ಜಾಣ "ಏಕೆ ಹಾಗೆ ಹೊಡೆಯುತ್ತಿ ?" ಎಂದು

ಕೇಳಲು ಪೆದ್ದ "ಮುಖ ನನ್ನ ಭಾಗವಷ್ಟೆ. ನಾನು ಏನಾದರೂ ಮಾಡಿಕೊಳ್ಳುತ್ತೇನೆ. ನಿನ್ನದೇನು ಅಡ್ಡಿ ? ನಿನ್ನ ಭಾಗಕ್ಕೇನು ಕೈ ಹಾಕಲಿಲ್ಲವಲ್ಲ!" ಎಂದು ಉತ್ತರ ಕೊಟ್ಟ. ಹೀಗಾಗಿ ಜಾಣ ಹಾಲು ಕರೆದುಕೊಳ್ಳುವುದೇ ನಿಂತಿತು. ವಿಧಿಯಿಲ್ಲದೆ, ಪೆದ್ದನಿಗೆ ಹಾಲಿನಲ್ಲಿ ಅರ್ಧಭಾಗ ಕೊಡುತ್ತೇನೆಂದು ಜಾಣ ಒಪ್ಪಿಕೊಳ್ಳಬೇಕಾಯಿತು.

ಮಾವಿನ ಮರದಲ್ಲಿ ಹೀಚುಕಾಯಿ ತುಂಬ ಇದ್ದುವು. ಆ ಬಾರಿ ಮಾವಿನ ಹಣ್ಣು ಬಹಳ ಬರುವ ನಿರೀಕ್ಷೆಯಿಂದ ಜಾಣ ಸಂತೋಷವಾಗಿದ್ದ. ಇದ್ದಕ್ಕಿದ್ದಂತೆ ಒಂದು ದಿನ ಬೆಳಿಗ್ಗೆ ಪೆದ್ದ ಕೊಡಲಿಯೆತ್ತಿಕೊಂಡು ಮರವನ್ನು ಬುಡ ದಲ್ಲಿ ಕಡಿಯಲಾರಂಭಿಸಿದ. ಜಾಣನಿಗೆ ಇದನ್ನು ನೋಡಿ ಆಶ್ಚರ್ಯವೂ, ಗಾಬರಿಯೂ ಆಯಿತು. ಬುಡವನ್ನೇ ಕಡಿದುಬಿಟ್ಟರೆ ಹಣ್ಣು ಬರುವುದು ಹೇಗೆ? ಪೆದ್ದನ ಬಳಿ ಓಡಿಬಂದು "ಏನಯ್ಯಾ, ಏನು ಮಾಡುತ್ತಿದ್ದೀ ?" ಎನ್ನಲು ಪೆದ್ದ ಸಾವಧಾನವಾಗಿ "ಇದು ನನ್ನ ಭಾಗ, ಇದರ ಮೇಲಿನ ಅಧಿಕಾರ ನನ್ನದೇ. ನಾನು ಏನನ್ನಾದರೂ ಮಾಡಿಕೊಳ್ಳು ತ್ತೇನೆ. ನಿನಗೇಕೆ ಅದರ ಗೊಡವೆ? ಕಾಯಿಗಾಗಲೀ, ಹಣ್ಣಿ ಗಾಗಲಿ, ಎಲೆಗಾಗಲೀ, ಕೈಯಿಟ್ಟಿದ್ದೇನೆಯೆ?" ಎಂದುಬಿಟ್ಟ.

ಜಾಣ ಈಗ ಪೇಚಾಟಕ್ಕೆ ಸಿಕ್ಕಿದ. ತನ್ನ ಆಟ ನಡೆಯು ದೆಂದು ಅವನಿಗೆ ಮನವರಿಕೆಯಾಯಿತು. "ಬೇಡ ಮಹಾ ರಾಯ, ಮರವನ್ನು ಕಡಿಯಬೇಡ. ಹಣ್ಣಿನಲ್ಲಿ ಅರ್ಧಭಾಗ ನಿನಗೆ ಕೊಡುತ್ತೇನೆ" ಎಂದು ಪೆದ್ದನೊಂದಿಗೆ ಒಪ್ಪಂದ ಮಾಡಿಕೊಂಡ ಮೇಲೆ ಅವನು ಮರ ಕಡಿಯುವುದನ್ನು ನಿಲ್ಲಿಸಿದ.

ಇಷ್ಟರಲ್ಲಿ ಛಳಿಗಾಲ ಬಂದಿತು. ಹಗಲೆಲ್ಲ ಪೆದ್ದ ಕಂಬಳಿ

ಯನ್ನು ಹೊದ್ದಿರುತ್ತಿದ್ದ. ಒಂದು ದಿನ ಸಂಜೆಯಾದೊಡನೆ ಪೆದ್ದ ಕಂಬಳಿಯನ್ನು ನೀರಿನಲ್ಲಿ ಅದ್ದಿ ಜಾಣನ ಜಾಗದಲ್ಲಿ ಇಟ್ಟುಬಿಟ್ಟ. ಕೆಲಸವನ್ನೆಲ್ಲ ಮುಗಿಸಿ, ಜಾಣ ರಾತ್ರಿಯ ಛಳಿಯನ್ನು ತಡೆಯಲಾರದೆ ಕಂಬಳಿಯನ್ನು ಹೊದೆದು ಕೊಳ್ಳೋಣವೆಂದು ಕೈಗೆತ್ತಿಕೊಂಡರೆ ಅದು ಒದ್ದೆಮುದ್ದೆ! ಅವನಿಗೆ ತಡೆಯಲಾರದ ಸಿಟ್ಟು ಬಂದಿತು. ಪೆದ್ದನ ಬಳಿ ಹೋಗಿ "ಏನಯ್ಯಾ ಇದು? ನೀನು ಮಾಡಿರುವುದು!" ಎಂದು ರೇಗಿದ. ಪೆದ್ದನೇನು ಮುನಿಸಿಕೊಳ್ಳಲಿಲ್ಲ. ಸಾವಧಾನ ವಾಗಿಯೇ "ಹಗಲೆಲ್ಲ ಕಂಬಳಿಯ ಮೇಲಿನ ಅಧಿಕಾರ ನನ್ನದ ಲ್ಲವೇ? ಆಗ ನಾನು ಅದನ್ನು ಏನನ್ನಾದರೂ ಮಾಡುತ್ತೇನೆ. ಕೇಳುವುದಕ್ಕೆ ನೀನು ಯಾರು? ರಾತ್ರಿಯೇನಾದರೂ ಅದನ್ನು ನಾನು ಮುಟ್ಟಲು ಬಂದರೆ ಆಗ ಕೇಳು!" ಎಂದ ಪೆದ್ದ.

ಜಾಣನಿಗೆ ಜ್ಞಾನೋದಯವಾಯಿತು. ತನ್ನ ಜಾಣತನ ಇನ್ನು ನಡೆಯುವುದಿಲ್ಲವೆಂದು ಅವನಿಗೆ ಅರ್ಥವಾಯಿತು. ನಿಜವಾಗಿ ತಾನೇ ಪೆದ್ದ. ತಾನು ಪೆದ್ದನೆಂದು ತಿಳಿದುಕೊಂಡ ವನೇ ಜಾಣ ಎನ್ನುವುದು ಅವನಿಗೆ ತಿಳಿಯಿತು.

ಜಾಣರೆಂದು ಜಂಭ ಪಡುವವರು ಕಾಲು ಜಾರದೆ ಇರು ತ್ತಾರೆಯೆ? ಪೆದ್ದರು ಬುದ್ಧಿವಂತರಾಗುವುದು ಅಸಾಧ್ಯವೇ?

ಬಂಗಾರದ ದೊರೆ, ಕತ್ತೆಯ ಕಿವಿ

ಹಿಂದೆ, ಸಾವಿರಾರು ವರ್ಷಗಳ ಹಿಂದೆ, ಒಂದು ದೇಶದ ಲ್ಲೊಬ್ಬ ದೊರೆಯಿದ್ದ. ಅವನ ಹೆಸರು ಮಹೀದಾಸ. ಅವನ ಐಶ್ವರ್ಯ ಅಪಾರವಾಗಿತ್ತು. ಆದರೂ ಅವನಷ್ಟು ಜಿಪುಣ

ದೇಶದಲ್ಲೇ ಮತ್ತೊಬ್ಬನಿರಲಿಲ್ಲ ಬಂಗಾರವೆಂದರಂತೂ ಅವನು ಬಾಯಿ ಬಾಯಿ ಬಿಡುತ್ತಿದ್ದ. ಅರಮನೆಯ ಬಾಗಿಲು, ಕಿಟಕಿಗಳೆಲ್ಲ ಶ್ರೀಗಂಧದಿಂದ ಮಾಡಿದ್ದುವು. ಕಿಟಕಿಯ ಸರಳುಗಳು ಬಾಗಿಲ ಅಗುಳಿ ಎಲ್ಲ ಬಂಗಾರದವೇ. ಕೂಡುವ ಕುರ್ಚಿ,ಬರೆಯುವ ಮೇಜು ಕೂಡ ಬಂಗಾರದ್ದು. ಅವನ ಬಟ್ಟೆಬರೆಗಳೆಲ್ಲಾ ಬಂಗಾರದ ಎಳೆಗಳಿಂದ ಮಾಡಿದ ಕಸೂತಿಯವು. ಇಷ್ಟಿದ್ದರೂ ದಿನಾ ಬೆಳಗಾಗುತ್ತಲೆ, ರಾತ್ರಿಯಾಗುತ್ತಲೇ ಅವನು ತನ್ನ ಖಜಾನೆಯಲ್ಲಿ ಕೂತು ತನ್ನ ಹಣವನ್ನೆಲ್ಲ ಗಂಟೆಗಟ್ಟಲೆ ಎಣಿಸುತ್ತಿದ್ದ. ಹಾಗೆ ಎಣಿಸುವುದರಲ್ಲೇ ಅವನಿಗೆ ಆನಂದ! ನಿದ್ದೆ, ಆಹಾರಗಳನ್ನೂ ಬಿಟ್ಟು ದುಡ್ಡು ಎಣಿಸುತ್ತಿದ್ದ ಈ ದೊರೆಗೆ ಆಸೆಯೋ ವಿಪರೀತವಾಗಿತ್ತು. ಬಂಗಾರವನ್ನು ಎಷ್ಟು ನೋಡಿದರೂ ಅವನಿಗೆ ತೃಪ್ತಿಯಿಲ್ಲ. ಎಷ್ಟು ಬಂಗಾರ ಅವನ ಕೈ ಸೇರಿದರೂ ಅವನಿಗೆ ಸಮಾಧಾನವಿಲ್ಲ.

ಹೀಗಿರಲು ಒಂದು ದಿನ ಅವನು ಸಿಂಹಾಸನದ ಮೇಲೆ ಕೂತು ಸಭೆ ನಡೆಸುತ್ತಿದ್ದಾಗ ಹೊರಗಡೆ ಗದ್ದಲವಾಯಿತು; ಏನೆಂದು ಎಲ್ಲರೂ ಕೇಳುತ್ತಿರುವಷ್ಟರಲ್ಲೇ ಕೆಲವು ಸೈನಿಕರು ಒಬ್ಬ ಯಕ್ಷನನ್ನು ಹಿಡಿದುತಂದರು. ಯಕ್ಷನೆಂದರೆ ಏನೆಂದು ಬಲ್ಲಿರಾ? ಯಕ್ಷರು ಭೂಮಿಯ ಜನರಲ್ಲ; ದೇವಲೋಕದಲ್ಲಿ ಅವರ ವಾಸ. ಅವರಿಗೆ ಸಂಗೀತ, ನೃತ್ಯವೆಂದರೆ ಬಲು ಇಷ್ಟ. ಅವರ ಒಡೆಯ ದೇವೇಂದ್ರ. ಅವರು ಕೆಲವು ಬಾರಿ ದೇವಲೋಕದಲ್ಲಿ ಅಲೆಯುತ್ತಿರುವಾಗ ಕಾಲುಜಾರಿ ಕೆಳಗೆ ಬೀಳುವುದುಂಟು; ಆಗ ಅವರಿಗೆ ಪುನಃ ಮೇಲೆ ಹೋಗುವುದು ಬಲು ಪ್ರಯಾಸ. ಹೀಗೆ ಒಬ್ಬ ಯಕ್ಷ ಮಹೀದಾಸನ ಅರಮನೆಯ ಹಿಂದಣ ತೋಟದಲ್ಲಿ ಬಿದ್ದುಬಿಟ್ಟಿದ್ದ. ಅವನನ್ನೇ ಭಟರು

ಹಿಡಿದು ಆಸ್ಥಾನಕ್ಕೆ ಕರೆತಂದು ದೊರೆಯ ಮುಂದೆ ನಿಲ್ಲಿಸಿದ್ದರು.

ದೊರೆ ಯಕ್ಷನನ್ನು ಸ್ವಾಗತಿಸಿ ತನ್ನ ಅರಮನೆಯಲ್ಲೇ ಅವನನ್ನು ಕೆಲವು ದಿನ ಇರಿಸಿಕೊಂಡು, ನಂತರ ತಾನೇ ಅವನನ್ನು ದೇವೇಂದ್ರನ ಬಳಿಗೊಯ್ದು ಒಪ್ಪಿಸಿದ. ದೇವೇಂದ್ರ ಸಂತೋಷಪಟ್ಟು"ಮಿತ್ರ,ಮಹೀದಾಸ, ಒಳ್ಳೆಯದನ್ನು ಮಾಡಿದ್ದೀಯೆ. ನಿನಗೆ ಬೇಕಾದುದೊಂದು ವರವನ್ನು ಕೇಳು" ಎಂದನು. ಅದಕ್ಕೆ ಮಹೀದಾಸ "ಒಡೆಯಾ, ನಿನ್ನ ದಯೆಯಿಂದ ನನಗೆ ಎಲ್ಲ ಸೌಲಭ್ಯವೂ ಇದೆ. ಆದರೆ ಸಾಕಷ್ಟು ಸಂಪತ್ತಿಲ್ಲ. ನಾನು ಮುಟ್ಟಿದುದೆಲ್ಲ ಬಂಗಾರ ಆಗುವಂತೆ ವರವನ್ನು ಅನುಗ್ರಹಿಸು" ಎಂದು ಕೇಳಿಕೊಂಡನು. ದೇವೇಂದ್ರನಿಗೆ ನಗು ಬಂದಿತು. ಏಕೆಂದರೆ ಮಹೀದಾಸನಿಗೆ ಅಪಾರವಾದ ಸಂಪತ್ತಿದ್ದುದು ಅವನಿಗೆ ತಿಳಿದಿದ್ದಿತು. ಆದರೂ ವರವನ್ನು ಅನುಗ್ರಹಿಸಿದನು.

ದೊರೆಗಂತೂ ಹಿಡಿಸಲಾರದಷ್ಟು ಸಂತೋಷವಾಯಿತು. ದೇವೇಂದ್ರನ ನಗರಿಯಿಂದ ತನ್ನ ಅರಮನೆಗೆ ಹಿಂತಿರುಗುವ ದಾರಿಯಲ್ಲಿ ಕಾಡೊಂದಿದ್ದಿತು. ಮುಟ್ಟಿದುದನ್ನು ಬಂಗಾರವಾಗಿಸುವ ಶಕ್ತಿ ತನಗೆ ಬಂದಿದೆಯೋ ಇಲ್ಲವೋ ನೋಡೋಣವೆಂದು ದಾರಿಯ ಪಕ್ಕದಲ್ಲಿದ್ದ ಮರದ ಸುತ್ತ ಸುತ್ತಿದ್ದ ಬಳ್ಳಿಯೊಂದನ್ನು ಕಿತ್ತು ಕೈಗೆ ತೆಗೆದುಕೊಂಡನು. ಓ, ಅವನ ಬೆರಳುಗಳು ಹಸುರು ಬಳ್ಳಿಯನ್ನು ಮುಟ್ಟಿದೊಡನೆ ಅದು ಮಿರುಗುಮಿರುಗುವ ಬಂಗಾರದ ಬಳ್ಳಿಯಾಗಿಬಿಟ್ಟಿತು! ಇನ್ನೂ ಪರೀಕ್ಷಿಸೋಣವೆಂದು ದೊರೆ ಬಗ್ಗಿ ನೆಲದ ಮೇಲೆ ಬಿದ್ದಿದ್ದ ಕಲ್ಲೊಂದನ್ನು ಎತ್ತಿಕೊಂಡ; ಒಡನೆಯೇ ಅದು ಬಂಗಾರದ ಗಟ್ಟಿಯಾಗಿಬಿಟ್ಟಿತು. ದೊರೆಗೆ ಆನಂದವೋ ಆನಂದ! ಮೈ

ಉಬ್ಬಿಹೋಯಿತು ; ಕಣ್ಣುಗಳು ಹೊಳೆದುವು ; ಕುಣಿಯುತ್ತ ನೆಗೆಯುತ್ತ ಮುಂದೆ ನಡೆದನು. ದಾರಿಯುದ್ದಕ್ಕೆ ಬಿದ್ದಿದ್ದ ಕಲ್ಲನ್ನೆಲ್ಲ ಎತ್ತಿಕೊಂಡು ತನ್ನ ಕಿಸೆಗೆ ತುಂಬಿಕೊಂಡ ; ಅವೆಲ್ಲವೂ ಬಂಗಾರದ ಗಟ್ಟಿಯಾಗಿದ್ದುವು. ಅವು ಮಾತ್ರವಲ್ಲ, ಅವನು ಹಾಕಿಕೊಂಡಿದ್ದ ಕೋಟೂ ಬಂಗಾರದ್ದಾಗಿದ್ದಿತು. ಅವನು ತನ್ನ ತಲೆಯ ಮೇಲಿದ್ದ ರುಮಾಲನ್ನು ಮುಟ್ಟಿಕೊಂಡೊಡನೆ ಅದೂ ಬಂಗಾರದ್ದಾಗಿಬಿಟ್ಟಿತು. ಬಂಗಾರವೇನು ಸಾಮಾನ್ಯ ಭಾರವೇ ! ಬಟ್ಟೆ ಬರೆಯೆಲ್ಲ ಬಂಗಾರ, ತಲೆಯ ರುಮಾಲು ಬಂಗಾರ, ಕಿಸೆಯೊಳಗೋ ಬಂಗಾರದ ಗಟ್ಟಿಗಳು ಹತ್ತಾರು! ಇಷ್ಟನ್ನೂ ಹೊತ್ತು ದಣಿದು ನಿಟ್ಟುಸಿರು ಬಿಡುತ್ತ ಅಂತೂ ಇಂತೂ ಅರಮನೆ ಸೇರಿದ.

ಇಷ್ಟಕ್ಕೆ ಅವನಿಗೆ ಸಮಾಧಾನವಾಯಿತೆ? ತನ್ನ ಅರಮನೆಯ ಉದ್ಯಾನದಲ್ಲಿದ್ದ ಮಾವಿನ ಹಣ್ಣುಗಳನ್ನು ಮುಟ್ಟಿದ, ಅವು ಬಂಗಾರವಾದುವು; ಪಕ್ಕದಲ್ಲಿದ್ದ ಸಂಪಿಗೆ ಮರದಿಂದ ಕೆಲವು ಹೂಗಳನ್ನು ಆಯ್ದುಕೊಂಡ, ಅವೂ ಬಂಗಾರವಾದುವು. ಮೆಟ್ಟಲುಗಳನ್ನು ಹತ್ತಿ ಬರುತ್ತ ಕಂಬಗಳನ್ನೆಲ್ಲ ಮುಟ್ಟಿದ, ಅವೂ ಬಂಗಾರವಾದುವು. ಈ ವಿಚಿತ್ರವನ್ನು ನೋಡಿ ಮಂತ್ರಿಗಳು, ಪರಿಜನರು, ಊಳಿಗದವರು ಎಲ್ಲರೂ ಅಚ್ಚರಿಗೊಂಡರು. ಆದರಿಂದ ದೊರೆಗೆ ತೃಪ್ತಿಯಾಗಲಿಲ್ಲ. ನೆರೆಯೂರಿನ ಅರಸರೆಲ್ಲ ಬಂದು ತನ್ನ ಅದ್ಭುತ ಶಕ್ತಿಯನ್ನು ನೋಡಿ ತಲೆದೂಗಲಿ, ನಾಚಿಕೊಳ್ಳಲಿ, ಅಸೂಯೆ ಪಡಲಿ ಎಂಬುದು ಅವನ ಮನಸ್ಸಿನಲ್ಲಿದ್ದಿತು. ತನ್ನ ಮಂತ್ರಿಯನ್ನು ಕರೆದು ಮರುದಿನವೇ ದೊಡ್ಡ ಔತಣ ಸಮಾರಂಭವನ್ನು ಏರ್ಪಡಿಸಲು ಅಪ್ಪಣೆ ಮಾಡಿದ. ಅದಕ್ಕೆ ಎಲ್ಲ ಊರಿನ ಎಲ್ಲ ಅರಸರಿಗೂ ಆಹ್ವಾನ ಹೋಯಿತು.

ಮರುದಿನ ಬೆಳಗಾಯಿತು. ಅರಮನೆಯಲ್ಲೆಲ್ಲ ಸಂಭ್ರಮ. ನೂರಾರು ರಾಜರು ನೆರೆದಿದ್ದಾರೆ; ವಿಚಿತ್ರವನ್ನು ನೋಡಲು ಸಾವಿರಾರು ಸಾಮಂತರೂ ಸೇರಿದ್ದಾರೆ. ರಾಜನ ವಿಶಾಲವಾದ ಭೋಜನಶಾಲೆಯಲ್ಲಿ ಅತಿಥಿಗಳೆಲ್ಲ ಕೂತಿದ್ದಾರೆ; ಅವರೆದುರು ದಿವ್ಯವಾದ ರುಚಿ ರುಚಿಯಾದ, ಭಕ್ಷ್ಯಭೋಜ್ಯಗಳು ಕಾಯುತ್ತಿವೆ. ರಾಜರೆಲ್ಲ ಮಹೀದಾಸನ ಆಗಮನವನ್ನೇ ಕಾಯುತ್ತಿದ್ದಾರೆ. ಸಮಯಕ್ಕೆ ಸರಿಯಾಗಿ ದೊರೆ ಒಳಕ್ಕೆ ಬಂದ. ನಿಗಿನಿಗಿ ಮಿರುಗುವ ಬಂಗಾರದ ಕಿರೀಟ, ಬಂಗಾರದ ಬಟ್ಟೆ, ಬಂಗಾರದ ಹಾವುಗೆ, ಕೈಯಲ್ಲಿ ಬಂಗಾರದ ಬೆತ್ತ. ನಗುನಗುತ್ತ ಜಂಬದಿಂದ ಠೀವಿಯಿಂದ ಮಹೀದಾಸ ಬಂದು ತನಗಾಗಿ ಸಿದ್ಧಪಡಿಸಿದ್ದ ಆಸನದ ಮೇಲೆ ಕೂತ. ಅನಂತರ ಊಟ ಆರಂಭವಾಯಿತು. ನೆರೆದವರೆಲ್ಲ ಪಾಯಸ, ಮೇಲೋಗರ, ದಧ್ಯನ್ನ, ಕೇಸರೀಲಾಡು, ಚಕ್ಕುಲಿ, ಸಂಡಿಗೆ, ಹಯಗ್ರೀವ ಮುಂತಾದ ರುಚಿರುಚಿಯಾದ ಭಕ್ಷ್ಯಭೋಜ್ಯಗಳನ್ನು ತಿಂದು ಸಂತೋಷಪಡಲಾರಂಭಿಸಿದರು.

ದೊರೆ ನೆರೆದವರಿಗೆ ಒಂದು ಅಚ್ಚರಿಯನ್ನು ತೋರಿಸಬೇಕೆಂದು ತನ್ನ ಮುಂದಿಟ್ಟಿದ್ದ ಗಾಜಿನ ಲೋಟವನ್ನು ಮೇಲೆತ್ತಿದ. ಅದರಲ್ಲಿ ಮಧು ಮಿಶ್ರಿತವಾದ ನೀರಿದ್ದಿತು. ಎಲ್ಲರೂ ನೋಡುತ್ತಿದ್ದಂತೆಯೇ ಗಾಜಿನ ಲೋಟ ಬಂಗಾರದ ಲೋಟವಾಗಿಬಿಟ್ಟಿತು. ನೀರನ್ನು ಕುಡಿಯಬೇಕೆಂದು ಲೋಟವನ್ನು ತುಟಿಗೆತ್ತಿಕೊಂಡೊಡನೆ ನೀರು ಗಂಟಲಿಗೆ ಹೋಗುವ ಬದಲು ಬಂಗಾರದ ಗಟ್ಟಿಯಾಗಿಬಿಟ್ಟಿತು! ಇದನ್ನು ದೊರೆ ನಿರೀಕ್ಷಿಸಿರಲಿಲ್ಲ! ಬಾಯಾರಿಕೆಯಿಂದ ಬಳಲುತ್ತಿದ್ದ ದೊರೆ ಭಕ್ಷ್ಯಗಳನ್ನಾದರೂ ತಿನ್ನೋಣವೆಂದು ಕೈಹಾಕಿದ. ಓ, ಅವೂ ಎಲ್ಲಾ ಬಂಗಾರದ ಗಟ್ಟಿಗಳಾಗಿಬಿಟ್ಟುವು! ಬಂಗಾರದ ಪಾಯಸವನ್ನು

ಸೇವಿಸುವುದು ಹೇಗೆ? ಬಂಗಾರದ ಹಪ್ಪಳ, ಬಂಗಾರದ ಸಂಡಿಗೆ, ಬಂಗಾರದ ಚಕ್ಕುಲಿ, ಬಂಗಾರದ ಲಾಡು – ನೋಡ ಲೇನೋ ಚೆಂದ – ಆದರೆ ತಿನ್ನುವುದು ಹೇಗೆ? ಹಣ್ಣು ತಿನ್ನೋಣವೆಂದರೆ ಅದೂ ಬಂಗಾರ. ನೀರು ಕುಡಿಯೋಣ ವೆಂದರೆ ಅದೂ ಬಂಗಾರ, ತಾಂಬೂಲವನ್ನು ಹಾಕಿ ಕೊಳ್ಳೋಣವೆಂದರೆ ಅದೂ ಬಂಗಾರ! ಹೀಗಾದರೆ ನೀರಡಿಕೆ ಇಂಗುವುದು ಹೇಗೆ? ಹಸಿವು ಆರುವುದು ಹೇಗೆ? ಕುಡಿ ಯದೆ, ತಿನ್ನದೆ ಬದುಕುವುದು ಹೇಗೆ? ದೊರೆಯ ಪರಿಸ್ಥಿತಿಯನ್ನು ನೋಡಿ ನೆರೆದವರೆಲ್ಲ ಮುಖ ಮುಚ್ಚಿಕೊಂಡು ನಗಲಾರಂಭಿಸಿದರು. ದೊರೆಗೆ ಹಸಿವು ನೀರಡಿಕೆಗಳೊಂದಿಗೆ ನಾಚಿಕೆಯೂ ಆಗಿ ಅಲ್ಲಿಂದ ಅಂತಃಪುರಕ್ಕೆ ಓಡಿಬಿಟ್ಟನು.

ಮಹೀದಾಸ ತನ್ನ ಕೋಣೆಗೆ ಬರುವ ದಾರಿಯಲ್ಲೇ ಅವನ ಮಗಳೂ ಮಗನೂ ಮುಂದೆ ಬಂದರು; ದೊರೆ ಪ್ರೀತಿ ಯಿಂದ ಮಕ್ಕಳನ್ನು ತಬ್ಬಿಕೊಂಡ – ಅಯ್ಯೋ, ಒಡನೆಯೇ ಆ ಮುದ್ದು ಮಕ್ಕಳೂ ಬಂಗಾರದ ಪ್ರತಿಮೆಗಳಾಗಿ ನಿಂತು ಬಿಟ್ಟರು.ಜೀವದಿಂದ ಕಳೆಗೂಡಿ ಓಡಿಯಾಡುತ್ತಿದ್ದ ಮಕ್ಕಳು ಬಂಗಾರದ ಪುತ್ಥಳಿಗಳಾದರೆ ತಂದೆಗೆ ಹೇಗನಿಸಬೇಕು? ಮಹೀದಾಸ ಅಲ್ಲೇ ಕುಸಿದುಬಿದ್ದು ಗೋಳಾಡತೊಡಗಿದನು. ಹೌಹಾರಿ ಹತ್ತಿರ ಬಂದ ಹೆಂಡತಿಯನ್ನು ಮುಟ್ಟಬೇಡೆಂದು ಕೂಗಿ ಹೇಳಿ ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿ ಕೊಂಡು ಅಳತೊಡಗಿದನು. ಇಡೀ ರಾತ್ರಿಯೆಲ್ಲ ಆರ್ತನಾಗಿ, ಅತ್ತು, ಬೆಳಕು ಹರಿದೊಡನೆ ದೇವೇಂದ್ರನಗರಿಯ ದಾರಿ ಹಿಡಿದು ಓಡಿದನು. ಎಲ್ಲೂ ನಿಲ್ಲಲಿಲ್ಲ.

ಅಲ್ಲಿ ದೇವೇಂದ್ರನ ಮುಂದೆ ತಲೆ ಬಗ್ಗಿಸಿ ನಮಸ್ಕಾರ ಮಾಡಿ "ಒಡೆಯಾ, ನನ್ನನ್ನು ಬಂಗಾರದ ವಿಪತ್ತಿನಿಂದ ಪಾರು

ಮಾಡು !" ಎಂದು ತನ್ನ ಕಥೆಯನ್ನೆಲ್ಲ ಹೇಳಿಕೊಂಡನು. ದೇವೇಂದ್ರ ನಕ್ಕು "ಮಿತ್ರ, ಅದು ಬಂಗಾರದ ತಪ್ಪಲ್ಲ. ನಿನ್ನ ಆಶೆಯ ತಪ್ಪು. ಬಂಗಾರದಿಂದ, ಐಶ್ವರ್ಯದಿಂದ ನಮಗೆ ಪ್ರಯೋಜನವುಂಟು. ನಮ್ಮ ಉಪಯೋಗಕ್ಕೆಂದೇ ಅವು ಇರುವುದು. ಆದರೆ ಅದೇ ಎಲ್ಲವೂ ಎಂದರೆ ಹೇಗೆ ? ಅದು ಎಷ್ಟು ಬೇಕೋ ಅಷ್ಟನ್ನು ಮಾತ್ರ ಒಪ್ಪಿಕೊಳ್ಳಬೇಕು. ನಾವು ಅದನ್ನು ಆಳಬೇಕೆ ವಿನಾ, ಅದು ನಮ್ಮನ್ನು ಆಳಲು ಎಡೆ ಮಾಡಿಕೊಡಬಾರದು. ಇರಲಿ, ನೀನು ಹೋಗಿ ಇಲ್ಲಿಗೆ ಒಂದು ಮೈಲಿ ದೂರದಲ್ಲಿರುವ ಜೀವಿಕಾ ಎಂಬ ನದಿಯಲ್ಲಿ ಸ್ನಾನ ಮಾಡು; ಈ ಬಂಗಾರ ಮಾಡುವ ಶಕ್ತಿ ಹೋಗಿ ಮುಂಚಿನಂತೆಯೇ ಆಗುವಿ" ಎಂದು ಹೇಳಿಕಳುಹಿಸಿದನು. ದೊರೆ ಉಸಿರು ಹಿಡಿದು ಒಂದು ಮೈಲನ್ನು ಒಂದೇ ಕ್ಷಣದಲ್ಲಿ ಓಡಿ ಆ ನದಿಗೆ ದೊಪ್ಪೆಂದು ಹಾರಿಬಿದ್ದನು. ಮೇಲೆದ್ದೊಡನೆ ತನ್ನ ಬಂಗಾರದ ಬಟ್ಟೆಯೆಲ್ಲ ಕರಗಿ ನೀರಿನಲ್ಲಿ ಬೆರೆತು ಹರಿದು ಹೋಯಿತು. ನೀರಿನಿಂದ ಮೇಲೆ ಬಂದೊಡನೆ ಅಲ್ಲಿದ್ದ ಬಂಡೆಗಳನ್ನು ಮುಟ್ಟಿ ನೋಡಿದನು ; ಅದೇನು ಬಂಗಾರವಾಗಲಿಲ್ಲ. ಸದ್ಯ ಬದುಕಿದೆನೆಂದು ದೊರೆ ಸಂತೋಷಪಟ್ಟನು.

ಅರಮನೆಗೆ ಹಿಂತಿರುಗಿ ತನ್ನ ಮಕ್ಕಳ ಮೂರ್ತಿಗಳನ್ನು ಮುಟ್ಟಿದನು ; ಮಕ್ಕಳು ಮತ್ತೆ ಜೀವಂತರಾಗಿ ನಗೆದಾಡ ತೊಡಗಿದರು. ಅವರನ್ನು ನೋಡಿ ದೊರೆಗೆ ಎಷ್ಟೋ ಆನಂದವಾಯಿತು. ಎಲ್ಲವನ್ನೂ ಮತ್ತೆ ಹಿಂದಿದ್ದಂತೆಯೇ ಮಾಡಿ ದೊರೆ, ಅತಿಯಾಸೆಯನ್ನೂ ಜಿಪುಣತನವನ್ನೂ ಬಿಟ್ಟು ಸುಖವಾಗಿದ್ದನು.

ಪಾಪ ! ಆ ದೊರೆಗೆ ಇನ್ನೊಂದು ವಿಪತ್ತು ಕಾದಿದ್ದಿತು. ಅದು ನಡೆದುದು ಹೀಗೆ :

ಮಹೀದಾಸನಿಗೂ ದೇವೇಂದ್ರನಿಗೂ ಸ್ನೇಹವಿತ್ತಷ್ಟೆ. ಇಲ್ಲಿ ಬೇಜಾರಾದಾಗ ಮಹೀದಾಸ ಕೆಲವು ಸಾರಿ ದೇವೇಂದ್ರ ನಗರಿಗೆ ಹೋಗಿ ವಿಹರಿಸುತ್ತಿದ್ದ. ಹೀಗೆ ಒಮ್ಮೆ ಅಲ್ಲಿಗೆ ಹೋಗಿದ್ದಾಗ ತುಂಬುರು ನಾರದರ ಗಾನಸ್ಪರ್ಧೆ ನಡೆಯು ತ್ತಿದ್ದಿತು. ತುಂಬುರು ಮತ್ತು ನಾರದ ಇವರ ಹೆಸರನ್ನು ಕೇಳಿದ್ದೀರಾ? ಇಬ್ಬರೂ ದೇವಲೋಕದ ದೊಡ್ಡ ಹಾಡು ಗಾರರು; ಅವರು ತಂಬೂರವನ್ನು ಮೀಟುತ್ತ ಹಾಡತೊಡಗಿ ದರೆಂದರೆ ಇಡೀ ದೇವಲೋಕವೇ ಪರವಶವಾಗಿ ಬಿಡುತ್ತಿತ್ತು! ಈ ಇಬ್ಬರಲ್ಲಿ ಯಾರು ಹೆಚ್ಚು ಎಂಬುದು ಆ ದಿನದ ಸ್ಪರ್ಧೆ. ಮಹೀದಾಸ ಅಲ್ಲಿಗೆ ಹೋದಾಗ ದೇವೇಂದ್ರನ ಮುಂದೆ ಸ್ಪರ್ಧೆ ನಡೆಯುತ್ತಿತ್ತು. ಅವನು ಅಲ್ಲಿಗೆ ಹೋದೊಡನೆ ದೇವೇಂದ್ರ "ಮಿತ್ರ ಮಹೀದಾಸ! ಒಳ್ಳೆಯ ಸಮಯಕ್ಕೆ ಬಂದೆ, ಬಾ. ಇವರಿಬ್ಬರ ಗಾಯನವನ್ನು ಸ್ವಲ್ಪ ಕೇಳಿ ಇವರಿಬ್ಬ ರಲ್ಲಿ ಯಾರು ಹೆಚ್ಚೆಂದು ಹೇಳು, ನೋಡೋಣ" ಎಂದನು. ಆಗಲೆಂದು ಮಹೀದಾಸನೂ ಅಲ್ಲಿ ಕೂತು ತುಂಬುರು–ನಾರದ ರಿಬ್ಬರ ಸಂಗೀತವನ್ನೂ ಸ್ವಲ್ಪ ಹೊತ್ತು ಆಲಿಸಿ "ನನಗೇನೋ ತುಂಬುರುವಿನ ಗಾಯನವೇ ಮೆಚ್ಚಿಕೆಯಾಯಿತು; ಇಬ್ಬರಲ್ಲಿ ಅವನೇ ಹೆಚ್ಚೆಂದು ನನಗೆ ತೋರುತ್ತದೆ" ಎಂದನು.

ಈ ಮಾತಿನಿಂದ ತುಂಬುರುವಿಗೆ ಆನಂದವಾಯಿತು; ಆದರೆ ನಾರದನಿಗೆ ಸಿಟ್ಟು ಬಂದಿತು. ತಟ್ಟನೆ ನಾರದ ಮೇಲೆದ್ದು "ಈ ತೀರ್ಪನ್ನು ಕೊಟ್ಟ ಹೆಡ್ಡನಿಗೆ ಕತ್ತೆಯ ಕಿವಿಗಳು, ಅಷ್ಟೆ. ಅವನಿಗೆ ಸಂಗೀತ ತಿಳಿಯದು!" ಎಂದು ರೇಗಾಡಿದನು. ನಾರದ ಹೀಗೆ ಹೇಳಿದ್ದೇ ತಡ, ಮಹೀ ದಾಸನ ಕಿವಿಗಳು ನಿಜವಾಗಿ ಕತ್ತೆಯ ಕಿವಿಗಳಾಗಿಬಿಟ್ಟುವು! ಅವನು ಈಗೇನು ಮಾಡಬೇಕು? ಎಷ್ಟು ನಾಚಿಕೆಗೇಡು?

ಅಲ್ಲಿಂದ ಬಿರಬಿರನೆ ಓಡಿಬಂದು ಅರಮನೆಯನ್ನು ಸೇರಿ ತನ್ನ ಮಂತ್ರಿಯನ್ನು ಕರೆದು "ಅಯ್ಯಾ, ನನಗೆ ಒಂದು ದೊಡ್ಡ ರುಮಾಲನ್ನು ತಕ್ಷಣ ತಯಾರಿಸಲು ಹೇಳು" ಎಂದು ಅಪ್ಪಣೆ ಮಾಡಿದನು. ಮಾತನಾಡುವಾಗ ದೊರೆ ಕಿವಿಯು ಸುತ್ತ ಶಾಲನ್ನು ಸುತ್ತಿಕೊಂಡಿದ್ದರಿಂದ ಅವನ ಕತ್ತೆಯ ಕಿವಿ ಮಂತ್ರಿಗೆ ಕಾಣಲಿಲ್ಲ.

ಅಂದಿನಿಂದ ಅರಸನು ತಲೆಗೆ ಕಿವಿಗಳನ್ನು ಮುಚ್ಚುವಂಥ ದೊಡ್ಡ ರುಮಾಲನ್ನು ಯಾವಾಗಲೂ ಧರಿಸಿರುತ್ತಿದ್ದನು. ಅವನ ಪರಿಜನರಿಗೂ, ಊರ ಜನರಿಗೂ ಯಾರಿಗೂ ಅವನ ಕತ್ತೆಯ ಕಿವಿಗಳ ವಿಚಾರ ತಿಳಿದೇ ಇರಲಿಲ್ಲ. ಆದರೆ ದೊರೆಗೆ ಕ್ಷೌರ ಮಾಡಲು ಬರುತ್ತಿದ್ದ ಕ್ಷೌರಿಕನಿಗೆ ತಿಳಿಯದೇ ಇರಲು ಸಾಧ್ಯವಿರಲಿಲ್ಲ. ರುಮಾಲು ತೆಗೆಯದೆ ಅವನು ಕ್ಷೌರ ಮಾಡುವುದು ಹೇಗೆ? ರುಮಾಲು ತೆಗೆದರೆ ಕತ್ತೆಯ ಕಿವಿಗಳು ಕಂಡೇ ಕಾಣುತ್ತವೆ! ಹೀಗಾಗಿ ಇಡೀ ಪ್ರಪಂಚದಲ್ಲಿ ದೊರೆಯ ಕತ್ತೆಯ ಕಿವಿಗಳ ಗುಟ್ಟನ್ನು ತಿಳಿದಿದ್ದವನು ಆ ಕ್ಷೌರಿಕನೊಬ್ಬನೇ. ಆದರೆ ದೊರೆ "ಎಲಾ, ನೀನು ಈ ವಿಚಾರ ಯಾರಿಗಾದರೂ ಹೇಳಿದೆಯೆಂದರೆ ನಿನ್ನ ತಲೆ ತೆಗೆಯಿಸಿಬಿಡುತ್ತೇನೆ, ನೋಡಿಕೋ!" ಎಂದು ಅವನನ್ನು ಹೆದರಿಸಿದ್ದನು.

ಪಾಪ, ಆ ಕ್ಷೌರಿಕನಿಗೆ ಪ್ರಾಣಸಂಕಟ. ಅವನ ಸ್ವಭಾವವೋ, ಯಾವ ಗುಟ್ಟನ್ನೂ ಇನ್ನೊಬ್ಬರ ಮುಂದೆ ಹೇಳಿದರೇನೇ ಅವನ ಮನಸ್ಸಿಗೆ ಸಮಾಧಾನ; ಇಲ್ಲದಿದ್ದರೆ ತನ್ನ ತಲೆಯ ಒಳಗೆ ಯಾವುದೋ ಗುಂಗಾಡಿ ಸೇರಿಕೊಂಡು ಪೀಡಿಸುತ್ತಿರುವಂತೆ ಒದ್ದಾಡುವನು. ಈ ದೊರೆಯ ಕಿವಿಗಳ ಗುಟ್ಟನ್ನು ಹೇಗೆ ರಟ್ಟು ಮಾಡದೆ ಇರುವುದು? ಅವನಿಗೆ ಇದೇ ಒಂದು ದೊಡ್ಡ ತೊಂದರೆಯಾಗಿ ಬಿಟ್ಟಿತು. ಅದಕ್ಕೆ

ಅವನು ಏನು ಮಾಡುತ್ತಿದ್ದ ಬಲ್ಲಿರಾ? ದೊರೆಗೆ ಕ್ಷೌರ ಮಾಡಿ ಹೋದಾಗಲೆಲ್ಲ ಊರಾಚೆಯ ಹೊಳೆಯ ದಡಕ್ಕೆ ಓಡಿ,ಅಲ್ಲಿ ಯಾರೂ ಇಲ್ಲದಿದ್ದಾಗ ಮುಖವನ್ನು ಜೊಂಡುಗಳ ಮಧ್ಯೆ ಸೇರಿಸಿ, ಸಣ್ಣ ದನಿಯಲ್ಲಿ,

"ದೊರೆಗೆ ಕತ್ತೆಯ ಕಿವಿಗಳು! ದೊರೆಗೆ ಕತ್ತೆಯ ಕಿವಿಗಳು!" ಎಂದು ಹೇಳಿಬಿಡುತ್ತಿದ್ದ. ಹೀಗೆ ಹೇಳಿದ ನಂತರ ಅವನ ಮನಸ್ಸು ಹಗುರವಾಗುತ್ತಿತ್ತು. ಹೀಗೆ ಎಷ್ಟೋ ವರ್ಷಗಳು ಕಳೆದುವು. ಕ್ಷೌರಿಕನು ಯಾವ ಮನುಷ್ಯನ ಮುಂದೂ ಗುಟ್ಟನ್ನು ಹೇಳಲೇ ಇಲ್ಲ; ಜನಗಳಿಗೂ ದೊರೆಗೆ ಕತ್ತೆಯ ಕಿವಿಗಳಿವೆಯೆಂದು ತಿಳಿಯಲೇ ಇಲ್ಲ.

ಆದರೆ ಆ ಜೊಂಡುಗಳಿಗೆ ಈ ಗುಟ್ಟು ಪಾಠವಾಗಿ ಬಿಟ್ಟಿತು. ಕ್ಷೌರಿಕ ಮತ್ತೆ ಮತ್ತೆ ಅಲ್ಲೇ ಹೋಗಿ ಅದೇ ಮಾತನ್ನೇ ಹೇಳುತ್ತಿದ್ದನಷ್ಟೆ; ಅದನ್ನು ವರ್ಷಾನುಗಟ್ಟಳೆ ಕೇಳಿ ಕೇಳಿ ಜೊಂಡುಗಳು ಗಾಳಿಗೆ ತೂರಾಡುವಾಗೆಲ್ಲ ಅಲ್ಲಿ ಸುಳಿದಾಡಿದವರಿಗೆ– "ದೊರೆಗೆ ಕತ್ತೆಯ ಕಿವಿಗಳು! ದೊರೆಗೆ ಕತ್ತೆಯ ಕಿವಿಗಳು!" ಎಂಬ ಸಣ್ಣ ದನಿಯ ಮಾತು ಕೇಳಿಸುತ್ತಿತ್ತು. ಮೊದಮೊದಲು ಅದನ್ನು ಯಾರೂ ಗಮನಿಸಲಿಲ್ಲ. ಕ್ರಮೇಣ ದೊರೆಗೆ ಕತ್ತೆಯ ಕಿವಿಗಳಿರಬಹುದೆಂಬ ಸಂಶಯ ಕೆಲವು ಜನರಲ್ಲಿ ಉಂಟಾಯಿತು. ಆದರೆ ಅದನ್ನು ನೋಡಿದವರು ಯಾರು? ಊರಾಚೆ ಹೊಳೆಯ ದಡದ ಜೊಂಡಿನ ಮಾತನ್ನು ನಿಜವೆಂದು ಯಾರು ನಂಬುವರು? ದಡ್ಡರು ತಾನೆ? ದೊರೆಯಂತೂ ತನ್ನ ದೊಡ್ಡ ರುಮಾಲಿಗೆ ಜರಿಯನ್ನೂ ಗರಿಯನ್ನೂ ಸೇರಿಸಿಕೊಂಡು ಎಲ್ಲರಿಗಿಂತ ಹೆಚ್ಚಿನ ಠೀವಿಯಲ್ಲೇ ನಡೆಯುತ್ತಿದ್ದ.

ನ್ಯಾಯದ ಗಂಟೆ

ಯುೂರೋಪ್ ಖಂಡದಲ್ಲಿ ಇಟಲಿ ಎನ್ನುವ ದೇಶವಿದೆ. ಆ ದೇಶದಲ್ಲಿ ತುಂಬ ಹಿಂದೆ, ನೂರಾರು ವರ್ಷಗಳ ಹಿಂದೆ ನಡೆದ ಕಥೆ ಇದು. ಅಲ್ಲಿ ಅಬ್ರುಸ್ಸ್ಯೋ ಎಂಬ ಪ್ರದೇಶದಲ್ಲಿ ಅತ್ರಿ ಎನಿಸಿಕೊಂಡ ಊರಿದ್ದಿತು. ಈಗ ಆ ಊರೂ ಇಲ್ಲ, ಅದರ ನೆನಪಿರುವವರೂ ಇಲ್ಲ. ಈ ಕಥೆ ನಡೆದ ಕಾಲದಲ್ಲಿ ಆ ಊರಿನಲ್ಲಿ ರಿ-ಗಿಯೋವಾನ್ನಿ ಎನ್ನುವ ಅರಸನು ಆಳುತ್ತಿದ್ದನು. ಈಗೇನೋ ಯಾರೂ ಆ ಅರಸನ ಹೆಸರನ್ನು ಕೇಳಿಲ್ಲ. ಇದೇ ಹೆಸರಿನ ಅರಸರು ಹಲವಾರು ಮಂದಿ ಮುಂದೆ ಆಗಿ ಹೋದರಾಗಿ ಈ ಅರಸನನ್ನು ಜನ ಮರೆತುಬಿಟ್ಟಿದ್ದಾರೆ.

ಈ ಅರಸ ತುಂಬ ಒಳ್ಳೆಯವನು. ಯಾರಿಗೆ ಅನ್ಯಾಯವಾದರೂ ಅವನು ಸಹಿಸುತ್ತಿರಲಿಲ್ಲ. ಊರಿನಲ್ಲಿ ಯಾರಾದರೂ ತೊಂದರೆಗೆ ಈಡಾದರೆ ಅವರ ತೊಂದರೆಯನ್ನು ಒಡನೆಯೇ ಪರಿಹರಿಸಲು ಅವನು ಕಾತರನಾಗಿರುತ್ತಿದ್ದನು. ಬಡವರಾಗಲೀ, ಭಾಗ್ಯವಂತರಾಗಲೀ, ಆಳುಗಳಾಗಲೀ, ಅಧಿಕಾರಿಗಳಾಗಲೀ, ಹೆಂಗಸರಾಗಲೀ, ಗಂಡಸರಾಗಲೀ ಆ ಊರಿನಲ್ಲಿ ನೇರವಾಗಿ ನ್ಯಾಯವನ್ನು ಪಡೆಯಬಹುದಾಗಿತ್ತು.

ಆ ಊರಿನ ಮಾರುಕಟ್ಟೆಯ ಮುಂದೆ ದೊಡ್ಡದೊಂದು ಗಂಟೆಯನ್ನು ನೇತುಹಾಕಿದ್ದರು. ಅದಕ್ಕೆ ಕಟ್ಟಿದ್ದ ಹಗ್ಗವೊಂದು ಕೈಗೆ ಎಟುಕುವಂತೆ ಇಳಿಬಿದ್ದಿರುತ್ತಿದ್ದಿತು. ನ್ಯಾಯ ಬೇಕೆನಿಸಿದವರು ಅಲ್ಲಿಗೆ ಬಂದು ಹಗ್ಗವನ್ನು ಎಳೆದು ಗಂಟೆಯನ್ನು ಬಾರಿಸುತ್ತಿದ್ದರು. ಶಬ್ದ ಕೇಳಿದೊಡನೆಯೇ ನ್ಯಾಯಾಧಿಕಾರಿಯೊಬ್ಬನು ಅಲ್ಲಿಗೆ ಬಂದು ವಿಚಾರಣೆ ನಡೆಸಿ,

ತಪ್ಪು ಮಾಡಿದವರನ್ನು ಶಿಕ್ಷೆಗೆ ಗುರಿ ಪಡಿಸಿ ಹೋಗುತ್ತಿದ್ದನು. ಯಾರು ಯಾವ ಸಮಯದಲ್ಲಿ ಬೇಕಾದರೂ ಹೀಗೆ ನ್ಯಾಯ ಪಡೆಯಬಹುದಾಗಿತ್ತು. ಈ ವ್ಯವಸ್ಥೆಯನ್ನು ಮಾಡಿದವನು ಮೇಲೆ ಹೇಳಿದ ರಿ–ಗಿಯೋವಾನ್ನಿ ಅರಸನೇ.

ಆ ಊರಿನಲ್ಲಿ ಅರಸನಿಂದ ನ್ಯಾಯವನ್ನು ಪಡೆಯದವರೇ ಇರಲಿಲ್ಲ. ಯಾರು ಒಂದು ಸಣ್ಣ ತಪ್ಪು ಮಾಡಿದರೂ ಸರಿಯೇ ಅವರಿಗೆ ದಂಡ ತಪ್ಪುತ್ತಿರಲಿಲ್ಲ. ನಷ್ಟಕ್ಕೆ, ಕಷ್ಟಕ್ಕೆ ಒಳಗಾದವರು ಹಿಂದೆ ಮುಂದೆ ನೋಡದೆ ನೇರವಾಗಿ ಮಾರುಕಟ್ಟೆಗೆ ಹೋಗಿ ಹಗ್ಗವನ್ನೆಳೆದು ಗಂಟೆಯನ್ನು ಬಾರಿಸಿಬಿಡುತ್ತಿದ್ದರು. ಒಡನೆಯೇ ನ್ಯಾಯಾಧಿಕಾರಿ ಬಂದು ವಿಚಾರಣೆಯನ್ನು ಆರಂಭಿಸುತ್ತಿದ್ದನು.

ಹೀಗೆ ಎಲ್ಲರೂ ಹಗ್ಗವನ್ನು ಎಳೆದು ಎಳೆದು ಹಗ್ಗ ಸವೆದು ಹೋಗಿ ಒಂದು ಬಾರಿ ಕಡಿದುಹೋಯಿತು. ಆಗ ದಾರಿಗನೊಬ್ಬನು ಪಕ್ಕದ ಬೇಲಿಯಿಂದ ದೊಡ್ಡದೊಂದು ಗಟ್ಟಿಯಾದ ಬಳ್ಳಿಯೊಂದನ್ನು ಕಿತ್ತು ಅದನ್ನು ಗಂಟೆಗೆ ಹಗ್ಗದಂತೆ ಕಟ್ಟಿಬಿಟ್ಟು ಹೋದನು. ಬೇರೆ ಹಗ್ಗವನ್ನು ಅಧಿಕಾರಿಗಳು ಕಟ್ಟಿಸುವವರೆಗೂ ಅದೇ ಇರಲೆಂದು ಊರಿನವರು ಅದನ್ನೇ ಉಪಯೋಗಿಸಲಾರಂಭಿಸಿದರು. ಈ ಬಳ್ಳಿಗೆ ಎಲೆಗಳೂ ಹೂಗಳೂ ಇದ್ದುದರಿಂದ ಚೆನ್ನಾಗಿಯೇ ಕಾಣುತ್ತಿದ್ದಿತು.

ಅದೇ ಊರಿನಲ್ಲಿ ಒಬ್ಬ ಶ್ರೀಮಂತನಿದ್ದ. ಅವನು ಪ್ರಾಯದಲ್ಲಿ ಬೇಟೆಯಾಡಿ, ಸೈನ್ಯಕ್ಕೆ ಸೇರಿ, ಸಿಪಾಯಿಯಾಗಿ ಶ್ರೀಮಂತನಾಗಿದ್ದ. ಅವನ ಬಳಿ ಹತ್ತಾರು ಕುದುರೆಗಳಿದ್ದುವು, ಹಲವಾರು ಬೇಟೆ ನಾಯಿಗಳಿದ್ದುವು. ಅವನ ಮನೆಯೇ ಅರಮನೆಯಂತೆ ಇದ್ದಿತು. ಅರಸನ ಆಸ್ಥಾನದಲ್ಲಿ ಕೂಡ ಅವನಿಗೆ

ಸನ್ಮಾನವಿದ್ದಿತು. ಆದರೆ ಮುದುಕನಾಗುತ್ತಾ ಬಂದಾಗ, ಏಕೋ ದುರಾಸೆ ಹೆಚ್ಚಿ ಜಿಪುಣನಾಗಿಬಿಟ್ಟ. ತನ್ನ ಬಳಿ ಇದ್ದ ಬೇಟೆ ನಾಯಿಗಳನ್ನೆಲ್ಲಾ ಮಾರಿಬಿಟ್ಟ. ಬೇಟೆಯಾಡುವುದನ್ನು ನಿಲ್ಲಿಸಿದ. ಕೆಲಸದವರನ್ನೆಲ್ಲಾ ಕಳುಹಿಸಿಬಿಟ್ಟ. ಮನೆ ಕೆಲಸಗಳನ್ನು ತಾನೇ ಮಾಡಲಾರಂಭಿಸಿದ. ತನ್ನ ಮನೆಯನ್ನೆಲ್ಲಾ ಬಾಡಿಗೆಗೆ ಕೊಟ್ಟಿದ್ದ. ತೋಟವನ್ನೆಲ್ಲಾ ಗುತ್ತಿಗೆಗೆ ಕೊಟ್ಟಿದ್ದ. ಊಟ ಮಾಡುವುದನ್ನು ಕಮ್ಮಿ ಮಾಡಿದ. ಹಳೆ ಬಟ್ಟೆಗಳನ್ನೇ ಹರಿದರೂ ತೇಪೆ ಹಾಕಿಕೊಂಡು ಉಡಲಾರಂಭಿಸಿದ. ಯಾರಿಗೂ ಇಷ್ಟೂ ಸಹಾಯ ಮಾಡುತ್ತಿರಲಿಲ್ಲ.ಆ ಊರಿನವರಿಗೆಲ್ಲಾ ಈ ಶ್ರೀಮಂತ ಜಿಪುಣನೆಂದೇ ಪ್ರಸಿದ್ಧನಾಗಿದ್ದ.

ತನ್ನ ದಿನದ ಓಡಾಟಕ್ಕೆಂದು ಒಂದೇ ಒಂದು ಕುದುರೆಯನ್ನು ಈ ಶ್ರೀಮಂತ ಇರಿಸಿಕೊಂಡಿದ್ದ. ಈ ಕುದುರೆ ಅವನ ಬಳಿ ಹಲವಾರು ವರ್ಷಗಳಿಂದ ಇದ್ದಿತು. ಅದನ್ನೇರಿಯೇ ಅವನು ಬೇಟೆಯಾಡುತ್ತಿದ್ದ.ಅದನ್ನೇರಿಯೇ ಯುದ್ಧಕ್ಕೆ ಹೋಗಿದ್ದ. ಅದೇ ಅವನ ನೆಚ್ಚಿನ ವಾಹನ. ಅವನನ್ನು ಬೇಕೆಂದೆಡೆಗೆ ಬೇಕೆಂದಾಗ ಹೊತ್ತು ಗಾಳಿಯಂತೆ ಹಾರಿ ಹೋಗುತ್ತಿದ್ದ ಈ ತೇಜಿ ಎಂದರೆ ಅವನಿಗೆ ಇಷ್ಟವಾಗಿದ್ದಿತು. ಅದು ಅವನಿಗೆ ತುಂಬ ಉಪಕಾರ ಮಾಡಿದ್ದಿತು.

ಆದರೆ ಮುದುಕನಾದ ಮೇಲೆ ಜಿಪುಣತನ ಒದಗಿ ಈ ಕುದುರೆಯನ್ನು ಸರಿಯಾಗಿ ನೋಡಿಕೊಳ್ಳುವುದನ್ನು ನಿಲ್ಲಿಸಿದ. ಕುದುರೆಯೂ ಈಗ ಮುದಿಯಾಗಿದ್ದಿತು. ಮೊದಲಿನಂತೆ ಅದಕ್ಕೆ ದಿನವೂ ಕೆಲಸವೂ ಇರಲಿಲ್ಲ. ಕೆಲಸವಿಲ್ಲದ ಕುದುರೆಗೆ ನಾನೇಕೆ ತಿಂಡಿ ಕೊಡಲಿ ಎಂದುಕೊಂಡ ಆ ಶ್ರೀಮಂತ ಅದನ್ನು ಮನೆಬಿಟ್ಟು ಓಡಿಸಿದ. ಛಳಿಗೆ ನಡುಗುತ್ತಾ ಹಸಿವೆಯಿಂದ ಸೋತು ಸೊರಗಿ ಈ ಕುದುರೆ ಬೀದಿ ಬೀದಿ ತಿರುಗಲಾರಂಭಿ

ಸಿತು. ಅಲ್ಲಿ ಇಲ್ಲಿ ಬಿದ್ದಿದ್ದ ಕಾಗದ ಕಸಗಳನ್ನೇ ತಿನ್ನುತ್ತಾ ಅಷ್ಟಿಷ್ಟು ಬೆಳೆದ ಹುಲ್ಲು, ಗಿಡ ಗೆಂಟೆಗಳನ್ನು ಮೇಯುತ್ತಾ ತಿರುಗುತ್ತಿದ್ದ ಈ ಕುದುರೆ ದಿನ ದಿನಕ್ಕೆ ಬಡವಾಯಿತು. ನೋಡುವುದಕ್ಕೆ ಕತ್ತೆಯಂತೆ ಕುಗ್ಗಿತು. ಶ್ರೀಮಂತನಾದರೋ ತನಗೆ ಮುಂಚೆ ಅಷ್ಟೊಂದು ಉಪಕಾರ ಮಾಡಿದ್ದ ಈ ಕುದುರೆಯ ಕಷ್ಟವನ್ನು ಮನಸ್ಸಿಗೇ ಹಚ್ಚಿಕೊಳ್ಳಲಿಲ್ಲ. ತಾನು ಎಲ್ಲಿಯಾದರೂ ಹೋಗಬೇಕಾದಾಗ ಮಾತ್ರ ಇದೇ ಕುದುರೆಯನ್ನು ಹುಡುಕಿ ಕರೆದುಕೊಂಡು ಬಂದು ಇದರ ಮೇಲೇರಿ ಹೋಗುತ್ತಿದ್ದ.

ಒಂದು ದಿನ ಈ ಕುದುರೆ ಬೀದಿ ಬೀದಿ ಅಲೆಯುತ್ತಾ ಮಾರುಕಟ್ಟೆಯ ಬಳಿ ಬಂದಿತು. ಎಲ್ಲಿಯೂ ತಿನ್ನಲು ಏನೂ ಸಿಕ್ಕದೆ ಮೇಲೆ ಹೇಳಿದ ನ್ಯಾಯದ ಗಂಟೆಗೆ ಬಳ್ಳಿಯನ್ನು ಕಟ್ಟಿದುದನ್ನು ಕಂಡು ಅದರ ಎಲೆಗಳನ್ನು ತಿನ್ನಲು ಬಂದಿತು. ಬಳ್ಳಿಗೆ ಬಾಯಿಟ್ಟು ಜಗ್ಗಿಸಿದೊಡನೆ ಗಂಟೆ ಠಣ್ಣೆಂದು ಶಬ್ದ ಮಾಡಿತು. ಅದನ್ನು ಕೇಳಿದೊಡನೆ ನ್ಯಾಯಾಧಿಕಾರಿ ಓಡಿ ಬಂದ. ಆಗ ನಡು ಮಧ್ಯಾಹ್ನದ ಬಿಸಿಲಿನ ಬೇಗೆ ಇದ್ದರೂ ಊರಿನವರೆಲ್ಲಾ ಬಂದು ನೆರೆದರು. ಈ ಹೊತ್ತಿನಲ್ಲಿ ಯಾರಿಗೆ ಯಾರಿಂದ ಏನು ಅನ್ಯಾಯವಾಗಿದೆಯೋ ತಿಳಿಯಬೇಕೆಂದು ಎಲ್ಲರ ಕುತೂಹಲ.

ಆದರೆ ಎಲ್ಲರೂ ಬಂದು ನೋಡಿದ್ದೇನು ? ಬಡ ಕುದುರೆ ಬಳ್ಳಿಯನ್ನೆಳೆದು ಗಂಟೆ ಬಾರಿಸುತ್ತಿದೆ! ಮೂಕ ಪ್ರಾಣಿಯೊಂದು ನ್ಯಾಯಕ್ಕಾಗಿ ಬಂದುದನ್ನು ಅವರು ನೋಡಿದುದು ಇದೇ ಮೊದಲು. ಅದು ಊರಿನ ಶ್ರೀಮಂತನ ಕುದುರೆಯೆಂದು ಎಲ್ಲರಿಗೂ ತಿಳಿದಿದ್ದಿತು. ಅವನು ಜಿಪುಣನೆಂದೂ ಎಲ್ಲರಿಗೂ ಗೊತ್ತಿದ್ದಿತು. ನೆರೆದವರು ಅವನ ವಿಷಯವಾಗಿ

ಹತ್ತು ಕಥೆಗಳನ್ನು ಹೇಳಿದರು. ಇಪ್ಪತ್ತು ಬಗೆಯಲ್ಲಿ ಆ ಕುದುರೆಯ ಬವಣೆಯನ್ನು ಬಣ್ಣಿಸಿದರು.

ನ್ಯಾಯಾಧಿಕಾರಿಯು ಆ ಶ್ರೀಮಂತನನ್ನು ಕರೆಸಿದನು. ಅವನ ಕುದುರೆಯು ನ್ಯಾಯದ ಗಂಟೆಯನ್ನು ಬಾರಿಸಿದುದಕ್ಕೆ ಕಾರಣವೇನೆಂದು ಕೇಳಲು ಶ್ರೀಮಂತನು ತನಗೆ ತಿಳಿಯದೆಂದನು. ನ್ಯಾಯಾಧಿಕಾರಿಯು ಅಷ್ಟಕ್ಕೇ ಅವನನ್ನು ಬಿಡಲಿಲ್ಲ. ಮೊದಲು ಗಟ್ಟಿಮುಟ್ಟಾಗಿ ಕಳಕಳೆಯಾಗಿದ್ದ ಕುದುರೆ ಈಗ ಬಡಕಲಾಗಿ ಕಳೆಗುಂದಿರುವುದು ಏಕೆಂದು ಕೇಳಿದನು. ಕುದುರೆಗೆ ತಿನಿಸು ಕೊಡದೆ,ತಂಗಲು ಎಡೆ ಕೊಡದೆ ಹೊರಗೆ ಹೊಡೆದಟ್ಟಿದುದು ಶ್ರೀಮಂತನ ತಪ್ಪೆಂದು ನ್ಯಾಯಾಧಿಕಾರಿ ವಾದಿಸಿದನು. ಶ್ರೀಮಂತನು ಸಿಟ್ಟಿಗೆದ್ದು "ನನ್ನ ಕುದುರೆ, ನನಗೆ ಇಷ್ಟ ಬಂದಂತೆ ಮಾಡುತ್ತೇನೆ, ನಿಮಗೇನು ?" ಎಂದು ಪ್ರತಿಯಾಗಿ ವಾದಿಸಿದನು.

ಆದರೆ ನ್ಯಾಯಾಧಿಕಾರಿ "ಅಯ್ಯಾ,ಶ್ರೀಮಂತ, ಈ ಗಾದೆ ಕೇಳಿದ್ದೀಯೋ—ಕುದುರೆ ಏರಿ ವೈಭವದಿಂದ ಹೋದ ಜಂಭ ಹಿಂದಿರುಗಿ ಬರುವಾಗ ಭಿಕ್ಷೆ ಬೇಡುತ್ತ ನಡದೇ ಬರುತ್ತದೆ, ಎಂದು ? ಶ್ರೀಮಂತನೆಂದು ಜಂಭ ಪಡಬೇಡ. ಅದರಿಂದ ನಿನಗೆ ಒಳ್ಳೆಯ ಹೆಸರು ಬಾರದು. ನಿನ್ನ ಪ್ರಾಯದಲ್ಲಿ ನಿನ್ನನ್ನು ಹೊತ್ತು ತಿರುಗಾಡಿ ನಿನಗೆ ಉಪಕಾರ ಮಾಡಿದ ಈ ಕುದುರೆಯನ್ನು ಈಗ ಮುದಿಯಾಗಿದೆಯೆಂದು ಹೊರಗೆ ಓಡಿಸಿದ್ದೀಯಾ? ಎಂಥ ಕೃತಜ್ಞ ನೀನು! ನಿನ್ನನ್ನು ತನ್ನ ಬಲವಿದ್ದಾಗ ಚೆನ್ನಾಗಿ ನೋಡಿಕೊಂಡ ಈ ಕುದುರೆಯನ್ನು ಈಗ ಅಷ್ಟೇ ಚೆನ್ನಾಗಿ ನೋಡಿಕೊಳ್ಳುವುದು ನಿನ್ನ ಕರ್ತವ್ಯ. ನೀನು ಹಾಗೆ ಮಾಡದೆ ಇದ್ದರೆ ಶಿಕ್ಷೆಗೆ ಗುರಿಯಾಗುತ್ತೀಯೆ" ಎಂದು ತೀರ್ಪನ್ನು ಕೊಟ್ಟನು.

ಶ್ರೀಮಂತನು ನಾಚಿಕೆಯಿಂದ ಮುಖ ತಗ್ಗಿಸಿದನು. ಅವನ ಜಿಪುಣತನವನ್ನು ತಿಳಿದಿದ್ದ ಊರಿನ ಜನರೆಲ್ಲಾ ಅವನಿಗೆ ಛೀಮಾರಿ ಹಾಕಿದರು. ಮರುಮಾತಾಡದೆ ಅವನು ಕುದುರೆಯನ್ನು ತನ್ನ ಮನೆಗೆ ಕರೆದೊಯ್ದನು. ಅಲ್ಲಿಂದ ಮುಂದೆ ಅದಕ್ಕೆ ತಿನಿಸು ಕೊಟ್ಟು ಲಾಯದಲ್ಲಿಯೇ ಇರಿಸಿಕೊಂಡು ಉಪಚಾರ ಮಾಡಲಾರಂಭಿಸಿದನು.

ಈ ಸುದ್ದಿ ಅರಸನ ಕಿವಿಗೂ ಬಿದ್ದಿತು. ತನ್ನ ರಾಜ್ಯದಲ್ಲಿ ಮನುಷ್ಯರಿಗೆ ಮಾತ್ರವಲ್ಲ, ಮೂಕ ಪ್ರಾಣಿಗಳಿಗೂ ನ್ಯಾಯ ದೊರಕುವುದೆಂದು ಅವನಿಗೆ ಸಂತೋಷವಾಯಿತು.

ಉತ್ತಮ ಮಕ್ಕಳ ಪುಸ್ತಕಗಳು

ನಾಡಿಗೆ ಐಬಿಎಚ್ ಪ್ರಕಾಶನದ ಕೊಡುಗೆ *

- ಗುಣಮಟ್ಟದಲ್ಲಿ ಯಾವ ವಿದೇಶಿ ಪ್ರಕಟನೆಗಳಿಗೂ ಸರಿಗಟ್ಟಬಲ್ಲವು
- ವಿಷಯ ನಿರೂಪಣೆಯಲ್ಲಿ ಸರಳತೆ
- ವಿನ್ಯಾಸದಲ್ಲಿ ವೈವಿಧ್ಯತೆ
- ವಸ್ತುನಿಷ್ಠೆಯಲ್ಲಿ ನಿಖರತೆ
- ಮನೋರಂಜನೆಗಷ್ಟೇ ಅಲ್ಲ ಮನೋವಿಕಾಸಕ್ಕೂ ಕೂಡ
- ಇತಿಹಾಸ, ಸಂಸ್ಕೃತಿ, ವಿಜ್ಞಾನ ಕಥೆಗಳು

ಮುಂತಾದ
ಅನೇಕ ಸರಣಿಗಳಲ್ಲಿ ....

ಉಚಿತ
ಪುಸ್ತಕಗಳ ಪಟ್ಟಿಗೆ
ಬರೆಯಿರಿ

IBH

ಐಬಿಎಚ್ ಪ್ರಕಾಶನ
ಗಾಂಧಿನಗರ
ಬೆಂಗಳೂರು 560 009